ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 9 ಸೋಮವಾರ 2024

ಸಂಪುಟ: 45 | ಸಂಚಿಕೆ: 232 | ಪುಟಗಳು: 10

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೇಕೆದಾಟು ಯೋಜನೆಗೆ ರಾಜ್ಯ ಸರ್ಕಾರದಿಂದ ಸಿದ್ಧತೆ

5,000 ಹೆಕ್ಟೇರ್ ಅರಣ್ಯ ಭೂಮಿ ಮುಳುಗಡೆ

- 7 ಸಾವಿರ ಹೆಕ್ಟೇರ್ ಪರ್ಯಾಯ ಭೂಮಿ ಗುರುತಿಸಿದ ಅಧಿಕಾರಿಗಳು
- ಶೀಘ್ರದಲ್ಲೇ ರಾಮನಗರ, ಮಂಡ್ಯ, ಚಾಮರಾಜನಗರ ಜಿಲ್ಲೆಗಳ ಭೂಮಿ ಸ್ವಾಧೀನ
- 5 ಗ್ರಾಮಗಳ 233 ಕುಟುಂಬ ಸ್ಥಳಾಂತರ ಬಗ್ಗೆ ನಿರ್ಧಾರ



ಬೆಂಗಳೂರು, ಡಿ.8– ಮೇಕೆದಾಟು ಯೋಜನೆಗೆ ಅಗತ್ಯವಿರುವ ಅರಣ್ಯ ಭೂಮಿ ಬದಲಿಗೆ ನೀಡಬೇಕಾದ ಪರ್ಯಾಯ ಭೂಮಿಯನ್ನು ಮೂರು ಜಿಲ್ಲೆ ವ್ಯಾಪ್ತಿಯಲ್ಲಿ ಗುರುತಿಸಲಾಗಿದ್ದು, ಕೆಲ ದಿನಗಳಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳೊಂದಿಗೆ ಸಭೆ ನಡೆಸಲು ಜಲಸಂಪನ್ಮೂಲ ಇಲಾಖೆ ನಿರ್ಧರಿಸಿದೆ.

ಬೆಂಗಳೂರಿಗೆ ಕುಡಿಯುವ ನೀರು ಪೂರೈಕೆಗೆ ಮೇಕೆದಾಟುವಿನಲ್ಲಿ ಸಮತೋಲನ ಅಣೆಕಟ್ಟು ನಿರ್ಮಾಣ ಯೋಜನೆಗೆ ಸಂಬಂಧಿಸಿದ ವಿಸ್ತೃತ ಯೋಜನಾ ವರದಿ (ಡಿಪಿಆರ್) ಈಗಾಗಲೇ ಸಲ್ಲಿಸಲಾಗಿದೆ ಅದರ ಜೊತೆಗೆ ಕೇಂದ್ರ ಅರಣ್ಯ ಸಚಿವಾಲಯದಿಂದ ಅನುಮತಿ ಸಂಬಂಧ ಪಟ್ಟ ದಾಖಲೆಗಳನ್ನೂ ಸಲ್ಲಿಸಲಾಗಿದೆ.

ಇದೀಗ ಮೇಕೆದಾಟು ಯೋಜನೆಗೆ ಅಗತ್ಯವಿರುವ ಮತ್ತು ಯೋಜನೆಯಿಂದ ಮುಳುಗಡೆಯಾಗಲಿರುವ 5 ಸಾವಿರ ಎಕರೆ ಅರಣ್ಯ ಭೂಮಿ ಬದಲಿಗೆ ನೀಡಬೇಕಾದ ಪರ್ಯಾಯ ಭೂಮಿಯನ್ನು ಈಗಾಗಲೇ ಗುರುತಿಸಲಾಗಿದೆ. ರಾಮನಗರ, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಈ ಭೂಮಿ ಗುರುತಿಸಲಾಗಿದ್ದು, ಅದನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸುವುದು ಹಾಗೂ ಭೂಮಿಗೆ ಬದಲಾಗಿ ಪರಿಹಾರ ನೀಡುವ ಸಂಬಂಧ ಆ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಸಭೆ ನಡೆಸಲು ನಿರ್ಧರಿಸಲಾಗಿದೆ.

ಮೇಕೆದಾಟು ಯೋಜನೆಗಾಗಿ ಕಾವೇರಿ ಅಭಯಾರಣ್ಯದ 4,776.67 ಹೆಕ್ಟೇರ್ ಭೂಮಿ ಹಾಗೂ ಸಂರಕ್ಷಿತಾರಣ್ಯದ 229.6 ಹೆಕ್ಟೇರ್ ಭೂಮಿ ಮುಳುಗಡೆಯಾಗಲಿದೆ. ಅದರ ಜತೆಗೆ ಜಲಾಶಯ ನಿರ್ಮಾಣ ಸೇರಿ ಮತ್ತಿತರ ಕಾರ್ಯಕ್ಕಾಗಿ ಒಟ್ಟಾರೆ 5,096.22 ಹೆಕ್ಟೇರ್ ಅರಣ್ಯ ಭೂಮಿ ಅವಶ್ಯಕತೆಯಿದೆ. ಈ ಅರಣ್ಯ ಭೂಮಿಗೆ ಬದಲಾಗಿ ರಾಮನಗರ, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆ ವ್ಯಾಪ್ತಿಯಲ್ಲಿ 7,404.62 ಹೆಕ್ಟೇರ್ ಸಿ ಅಂಡ್ ಡಿ ಭೂಮಿ ಹಾಗೂ ಡೀಮ್ಡ್ ಅರಣ್ಯ ಭೂಮಿ ಗುರುತಿಸಲಾಗಿದೆ. ಅದರಲ್ಲಿ ಶೇ.53ರಷ್ಟು ಭೂಮಿ ರಾಮನಗರ ಜಿಲ್ಲೆ ವ್ಯಾಪ್ತಿಯದ್ದಾಗಿದೆ.

ಒಟ್ಟಾರೆ ಪರ್ಯಾಯ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ಅರಣ್ಯ ಇಲಾಖೆಗೆ ಹಸ್ತಾಂತರಿಸುವ ಪ್ರಕ್ರಿಯೆ ಇನ್ನಷ್ಟೇ ಆರಂಭವಾಗಬೇಕಿದೆ. ಅದಕ್ಕೆ ಸಂಬಂಧಿಸಿ ಭೂಮಿ ■ 5ನೇ ಪುಟಕ್ಕೆ

ಇಂದಿನಿಂದ ಬೆಳಗಾವಿಯಲ್ಲಿ ಚಳಿಗಾಲದ ಅಧಿವೇಶನ

- 5 ವಿಧೇಯಕಗಳ ಮೇಲೆ ಸುದೀರ್ಘ ಚರ್ಚೆ
- ಸುವರ್ಣಸೌಧದೊಳಗೆ ಅನುಭವ ಮಂಟಪದ ವೈಭವ



ಚಳಿಗಾಲ ಅಧಿವೇಶನ ಹಿನ್ನೆಲೆ ಬೆಳಗಾವಿ ಸುವರ್ಣ ಸೌಧದಲ್ಲಿ ಪೊಲೀಸರು ಬಿಗಿ ಭದ್ರತೆ ಕೈಗೊಂಡಿರುವುದು.

ಬೆಳಗಾವಿ, ಡಿ.8– ಮುಡಾ, ವಾಲ್ಮೀಕಿ ನಿಗಮ, ವಕ್ಫ್ ಆಸ್ತಿ ವಿವಾದ, ಬಾಣಂತಿಯರ ಸಾವು ಪ್ರಕರಣ ಹೀಗೆ ಹಲವು ಅಸ್ತ್ರಗಳನ್ನು ಇಟ್ಟುಕೊಂಡು ಕಾಂಗ್ರೆಸ್ ಮೇಲೆ ಮುಗಿಬೀಳಲು ವಿರೋಧ ಪಕ್ಷದವರು ಸಜ್ಜಾಗಿದ್ದು, ನಾಳೆ (ಡಿ.8) ಬೆಳಗಾವಿಯಲ್ಲಿ ವಿಧಾನ ಮಂಡಲ ಚಳಿಗಾಲದ ಅಧಿವೇಶನ ಆರಂಭವಾಗಲಿದೆ.

ಬಿಜೆಪಿಯೊಳಗೆ ವಿಜಯೇಂದ್ರ ಬಣ ಮತ್ತು ಯತ್ನಾಳ್ ಬಣದ ಬಡಿದಾಟ ಸಾಗಿದೆ. ಬಿಜೆಪಿ ಅಸ್ತ್ರಗಳಿಗೆ ಕಾಂಗ್ರೆಸ್ ಕೊರಾನಾ ಅಸ್ತ್ರ ಜೊತೆಗೆ ಯತ್ನಾಳ್ ಬಣ ಬಡಿದಾಟವನ್ನು ತಿರುಗು ಬಾಣವಾಗಿ ಬಿಡಲು ಸಜ್ಜಾಗಿದೆ. ಬಿಜೆಪಿ ವಕ್ಫ್ ವಿಚಾರ ಮುಂದಿಟ್ಟರೆ, ಯತ್ನಾಳ್ ಪ್ರತ್ಯೇಕ ಹೋರಾಟವನ್ನೇ ಪ್ರಸ್ತಾಪಿಸಿ ತಿವಿಯಲು ಕಾಂಗ್ರೆಸ್ ಪ್ಲ್ಯಾನ್ ಮಾಡಿಕೊಂಡಿದೆ.

ನಾಳೆ ಅಧಿವೇಶನ ಆರಂಭಕ್ಕೆ ಮುನ್ನ ಇಂದು ಬೆಳಗಾವಿ ಸುವರ್ಣಸೌಧಕ್ಕೆ ಸ್ಪೀಕರ್ ಯು.ಟಿ. ಖಾದರ್ ಮತ್ತು ವಿಧಾನ ಸಭಾ ಸಭಾಪತಿ ಬಸವರಾಜ ಹೊರಟ್ಟಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಹತ್ತು ದಿನಗಳ ಚಳಿಗಾಲದ ಅಧಿವೇಶನಕ್ಕೆ ಕುಂದಾನಗರಿ ಬೆಳಗಾವಿ ಸಜ್ಜಾಗಿದೆ.

ಬೆಳಗಾವಿಯಲ್ಲಿ ಸೋಮವಾರ (ಡಿ.9)ದಿಂದ ಡಿ.20ರವರೆಗೆ ನಡೆಯಲಿರುವ ವಿಧಾನಮಂಡಲ ಅಧಿವೇಶನವು ಈ ಬಾರಿಯೂ ಕೂಡ ಮಾದರಿಯಾಗುವ ರೀತಿಯಲ್ಲಿ ನಡೆಯಲು ಎಲ್ಲರ ಸಹಕಾರ ಅಗತ್ಯವಿದೆ ಎಂದು ಕರ್ನಾಟಕ ವಿಧಾನಸಭೆ ಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.


ಸುವರ್ಣಸೌಧದ ಕೊಠಡಿ ಸಂಖ್ಯೆ 238ರಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿ, ಡಿ.9ರಂದು ಬೆಳಗ್ಗೆ 11 ರಿಂದ ಮೊದಲ ದಿನದ ಅಧಿವೇಶನವು ವಿಧ್ಯುಕ್ತವಾಗಿ ಆರಂಭವಾಗಲಿದೆ. ಇದಕ್ಕೂ ಮುಂಚಿತವಾಗಿ 10.30ಕ್ಕೆ ಐತಿಹಾಸಿಕ ಅನುಭವ ಮಂಟಪ ಸ್ಮರಣೆಯ ಬೃಹತ್ ತೈಲ ವರ್ಣದ ಚಿತ್ರದ ಅನಾವರಣವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆ ಮಾಡಲಿದ್ದಾರೆ. ವಿಧಾನಸಭೆಯ ಸಭಾಧ್ಯಕ್ಷರು, ವಿಧಾನ ಪರಿಷತ್ತಿನ ■ 5ನೇ ಪುಟಕ್ಕೆ

ಪಂಚಮಸಾಲಿ ಮೀಸಲಾತಿ ಹೋರಾಟಕ್ಕೆ ಶಾಕ್ ಕೊಟ್ಟ ಸರ್ಕಾರ

ಬೆಳಗಾವಿ, ಡಿ. 8– ಸುವರ್ಣಸೌಧದಲ್ಲಿ ನಾಳೆಯಿಂದ ವಿಧಾನಮಂಡಲ ಚಳಿಗಾಲದ ಅಧಿವೇಶನ ನಡೆಯಲಿದೆ. 2ಎ ಮೀಸಲಾತಿಗಾಗಿ ಆಗ್ರಹಿಸಿ ಡಿ.10 ರಂದು ಶಕ್ತಿಸೌಧಕ್ಕೆ ಟ್ರ್ಯಾಕ್ಟರ್ ಮೂಲಕ ಮುತ್ತಿಗೆ ಹಾಕಲು ಪಂಚಮಸಾಲಿ ಸಮುದಾಯ ಕರೆ ನೀಡಿತ್ತು. ಆದರೆ ಇದೀಗ ಡಿ.9, 10ರಂದು ಹೋರಾಟದ ವಾಹನ ಬೆಳಗಾವಿ ಪ್ರವೇಶ ನಿಷೇಧಿಸಲಾಗಿದೆ. ಆ ಮೂಲಕ ಪಂಚಮಸಾಲಿ ಮೀಸಲಾತಿ ಹೋರಾಟಕ್ಕೆ ಸರ್ಕಾರ ಶಾಕ್ ಕೊಟ್ಟಿದೆ.

ಬಸವ ಜಯಮೃತ್ಯುಂಜಯಶ್ರೀಗಳ ನೇತೃತ್ವದಲ್ಲಿ 2ಎ ಮೀಸಲಾತಿಗಾಗಿ ಪಂಚಮಸಾಲಿ ಸಮುದಾಯ ಹೋರಾಟಕ್ಕೆ ಸಿದ್ಧತೆ ಮಾಡಿಕೊಂಡಿದೆ. ಡಿ.10ರಂದು ಸುವರ್ಣಸೌಧಕ್ಕೆ ಟ್ರ್ಯಾಕ್ಟರ್ ಮುತ್ತಿಗೆಗೆ ನಿರ್ಧರಿಸಿದ್ದರು. ಆದರೆ ಹೋರಾಟಕ್ಕೆ ಬರುವ ಟ್ರ್ಯಾಕ್ಟರ್, ಕ್ರೂಸರ್ ವಾಹನಗಳಿಗೆ ನಿರ್ಬಂಧ ಹೇರಿ ಡಿಸಿ ಮೊಹಮ್ಮದ್ ರೋಷನ್ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ಅಧಿವೇಶನ ಹಿನ್ನೆಲೆ ಸಿಎಂ, ಡಿಸಿಎಂ, ಸಚಿವರು, ಶಾಸಕರು ಮತ್ತು ಅಧಿಕಾರಿಗಳು ಆಗಮಿಸುತ್ತಿದ್ದಾರೆ. ಜೊತೆಗೆ ಅಧಿವೇಶನ ವೀಕ್ಷಣೆಗೆ ಸಾರ್ವಜನಿಕರು ಮತ್ತು ಶಾಲಾ ಮಕ್ಕಳು ಆಗಮಿಸಲಿದ್ದು, ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಬಿಎನ್‌ಎಸ್‌ಎಸ್ ಕಾಯ್ದೆಯ ಕಲಂ 163ರ ಅಡಿ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.



ಬೆಳಗಾವಿಯಲ್ಲಿ ವಿಧಾನ ಮಂಡಲ ಚಳಿಗಾಲದ ಅಧಿವೇಶನ ಆರಂಭವಾಗುತ್ತಿರುವ ಹಿನ್ನೆಲೆ ಸ್ಪೀಕರ್ ಯು.ಟಿ.ಖಾದರ್ ಪರಿಶೀಲನೆ ನಡೆಸಿದರು.

ಕೊಡಗು ಜಿಲ್ಲಾ ಸಹಕಾರ ಬ್ಯಾಂಕ್‌ನಲ್ಲಿ

ನಕಲಿ ಚಿನ್ನ ಅಡಮಾನವಿಟ್ಟು 15.13 ಲಕ್ಷ ಸಾಲ ಪಡೆದ ಭೂಪ ಬಂಧನ



ಕೊಡಗು ಡಿಸಿಸಿ ಬ್ಯಾಂಕ್‌ನಲ್ಲಿ ಅಡಮಾನವಿಟ್ಟಿದ್ದ ನಕಲಿ ಚಿನ್ನದ ಬಳೆ.

6 ಬಾರಿ ನಕಲಿ ಚಿನ್ನವಿಟ್ಟು ಸಾಲ ಪಡೆದಿದ್ದವ 7ನೇ ಬಾರಿ ಸಿಕ್ಕಿಬಿದ್ದ

- ನಕಲಿ ಆಭರಣವಿಟ್ಟು 79 ಸಾವಿರ ರೂ. ಸಾಲ ಪಡೆದಿದ್ದ ಮತ್ತೊಂದು ಪ್ರಕರಣವೂ ಪತ್ತೆ
- ಇಬ್ಬರು ಆಭರಣ ಪರಿವೀಕ್ಷಕರು ಸೇರಿ ನಾಲ್ವರ ವಿರುದ್ಧ ಕ್ರಿಮಿನಲ್ ಕೇಸ್



ರಿಜ್ವಾನ್

ಮಡಿಕೇರಿ, ಡಿ.8–ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಲ್ಲಿ ನಕಲಿ ಚಿನ್ನ ಅಡಮಾನವಿಟ್ಟು ವ್ಯಕ್ತಿಯೋರ್ವ 15.13 ಲಕ್ಷ ರೂ. ಹಾಗೂ ಮತ್ತೋರ್ವ 79 ಸಾವಿರ ರೂ. ಸಾಲ ಪಡೆದಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದ್ದು, ಈ ಸಂಬಂಧ ಟೌನ್ ಪೊಲೀಸರು ಓರ್ವನನ್ನು ಬಂಧಿಸಿ, ಬ್ಯಾಂಕ್‌ನ ಇಬ್ಬರು ಆಭರಣ ಪರಿವೀಕ್ಷಕರು ಸೇರಿದಂತೆ ಒಟ್ಟು ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.


ವಿಚಿತ್ರವೆಂದರೆ ಒಬ್ಬನೇ ವ್ಯಕ್ತಿ ಕೊಡಗು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಲ್ಲಿ 6 ಬಾರಿ ಒಟ್ಟು 278.03 ಗ್ರಾಂ ನಕಲಿ ಚಿನ್ನ ಅಡಮಾನವಿಟ್ಟು 15.13 ಲಕ್ಷ ರೂ. ಸಾಲ ಪಡೆದಿದ್ದು, 7ನೇ ಬಾರಿ ನಕಲಿ ಚಿನ್ನ ಅಡಮಾನ ಇಡಲು ಬಂದಾಗ ಸಿಕ್ಕಿಬಿದ್ದಿದ್ದರೆ, ಮತ್ತೋರ್ವ 16.15 ಗ್ರಾಂ ನಕಲಿ ಚಿನ್ನ ಅಡಮಾನವಿಟ್ಟು 79 ಸಾವಿರ ರೂ. ಸಾಲ ಪಡೆದಿದ್ದಾನೆ. 7ನೇ ಬಾರಿಗೆ ನಕಲಿ ಚಿನ್ನ ಅಡಮಾನವಿಡಲು ಬಂದು ವಂಚಕ ಸಿಕ್ಕಿಬಿದ್ದ ನಂತರ ಬ್ಯಾಂಕ್ ಅಧಿಕಾರಿಗಳು ಪರಿಶೀಲನೆ ನಡೆಸಿದಾಗ ಪ್ರಕರಣ ಬೆಳಕಿಗೆ ಬಂದಿದೆ.

ಈ ಪ್ರಕರಣದಲ್ಲಿ ಕಕ್ಕಬ್ಬೆ ಕುಂಜಿಲ ಗ್ರಾಮದ ಕೆ.ಎ. ಮಹಮ್ಮದ್ ರಿಜ್ವಾನ್ ಎಂಬಾತ ಬಂಧಿತನಾಗಿದ್ದು, ಮತ್ತೋರ್ವ ಪ್ರಕರಣದ ಆರೋಪಿ ಎಮ್ಮೆಮಾಡುವಿನ ಬಿ.ಎ.ಮೂಸಾ ಬಂಧನಕ್ಕಾಗಿ ಪೊಲೀಸರು ಕಾರ್ಯಾಚರಣೆ ಕೈಗೊಂಡಿದ್ದಾರೆ. ವಂಚಕರಿಗೆ ಸಹಕರಿಸಿದ ಆರೋಪದ ಮೇರೆಗೆ ಬ್ಯಾಂಕ್‌ನ ಆಭರಣ ಪರಿವೀಕ್ಷಕರಾದ ಎಂ.ಎಂ.ಚರಣ್‌ಕುಮಾರ್ ಮತ್ತು ಇ.ಎಲ್. ಸುರೇಶ್ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಾಗಿದೆ.

ವಿವರ: ಕಕ್ಕಬ್ಬೆ ಕುಂಜಿಲ ಗ್ರಾಮದ ಕೆ.ಎ.ಮಹಮ್ಮದ್ ರಿಜ್ವಾನ್ ಎಂಬಾತ ಡಿ.4ರಂದು ಬ್ಯಾಂಕ್‌ನ ಮುಖ್ಯ ಕಚೇರಿ ಶಾಖೆಗೆ ಬಂದು 8 ಬಳೆಗಳನ್ನು ಅಡಮಾನ ವಿಡಲು ಪ್ರಯತ್ನಿಸಿದಾಗ ಅವೆಲ್ಲವೂ ನಕಲಿ ಎಂಬುದು ಪತ್ತೆಯಾಗಿದೆ. ಈತ ಈ ಹಿಂದೆಯೂ ಬ್ಯಾಂಕ್‌ನಲ್ಲಿ ಚಿನ್ನ ಅಡಮಾನವಿಟ್ಟು ಸಾಲ ಪಡೆದುಕೊಂಡಿರುವುದನ್ನು ಗಮನಿಸಿದ ಅಧಿಕಾರಿಗಳು, ಅದರ ಪರಿಶೀಲನೆಗೆ ಮುಂದಾಗಿದ್ದಾರೆ. ಈತ ಕಳೆದ ನ.25ರಂದು ಬ್ಯಾಂಕ್‌ನ ಕಾಲೇಜು ರಸ್ತೆಯ ಶಾಖೆಯಲ್ಲಿ 29.20 ಗ್ರಾಂ ತೂಕದ ಸರವನ್ನು ಅಡಮಾನವಿಟ್ಟು, 1.56 ಲಕ್ಷ ರೂ. ಸಾಲ ಪಡೆದಿದ್ದ. ನ.29ರಂದು ಅದೇ ಶಾಖೆಯಲ್ಲಿ 64.15 ಗ್ರಾಂ ತೂಕದ 8 ಬಳೆಗಳನ್ನು ಅಡಮಾನವಿಟ್ಟು 3.62 ಲಕ್ಷ, ಡಿ.3ರಂದು ಅದೇ ಶಾಖೆಯಲ್ಲಿ 64.37 ಗ್ರಾಂ ತೂಕದ 8 ಬಳೆ ಅಡಮಾನವಿಟ್ಟು 3.60 ಲಕ್ಷ ರೂ., ■ 5ನೇ ಪುಟಕ್ಕೆ

ಜೆಡಿಎಸ್ ಮುಗಿಸಲು ಬಿಜೆಪಿಯಿಂದ ಸ್ಕೆಚ್

- ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಯೋಗೇಶ್ವರ್ ಗೆಲುವಿಗೆ ಬಿಜೆಪಿ ಸಹಕರಿಸಿದೆ
- ಸಚಿವ ಕೃಷ್ಣಭೈರೇಗೌಡ ಹೊಸ ಬಾಂಬ್



ಕೃಷ್ಣಭೈರೇಗೌಡ

ಮೈಸೂರು, ಡಿ.8(ಆರ್‌ಕೆ)–ಜೆಡಿಎಸ್ ಮುಗಿಸಲು ಬಿಜೆಪಿ ವ್ಯವಸ್ಥಿತವಾಗಿ ಸ್ಕೆಚ್ ಹಾಕಿದೆ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ಹೊಸ ಬಾಂಬ್ ಸಿಡಿಸಿದರು.

ಟೂರ್ಸ್ ಆಫ್ ನೀಲಗಿರೀಸ್ ವತಿಯಿಂದ ಮೈಸೂರಿನ ಹೈವೇ ಸರ್ಕಲ್ ಬಳಿಯ ದಿ ಗ್ರ್ಯಾಂಡ್ ಮರ್ಕ್ಯೂರ್ ಹೋಟೆಲ್ ಬಳಿಯಿಂದ ಆಯೋಜಿಸಿದ್ದ ತಮಿಳುನಾಡಿನ ಊಟಿವರೆಗೆ ಸೈಕಲ್ ಜಾಥಾಗೆ ಚಾಲನೆ ನೀಡಿದ ಬಳಿಕ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಅವರು, ಚನ್ನಪಟ್ಟಣದಲ್ಲಿ ಈ ಹಿಂದೆ ತ್ರಿಕೋನ ಸ್ಪರ್ಧೆಯಲ್ಲಿ ಹೆಚ್.ಡಿ.ಕುಮಾರಸ್ವಾಮಿ 97 ಸಾವಿರ ಮತ ಪಡೆದಿದ್ದರು. ಈಗ ಬಿಜೆಪಿ ಮತ್ತು ಜೆಡಿಎಸ್ ಒಂದಾದ ಮೇಲೆ ಕನಿಷ್ಠ 10 ಸಾವಿರ ಮತಗಳು ಹೆಚ್ಚಾಗಬೇಕಿತ್ತು. ಆದರೆ ಉಪ ಚುನಾವಣೆಯಲ್ಲಿ ಸ್ಪರ್ಧಿಸಿದ ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರ್ ಸ್ವಾಮಿ ಕೇವಲ 85 ಸಾವಿರ ಮತ ಮಾತ್ರ ಪಡೆದಿದ್ದಾರೆ. ಹಾಗಾದರೆ ಬಿಜೆಪಿ ಮತಗಳು ಎಲ್ಲಿಗೆ ಹೋಯ್ತು ಉಪ ಚುನಾವಣೆಯಲ್ಲಿ ಬಿಜೆಪಿಯ ಒಂದು ಮತ ಕೂಡ ಜೆಡಿಎಸ್‌ಗೆ ಬಂದಿಲ್ಲ ಎಂದರು.

ಬಿಜೆಪಿಯವರು ಉದ್ದೇಶಪೂರ್ವಕವಾಗಿಯೇ ಕುಮಾರಸ್ವಾಮಿ ಮಗನನ್ನು ಚನ್ನಪಟ್ಟಣ ಉಪ ಚುನಾವಣೆಯಲ್ಲಿ ನಿಲ್ಲಿಸಿ ಅವರ ಮತವನ್ನು ಕಾಂಗ್ರೆಸ್‌ಗೆ ಹಾಕಿದ್ದಾರೆ. ಕುಮಾರಸ್ವಾಮಿ ಸ್ಪರ್ಧಿಸಿದ್ದಾಗ 97 ಸಾವಿರ ಮತ ಜೆಡಿಎಸ್‌ಗೆ ಬಂದಿತ್ತು ಅಂದ ಮೇಲೆ ಹೊಂದಾಣಿಕೆ ಆದ ಮೇಲೆ ಮತಗಳು ಹೆಚ್ಚಾಗಬೇಕು ಅಲ್ಲವೇ ಎಂದು ಪ್ರಶ್ನಿಸಿದ ಅವರು, ಜೆಡಿಎಸ್ ಮತಗಳು ಹೇಗೆ 87 ಸಾವಿರಕ್ಕೆ ಕುಸಿಯಿತು. ಉಪ ಚುನಾವಣೆಯಲ್ಲಿ ■ 5ನೇ ಪುಟಕ್ಕೆ

ಬಾಲ ಕಾರ್ಮಿಕತೆ ನಿರ್ಮೂಲನೆಗಾಗಿ ಸಹಾಯವಾಣಿ

ಮೈಸೂರು, ಡಿ.8–ಕಾರ್ಮಿಕ ಇಲಾಖೆ ವತಿಯಿಂದ ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸುವ ಸಲುವಾಗಿ ಮಕ್ಕಳ ಸಹಾಯವಾಣಿ ಅಥವಾ ಕಾರ್ಮಿಕ ಸಹಾಯವಾಣಿ ತೆರೆಯಲಾಗಿದೆ. ಸಾರ್ವಜನಿಕರು ತಮ್ಮ ಸುತ್ತಮುತ್ತಲ ಪ್ರದೇಶಗಳಲ್ಲಿ, ಅಂಗಡಿ, ವಾಣಿಜ್ಯ ಸಂಸ್ಥೆಗಳು, ಹೋಟೆಲ್‌ಗಳು, ಗ್ಯಾರೇಜ್‌ಗಳು, ವರ್ಕ್‌ಶಾಪ್‌ಗಳು, ಮನೆಗಳು, ರಸ್ತೆ ಬದಿಯಲ್ಲಿ ಬಾಲಕಾರ್ಮಿಕರು, ಕಿಶೋರ ಕಾರ್ಮಿಕರು, ಭಿಕ್ಷಾಟಣೆ ಮಾಡುವ ಮಕ್ಕಳು ಹಾಗೂ ಪೆನ್ನು–ಪೆನ್ಸಿಲ್, ಇತರೆ ವಸ್ತುಗಳನ್ನು ಮಾರಾಟ ಮಾಡುವ ಮಕ್ಕಳು ಕಂಡಬಂದರೆ **ಮಕ್ಕಳ ಸಹಾಯವಾಣಿ ಸಂಖ್ಯೆ 1098** ಅಥವಾ **ಕಾರ್ಮಿಕ ಸಹಾಯವಾಣಿ ಸಂಖ್ಯೆ 155214** ಅಥವಾ ಸ್ಥಳೀಯ ಪೊಲೀಸ್ ಠಾಣೆ ಹಾಗೂ ಪೊಲೀಸ್ ಇಲಾಖೆ, ಕಾರ್ಮಿಕ ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ–ಮಕ್ಕಳ ಅಭಿವೃದ್ಧಿ ಇಲಾಖೆ, ಕಂದಾಯ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗೂ ಇತರೆ ಅಧಿಕಾರಿಗಳನ್ನು ಸಂಪರ್ಕಿಸಿ ದೂರು ನೀಡಬಹುದು.

ಬದರಿನಾಥ ಕ್ಷೇತ್ರದ ಮೇಲೆ ಹವಾಮಾನ ಬದಲಾವಣೆ ಪರಿಣಾಮ: 6 ತಿಂಗಳಿನಿಂದ ಹಿಮಪಾತವೇ ಇಲ್ಲ

ಬದರಿನಾಥ್,ಡಿ.8– ಹವಾಮಾನ ಬದಲಾವಣೆ ಬದರಿನಾಥ ಕ್ಷೇತ್ರದ ಮೇಲೆ ಪರಿಣಾಮ ಉಂಟುಮಾಡಿದೆ. ಬದರಿನಾಥ ದೇವಾಲಯದ ಅರ್ಚಕರು ಹಾಗೂ ಹವಾಮಾನ ತಜ್ಞರು ಕ್ಷೇತ್ರದ ಮೇಲೆ ಉಂಟಾಗಿರುವ ಪರಿಣಾಮದ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ಕ್ಷೇತ್ರದಲ್ಲಿ ಹಿಮಪಾತದ ಕಾರಣದಿಂದ 6 ತಿಂಗಳ ಕಾಲ ದೇವಾಲಯ ಬಂದ್ ಆಗಿರುತ್ತದೆ. ಆದರೆ ಈ ಬಾರಿ ಡಿಸೆಂಬರ್ ವರೆಗೂ ಈ ಪ್ರದೇಶದಲ್ಲಿ ಹಿಮಪಾತವೇ ಇಲ್ಲದಂತಾಗಿರುವುದು ಎಲ್ಲರ ಆತಂಕಕ್ಕೆ ಕಾರಣವಾಗಿದೆ. ಈ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಪರಿಸರ ಸಂರಕ್ಷಣೆಯ ಗುರಿಯನ್ನು ಹೊಂದಿರುವ ವೈಜ್ಞಾನಿಕವಾಗಿ ಆಧಾರಿತ ಅಭಿವೃದ್ಧಿ ಉಪಕ್ರಮಗಳ ತುರ್ತು ಅಗತ್ಯವನ್ನು ತಜ್ಞರು ಒತ್ತಿ ಹೇಳಿದ್ದಾರೆ.

ಬದರಿನಾಥ ದೇವಾಲಯದ ದ್ವಾರಗಳನ್ನು ಮುಚ್ಚಿ ಮೂರು ವಾರಗಳು ಕಳೆದರೂ ಬದ್ರಿಪುರಿಯಲ್ಲಿ ಹಿಮಪಾತವಾಗಿಲ್ಲ. ದೇವಸ್ಥಾನದ ಅರ್ಚಕರು ಈ ಬಗ್ಗೆ ಕಳವಳ ವ್ಯಕ್ತಪಡಿಸಲು ಆರಂಭಿಸಿದ್ದು, ಬದ್ರಿಧಾಮ್‌ನಲ್ಲಿ ಅತಿರೇಕದ ವಾಹನಗಳ ಸಂಚಾರ ಮತ್ತು ಸರ್ವ ಋತು ರಸ್ತೆಗಳ ನಿರ್ಮಾಣ ಈ ಪರಿಸ್ಥಿತಿಗೆ ಕೊಡುಗೆ ನೀಡಿರುವ ಅಂಶಗಳಾಗಿವೆ. ಈ ವಿಷಯದ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಸುವುದು ಅತ್ಯಗತ್ಯ" ಎಂದು ಹೇಳಿದ್ದಾರೆ.

ನಾಳೆ ತಹಫುಜ್-ಇ-ಇಮಾನ್ ಸಮ್ಮೇಳನ

ಮೈಸೂರು,ಡಿ.8–ಮೈಸೂರಿನ ಅಮೀನ್ ಎಜುಕೇಷನಲ್ ಅಂಡ್ ವೆಲ್‌ಫೇರ್ ಟ್ರಸ್ಟ್ ಮತ್ತು ಬೆಂಗಳೂರಿನ ಅಹಲೆ ಸುನ್ನತ್ ಜಮಾತ್–ಓ–ಸಿಲ್‌ಸಿಲ–ಇ–ಅಶ್ರಫಿಯ ಜಂಟಿಯಾಗಿ ಡಿ.10ರಂದು ತಹಫುಜ್–ಇ–ಇಮಾನ್ ಸಮ್ಮೇಳನವನ್ನು ಮೈಸೂರು ರಸ್ತೆಯಲ್ಲಿರುವ ಜಾದೀದ್ ಈದಿಗಾದಲ್ಲಿ ಏರ್ಪಡಿಸಲಾಗಿದೆ.

ಸಮ್ಮೇಳನವು ಎಸ್.ಎಂ.ಸರ್ವರ್ ಬೇಗ್, ಮೊಹಮ್ಮದ್ ಅಯೂಬ್ ಪಾಷ ಅಶ್ರಫಿ, ಸೈಯದ್ ಮಸೂದ್ ಅಶ್ರಫಿ, ಅಬ್ದುಲ್ ರಬ್ ಅಶ್ರಫಿ ಅವರ ಆಶ್ರಯದಲ್ಲಿ ನಡೆಯಲಿದೆ. ಸಮ್ಮೇಳನ ಮುಖ್ಯ ಭಾಷಣಕಾರರಾಗಿ ಅಂತರರಾಷ್ಟ್ರೀಯ ಇಸ್ಲಾಮಿಕ್ ವಿದ್ವಾಂಸರಾದ ಸೂಫಿ ಸಂತ ಹಜರತ್ ಸೈಯದ್ ಮೊಹಮ್ಮದ್ ಹಶ್ಮಿ ಮಿಯಾನ್ ಅಶ್ರಫಿ–ಓ–ಜೀಲಾನಿ ಸಾಹೆಬ್, ಮುತಾವಲಿ–ಓ–ಸಜ್ಜದ ನಷೀನ್, ದರ್ಗಾ ಹುಝೂರ್ ಮೊಹ್‌ದೀಸ್–ಓ–ಆಝಮ್, ಕಚೂಚ ಷರೀಫ್, ಉತ್ತರಪ್ರದೇಶ ಮತ್ತು ಹುಝೂರ್ ತಾಜ್–ಉಲ್–ಮಾ–ಮೌಲಾನಾ ಹಾಫಿಜ್ ಖಾರಿ ಸೈಯದ್ ಮೊಹಮ್ಮದ್ ನೂರಾನಿ ಮಿಯಾನ್ ಅಶ್ರಫಿ–ಓ–ಜೀಲಾನಿ, ಉಪ ಸಜ್ಜದ ನಷೀನ್, ದರ್ಗಾ ಹುಝೂರ್ ಮೊಹ್‌ದೀಸ್–ಓ–ಆಝಮ್, ಕಚೂಚ ಷರೀಫ್, ಉತ್ತರ ಪ್ರದೇಶ ಅವರು ತಹಫುಜ್–ಇ–ಇಮಾನ್ ಕುರಿತು ಮಾತನಾಡಲಿದ್ದಾರೆ. ಷಕೀಲ್ ಆರಿಫ್ ಸಾಹೆಬ್, ಫಾರೂಖ್ ಅಬಾದ್, ಉತ್ತರ ಪ್ರದೇಶ, ಮೌಲಾನಾ–ಓ–ಖಾರಿ ಮೊಹಮ್ಮದ್ ಹಾರೂನ್ ಅಶ್ರಫಿ ಸಾಬ್, ಖಾಜಿ ಸಿಟಿ ಅನಂತ್‌ಪುರ ಭಾಗವಹಿಸಲಿದ್ದಾರೆ. ಸೈಯದ್ ಇಮ್ರಾನ್ ಮುಸ್ತಫಾ ಹೈದರಾಬಾದಿ, ಮೊಹಮ್ಮದ್ ಮೊಹಿಯುದ್ದೀನ್ ಖಾದ್ರಿ, ಬೆಂಗಳೂರು ಅವರಿಂದ ಪವಿತ್ರ ಕುರಾನ್ (ಕಿರತ್) ಮತ್ತು ಪ್ರವಾದಿ ಮೊಹಮ್ಮದ್ ಅವರ ಶ್ಲೋಕಗಳ ಪಠಣದೊಂದಿಗೆ ಸಮ್ಮೇಳನ ಪ್ರಾರಂಭವಾಗುತ್ತದೆ.

ಪೌರಕಾರ್ಮಿಕರ ನಿವಾಸಿಗಳಿಗೆ ಕಂಬಳಿ ವಿತರಿಸಿ ಡಾ.ಅಂಬೇಡ್ಕರ್ ಪರಿನಿರ್ವಾಣ ದಿನ ಆಚರಣೆ



ಪೌರಕಾರ್ಮಿಕರ ನಿವಾಸಿಗಳಿಗೆ ಕಂಬಳಿ ವಿತರಿಸಲಾಯಿತು.

ಮೈಸೂರು, ಡಿ. 8–ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದ ಆವರಣದಲ್ಲಿ ಜೀವಧಾರ ರಕ್ತನಿಧಿ ಕೇಂದ್ರ ಹಾಗೂ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ವತಿಯಿಂದ ಅಂಬೇಡ್ಕರ್ ಮಹಾ ಪರಿನಿರ್ವಾಣ ದಿನಾಚರಣೆ ಅಂಗವಾಗಿ ಪೌರಕಾರ್ಮಿಕರ ನಿವಾಸಿಗಳಿಗೆ ಕಂಬಳಿ ವಿತರಿಸಲಾಯಿತು.

ಬಳಿಕ ಮಾತನಾಡಿದ ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ದೇಶದ ಶೋಷಿತರಿಗೆ ಸಮಾನತೆ ನೀಡಲು ಜೀವನವನ್ನೇ ಮುಡಿಪಾಗಿಟ್ಟ ಡಾ.ಅಂಬೇಡ್ಕರ್ ಹೃನ್ಮನಗಳಲ್ಲಿ ಸದಾ ಜೀವಂತ. ದೇಶ, ವಿದೇಶಗಳಲ್ಲಿ ಶಿಕ್ಷಣ ಪಡೆದು ಶೋಷಿತರ ಸಮಾನತೆಗಾಗಿ ಶಾಸನಬದ್ಧ ಹಕ್ಕು ನೀಡಲು ಸಂವಿಧಾನ ರಚಿಸಿದರು. ಹಣ, ಅಧಿಕಾರದ ಲಾಲಸೆಗೊಳಗಾಗದೆ ನಿಸ್ವಾರ್ಥ ಸೇವೆ ಸಲ್ಲಿಸಿದರು. ವಿಶ್ವ ಸಂಸ್ಥೆ ಅವರ ಜನ್ಮ ದಿನಾಚರಣೆಯನ್ನು ವಿಶ್ವ ಜ್ಞಾನ ದಿನಾಚರಣೆಯನ್ನಾಗಿ ಆಚರಿಸಲು ಘೋಷಣೆ ಮಾಡಿದೆ ಅವರನ್ನು ವಿಶ್ವ ಗುರುಗಳನ್ನಾಗಿ ಸ್ವೀಕರಿಸುವ ಮನಸ್ಸುಗಳು ಹುಟ್ಟಿಕೊಳ್ಳ ಬೇಕಾಗಿದೆ ಎಂದರು. ಹಾರೋಹಳ್ಳಿ ತಾಲೂಕು ಪಂಚಾಯಿತಿ ಸದಸ್ಯರಾದ ಸುರೇಶ್, ಉಮೇಶ್, ಮಮತಾ, ಸೂರಜ್, ಸದಾಶಿವ, ಚಂದ್ರು, ಇನ್ನಿತರರು ಹಾಜರಿದ್ದರು.

ಸ್ನೇಹಿತರ ನಡುವೆ ಜಗಳ; ಅಂತಿಮವಾಗಿ ಒಬ್ಬನ ಕೊಲೆ

ಮೈಸೂರು, ಡಿ.8(ಎಂಕೆ)– ಕ್ಷುಲ್ಲಕ ಕಾರಣಕ್ಕೆ ಸ್ನೇಹಿತರ ನಡುವೆ ಜಗಳವಾಗಿ ಒಬ್ಬನ ಕೊಲೆಯಾಗಿರುವ ಘಟನೆ ಮೈಸೂರಿನ ಉದಯಗಿರಿಯಲ್ಲಿ ಶನಿವಾರ ಬೆಳಗಿನ ಜಾವ ನಡೆದಿದೆ. ಉದಯಗಿರಿ ಬೀಡಿ ಕಾಲೊನಿಯ ನಿವಾಸಿ ಮುದಾಸಿರ್ ಪಾಷಾ(34) ಕೊಲೆಯಾದ ವ್ಯಕ್ತಿ. ತನ್ನ ಸ್ನೇಹಿತ ರಿಜ್ವಾನ್ ಜೊತೆಗೆ ಕೂಲಿ ಕೆಲಸ ಮಾಡಿಕೊಂಡಿದ್ದು, ಶುಕ್ರವಾರ ರಾತ್ರಿ ಮದ್ಯ ಸೇವಿಸಿ ಬೀಡಿ ಕಾಲೊನಿಯ ಕೆಸಿಬಿ ಸಮುದಾಯ ಭವನದ ಬಳಿ ಮಲಗಿದ್ದರು. ತಡರಾತ್ರಿ ಇಬ್ಬರ ನಡುವೆ ಕ್ಷುಲ್ಲಕ ವಿಚಾರಕ್ಕೆ ಗಲಾಟೆ ಆಗಿದ್ದು, ಬೆಳಗಿನ ಜಾವ 3 ಗಂಟೆ ಸುಮಾರಿಗೆ ಸಿಮೆಂಟ್ ಇಟ್ಟಿಗೆಯನ್ನು ರಿಜ್ವಾನ್ ತನ್ನ ಸ್ನೇಹಿತ ಮುದಾಸಿರ್ ಪಾಷಾ ತಲೆ ಮೇಲೆ ಹಾಕಿದ್ದಾನೆ. ಪರಿಣಾಮ ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಮೃತನ ತಾಯಿ ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಾಗಿದ್ದು, ಆರೋಪಿಯನ್ನು ಉದಯಗಿರಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ನಿಧನ



ಬಿ.ಆರ್.ದಿನೇಶ್

ಮೈಸೂರು,ಡಿ.8–ಮೈಸೂರಿನ ವಿಜಯನಗರ 4ನೇ ಹಂತದ ನಿವಾಸಿ, ವಕೀಲ ಬಿ.ಆರ್.ದಿನೇಶ್(45) ಅವರು ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ರಾತ್ರಿ ನಿಧನರಾದರು. ಅವರು ತಂದೆ–ತಾಯಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅರಕಲಗೂಡು ತಾಲೂಕಿನ ಸ್ವಗ್ರಾಮ ಬಿದರೂರಿನಲ್ಲಿ ಸೋಮವಾರ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ನಿಧನಕ್ಕೆ ಮೈಸೂರು ವಕೀಲರ ಸಂಘ ಸಂತಾಪ ಸೂಚಿಸಿದೆ.



ಮಂಡೇಪಂಡ ಸೀತಮ್ಮ

ಮೈಸೂರು, ಡಿ.8–ಮೈಸೂರಿನ ಸಿದ್ಧಾರ್ಥನಗರ ನಿವಾಸಿ ನಿವೃತ್ತ ತಹಸೀಲ್ದಾರ್ ದಿವಂಗತ ಮಂಡೇಪಂಡ ಬಿ.ಚೆಂಗಪ್ಪ ಅವರ ಪತ್ನಿ ಮಂಡೇಪಂಡ ಸೀತಮ್ಮ(ತಾಮನೆ ಇಟ್ಟೀರ) ಭಾನುವಾರ ನಿಧನರಾದರು. ಅವರಿಗೆ 91 ವರ್ಷ ವಯಸ್ಸಾಗಿತ್ತು. ಮೃತರು ಪುತ್ರ ಎಂ.ಸಿ.ಕುಶಾಲಪ್ಪ, ಪುತ್ರಿಯರಾದ ಯಶೋಧ, ಸುಧಾ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಸೋಮವಾರ 1.30ಕ್ಕೆ ಚಾಮುಂಡಿಬೆಟ್ಟ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಮೈಸೂರಿನ ಶ್ರೀ ಕಾವೇರಿ ಕೊಡವ ಅಸೋಸಿಯೇಷನ್ ಸಂತಾಪ ಸೂಚಿಸಿದೆ.

ಸೈನಿಕರು ರಾಜಕೀಯಕ್ಕೆ ಬರುವ ಅವಶ್ಯಕತೆ ಇದೆ

ನೇವಲ್ ಡೇ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಅಭಿಮತ



ನೌಕಾಪಡೆ ದಿನದ ಅಂಗವಾಗಿ ನೇವಲ್ ವೆಟರನ್ ಅಸೋಸಿಯೇಷನ್‌ನಿಂದ ಆಯೋಜಿಸಿದ್ದ ನೇವಲ್ ಡೇ ಕಾರ್ಯಕ್ರಮದಲ್ಲಿ ಇಂಡೋ ಪಾಕ್ ಯುದ್ಧದಲ್ಲಿ ಪಾಲ್ಗೊಂಡಿದ್ದ ಮಾಜಿ ಸೈನಿಕ ವೆಟರನ್ ಎ.ಕೆ.ಶಿವನ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಡಿ.8(ಜಿಎ)–ದೇಶದ ನಿಜವಾದ ನಾಯಕರಾದ ಸೈನಿಕರು ರಾಜಕೀಯಕ್ಕೆ ಬರುವ ಅವಶ್ಯಕತೆ ಇದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಅಭಿಪ್ರಾಯಪಟ್ಟರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನೌಕಾಪಡೆಯ ದಿನದ ಅಂಗವಾಗಿ ನೇವಲ್ ವೆಟರನ್ ಅಸೋಸಿಯೇಷನ್ ವತಿಯಿಂದ ಆಯೋಜಿಸಿದ್ದ ನೇವಲ್ ಡೇ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾನು ನಿವೃತ್ತ ಯೋಧನಾಗಿದ್ದು, ಸೈನಿಕರು ನಿವೃತ್ತರಾದ ನಂತರ ಜೀವನ ಸಾಗಿಸುವುದು ಎಷ್ಟು ಕಷ್ಟ, ಸಮಾಜದಲ್ಲಿ ನಮ್ಮನ್ನು ಕೇಳುವವರೇ ಇರುವುದಿಲ್ಲ. ಆದ್ದರಿಂದ ಸೈನಿಕರು ರಾಜಕೀಯಕ್ಕೆ ಬರಬೇಕು. ಅದರ ಅವಶ್ಯಕತೆ ಇದೆ ಎಂದರು.

ದೇಶದಲ್ಲಿ ಮೊದಲು ಸೈನಿಕನಾಗಿ ಕರ್ತವ್ಯ ನಿರ್ವಹಿಸಿ ಈಗ ವಿಧಾನ ಪರಿಷತ್ ಸದಸ್ಯನಾಗಿ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಪಡೆದೆ. ಈಗ ಲೋಕಸಭೆಯಲ್ಲಿಯೂ ಒಬ್ಬರು ಇದ್ದಾರೆ. ನಾನು ಎಂಎಲ್‌ಸಿ ಆಗಲು ಸೇನೆ ಭದ್ರ ಬುನಾದಿಯಾಗಿದೆ. ಇಂದು ವಿಧಾನಸಭೆಯಲ್ಲಿ ವಿಷಯ ಚರ್ಚಿಸಲು ಸ್ಪೀಕರ್‌ಗೆ ಅವಕಾಶ ಕೇಳಿದ ತಕ್ಷಣ ಮಾಜಿ ಸೈನಿಕ ಎಂದು ಹೆಚ್ಚು ಅವಕಾಶ ನೀಡುತ್ತಾರೆ ಎಂದರು.

1971ರ ಯುದ್ಧದಲ್ಲಿ ಸೇವೆ ಸಲ್ಲಿಸಿರುವ ಮಾಜಿ ಸೈನಿಕರನ್ನು ಇಂದು ಅಭಿನಂದಿಸುತ್ತಿರುವುದು ಸಂತಸದ ಸಂಗತಿ. ಆದರೆ, ಸೈನಿಕರ ಸಾಧನೆ, ಪರಾಕ್ರಮವನ್ನು ಜನರಿಗೆ ತಿಳಿಸಲು ಬೈಕ್, ಕಾರು ರ್‍ಯಾಲಿಗಳನ್ನು ಮಾಡಿ ಜನರಲ್ಲಿ ಜಾಗೃತಿ ಮೂಡಿಸಿ, ನಮ್ಮ ಒಗ್ಗಟ್ಟು ಪ್ರದರ್ಶನ ಮಾಡಿದರೆ ಯುವಕರಲ್ಲಿ ಸ್ಫೂರ್ತಿ ಮೂಡಿಸಿದಂತೆ ಆಗುತ್ತದೆ. ಹಾಗೇ ಅಧಿಕಾರಿಗಳು ಸಮಸ್ಯೆಗಳ ಸಂದರ್ಭದಲ್ಲಿ ಮಾಜಿ ಸೈನಿಕರಿಗೂ ಸಂಘವಿದೆ ಎಂಬ ಭಯವಿರುತ್ತದೆ ಎಂದರು.

ಎಲ್ಲಾ ಹಂತದ ಮಾಜಿ ಸೈನಿಕರಿಗೆ ಜಮೀನು ನೀಡಬೇಕು. ತೆರಿಗೆಯಲ್ಲಿ ರಿಯಾಯಿತಿ ನೀಡಬೇಕು. ನಿವೃತ್ತರಾದ ಸೈನಿಕರಿಗೆ ಅವರ ಊರಿನಲ್ಲಿಯೇ ವಿವಿಧ ಇಲಾಖೆಯಲ್ಲಿ ಕೆಲಸ ನೀಡಬೇಕೆಂದು ಈಗಾಗಲೇ ಆಗ್ರಹಿಸಿದ ಹಿನ್ನೆಲೆಯಲ್ಲಿ ಎಲ್ಲವೂ ಸಾಕಾರಗೊಂಡಿದೆ. ಮತ್ತೊಂದೆಡೆ ಪ್ರಧಾನಿ ಮೋದಿ ಅವರು ಒನ್ ನೇಷನ್ ಒನ್ ಪೆನ್ಷನ್ ಯೋಜನೆಯಿಂದ ಸಾಕಷ್ಟು ಅನುಕೂಲವಾಗಿದೆ ಎಂದರು.

ಕಾರ್ಯಕ್ರಮದಲ್ಲಿ 1965 ಮತ್ತು 1971ರ ಇಂಡೋ ಪಾಕ್ ಯುದ್ಧದಲ್ಲಿ ಪಾಲ್ಗೊಂಡಿದ್ದ ಮಾಜಿ ಸೈನಿಕ ವೆಟರನ್ ಎ.ಕೆ.ಶಿವನ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ರಿಯರ್ ಅಡ್ಮಿರಲ್ ರವಿ ಗಾಯಕ್ವಾಡ್, ಲೆಫ್ಟಿನೆಂಟ್ ಸಿಡಿಆರ್ ಸರ್ಜನ್ ಪುಷ್ಪ ಗಾಯಕ್‌ವಾಡ್, ನೇವಲ್ ವೆಟರನ್ ಅಸೋಸಿಯೇಷನ್ ಅಧ್ಯಕ್ಷ ಗಜಾನನ ಟಿ.ಭಟ್, ಉಪಾಧ್ಯಕ್ಷ ಉತ್ತಪ್ಪ, ನವೀನ್, ಚಂದ್ರ ಕುಮಾರ್, ಸಂಜಯ್ ಪ್ರಭು ಇದ್ದರು.

ಮುಡಾ ಹಗರಣ ರೂವಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಡಿ.19ರಿಂದ ಮೈಸೂರಲ್ಲಿ ಪ್ರತಿಭಟನೆ

ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ ಅವರಿಂದ ತನಿಖೆಗೆ ಆಗ್ರಹ

ಮೈಸೂರು, ಡಿ.8(ಜಿಎ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ನಡೆದಿರುವ ಹಗರಣಕ್ಕೆ ಕಾರಣಕರ್ತರಾದವರ ಮೇಲೆ ಕ್ರಮ ಕೈಕೊಂಡು ಸೂಕ್ತ ಫಲಾನುಭವಿಗಳಿಗೆ ನಿವೇಶನ ನೀಡುವಂತೆ ಆಗ್ರಹಿಸಿ ಡಿ.19ರಿಂದ ವಿದ್ಯಾವಂತ ನಿರುದ್ಯೋಗಿಗಳ ಸಂಘದ ವತಿಯಿಂದ ಮುಡಾ ಮುಂಭಾಗ ಪ್ರತಿಭಟನಾ ಧರಣಿ ನಡೆಸಲಾಗುವುದು ಎಂದು ಸಂಘದ ಅಧ್ಯಕ್ಷ ಕೂಡ್ಲೂರು ಶ್ರೀಧರಮೂರ್ತಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾದಿಂದ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸದೇ, ಪರಿಹಾರ ನೀಡದೇ ಇರುವ ಜಮೀನುಗಳಲ್ಲಿ 50:50ರ ಅನುಪಾತದಲ್ಲಿ ನೀಡಿರುವ ನಿವೇಶನಗಳ ಕ್ರಯಪತ್ರ ನೋಂದಣಿ ತಕ್ಷಣ ಸ್ಥಗಿತಗೊಳಿಸುವಂತೆ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳು 2023ರ ಅಕ್ಟೋಬರ್‌ನಲ್ಲಿ ನೀಡಿದ ಆದೇಶವನ್ನು ಅಂದಿನ ಮುಡಾ ಆಯುಕ್ತ ಡಿ.ಬಿ.ನಟೇಶ್ ಹಾಗೂ ಜಿ.ಟಿ.ದಿನೇಶ್‌ಕುಮಾರ್ ಹಾಗೂ ಇನ್ನಿತರ ಅಧಿಕಾರಿಗಳು ಉಲ್ಲಂಘಿಸಿದ್ದಾರೆ. ಹೀಗಾಗಿ ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು. ನಿವೃತ್ತ ನ್ಯಾಯಮೂರ್ತಿ ಸಂತೋಷ್‌ಹೆಗಡೆ ಅವರ ನೇತೃತ್ವದಲ್ಲಿ ತನಿಖೆ ನಡೆಸಿ, ಸೂಕ್ತ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಅಂದಿನ ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್ ಮುಡಾ ನಿವೇಶನಗಳ ಅಕ್ರಮ ಹಂಚಿಕೆಗೆ ಕಾರಣರಾಗಿರುವ ಹಿನ್ನೆಲೆಯಲ್ಲಿ ಇವರ ವಿರುದ್ಧವೂ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಮ್ಮ ಅವರು ತಮಗೆ ಮುಡಾ ನೀಡಿದ್ದ 14 ನಿವೇಶನಗಳನ್ನು ಹಗರಣ ಬಳಿಕ ವಾಪಸು ನೀಡಿದ್ದಾರೆ. ಹೀಗಾಗಿ ಇದೇ ರೀತಿ ಇತರರು ಸಹ ಪಡೆದಿರುವ ನಿವೇಶನ ವಾಪಸು ಪಡೆದಲ್ಲಿ ಸುಮಾರು 4000 ನಿವೇಶನಾ ಕಾಂಕ್ಷಿಗಳಿಗೆ ನಿವೇಶನ ನೀಡಬಹುದಾಗಿದೆ. ಆದ್ದರಿಂದ ಇ.ಡಿ. ಈ ಬಗ್ಗೆ ಕ್ರಮ ಕೈಗೊಳ್ಳ ಬೇಕು ಎಂದು ಅವರು ಆಗ್ರಹಿಸಿದರು.

ಮುಡಾದ ನಿವೇಶನ ಹಂಚಿಕೆ ವೇಳೆ ಪರಿಶಿಷ್ಟ ಜಾತಿ, ವರ್ಗಗಳ ಅರ್ಜಿದಾರರಿಗೆ ಮೀಸಲಾತಿ ಅನುಸರಿಸಿಲ್ಲ. 1992 ಹಾಗೂ ಅದರ ಹಿಂದಿನಿಂದಲೂ ಅರ್ಜಿ ಹಾಕಿ ಕಾಯುತ್ತಿರುವವರಿಗೆ ವಂಚಿಸಿ, ಲಂಚ ನೀಡಿದವರಿಗೆ ಅಕ್ರಮವಾಗಿ ನಿವೇಶನ ನೀಡಲಾಗಿದೆ. ಮುಡಾ ಆಯುಕ್ತರೇ ರಿಯಲ್ ಎಸ್ಟೇಟ್‌ಗಳ ಪರ ನಿಂತಿದ್ದಾರೆ. ರೈತರ ಜಮೀನು ಭೂಸ್ವಾಧೀನ ಮಾಡಿಕೊಂಡ ಬಳಿಕ ಅವರಿಗೆ ಪರಿಹಾರ ನೀಡದೇ 50:50ರ ಅನುಪಾತದಲ್ಲಿ ಬೇಕಾದವರಿಗೆ ಬೆಲೆ ಬಾಳುವ ನಿವೇಶನ ನೀಡಲಾಗಿದೆ. ಅರ್ಜಿ ಕರೆದ ಬಳಿಕ ಮುಡಾ ಅದರಿಂದ ಬರುವ ಬಡ್ಡಿ ನುಂಗಿ ಹಾಕುತ್ತಿದೆ. ಹೀಗಾಗಿ ಈ ಕುರಿತ ಸಮಗ್ರ ತನಿಖೆ ನಡೆಯಬೇಕೆಂದು ಮನವಿ ಮಾಡಿದರು.

ಈ ವೇಳೆ ಅರ್ಜಿದಾರ ಕೆಎಸ್‌ಆರ್‌ಟಿಸಿ ನಿವೃತ್ತ ನೌಕರ ಆರ್.ಮಹೇಶ್ ಮಾತನಾಡಿ, ಸುಮಾರು 45 ವರ್ಷಗಳಿಂದ ಮೈಸೂರಲ್ಲಿ ವಾಸವಿದ್ದು, 1992ರಿಂದಲೂ ನಿವೇಶನಕ್ಕಾಗಿ ಅರ್ಜಿ ಸಲ್ಲಿಸುತ್ತಿದ್ದೇನೆ. ಆದರೆ, ಯಾವುದಾರೂ ಒಂದು ಕಾರಣ ಹೇಳಿ ಸುಮ್ಮನೆ ಅಲೆದಾಡಿಸುತ್ತಿದ್ದಾರೆ. ಬಾಡಿಗೆ ಕಟ್ಟಿಯೇ ಅರ್ಧ ಜೀವನ ಮುಗಿದು ಹೋಗಿದೆ. ಸಾಯುವ ಮುನ್ನ ನಿವೇಶನ ನೀಡಿ. ಶ್ರೀಮಂತರಿಗೆ ಅಕ್ರಮವಾಗಿ ನಿವೇಶನ ನೀಡುತ್ತಿದ್ದೀರಾ ಇದು ಎಷ್ಟು ಸರಿ ಎಂದು ಪ್ರಶ್ನಿಸಿದರು. ಸುದ್ದಿಗೋಷ್ಠಿಯಲ್ಲಿ ಪುಟ್ಟಮಾದಯ್ಯ ಉಪಸ್ಥಿತರಿದ್ದರು.

ಮೈಸೂರಿನಿಂದ ಊಟಿಗೆ ಸೈಕಲ್ ರ್‍ಯಾಲಿ ಆರಂಭ



ಟೂರ್ ಆಫ್ ನೀಲಗಿರೀಸ್ ಸಂಸ್ಥೆ ತಮಿಳುನಾಡಿನ ಊಟಿಗೆ ಆಯೋಜಿಸಿದ್ದ ಸೈಕಲ್ ಮ್ಯಾರಥಾನ್‌ನಲ್ಲಿ ಸಚಿವ ಕೃಷ್ಣಭೈರೇಗೌಡ ಸೈಕಲ್ ಸವಾರಿ ಮಾಡುತ್ತಿರುವುದು.


ಮೈಸೂರು, ಡಿ.8(ಎಂಟಿವೈ)–ಟೂರ್ ಆಫ್ ನೀಲಗಿರಿ ಸಂಸ್ಥೆ ಮೈಸೂರಿನಿಂದ ಊಟಿಗೆ ಆಯೋಜಿಸಿದ್ದ ಸೈಕಲ್ ರ್‍ಯಾಲಿಗೆ ಭಾನುವಾರ ಬೆಳಗ್ಗೆ ಸಚಿವ ಕೃಷ್ಣ ಭೈರೇಗೌಡ ಚಾಲನೆ ನೀಡಿದರು.

ಟೂರ್ ಆಫ್ ನೀಲಗಿರಿ ಸಂಸ್ಥೆ ಸೈಕ್ಲಿಸ್ಟ್‌ಗಳಿರುವ ಸಂಸ್ಥೆಯಾಗಿದ್ದು, ಪ್ರತೀ ವರ್ಷ ಮೈಸೂರಿಂದ ಊಟಿಗೆ ಸೈಕ್ಲಿಂಗ್ ಆಯೋಜಿಸುತ್ತದೆ. ಈ ಹಿನ್ನೆಲೆಯಲ್ಲಿ ಭಾನುವಾರ ಬೆಳಗ್ಗೆ ಮೈಸೂರಿನಿಂದ ಊಟಿಗೆ ಹೊರಟ ಸೈಕ್ಲಿಸ್ಟ್‌ಗಳಿಗೆ ಸಚಿವ ಕೃಷ್ಣಭೈರೇಗೌಡ ಶುಭ ಕೋರಿದರಲ್ಲದೇ, ಮೈಸೂರಿನ ಹೊರವಲಯದವರೆಗೂ ಸೈಕ್ಲಿಸ್ಟ್‌ಗಳೊಂದಿಗೆ ಸೈಕಲ್ ಸವಾರಿ ಮಾಡಿ ಗಮನ ಸೆಳೆದರು.

ಇದೇ ವೇಳೆ ಮಾತನಾಡಿದ ಅವರು, ನಾನು ಟೂರ್ಸ್ ಆಫ್ ನೀಲಗಿರಿ ಸಂಸ್ಥೆಯ ಸೈಕ್ಲಿಸ್ಟ್ ತಂಡದ ಸದಸ್ಯನಾಗಿದ್ದೇನೆ. ಈ ಹಿಂದೆ ನಾನು ಸೈಕಲ್ ಸವಾರಿ ಮಾಡುತ್ತಿದ್ದೆ. ವಾರಾಂತ್ಯದಲ್ಲಿ ತಿಂಗಳಿಗೆ ಒಮ್ಮೆಯಾದರೂ ದಿನಕ್ಕೆ ನೂರು ಕಿ.ಮೀ. ವರೆಗೆ ಸೈಕಲ್ ಸವಾರಿ ಮಾಡುತ್ತಿದ್ದೆ. ಈ ತಂಡದೊಂದಿಗೆ ಸೈಕಲ್ ಯಾತ್ರೆ ಹೋಗುತ್ತಿದ್ದೆ. ಆದರೆ ಈ ಬಾರಿ ಮೈಸೂರಿನಿಂದ ನೀಲಗಿರಿಗೆ ತೆರಳಿದ ಸೈಕಲ್ ಯಾತ್ರೆಯನ್ನು ನಾನು ಮಿಸ್ ಮಾಡಿಕೊಳ್ಳುತ್ತಿದ್ದೇನೆ. ಈ ಸೈಕ್ಲಿಂಗ್ ಮ್ಯಾರಥಾನ್‌ನಲ್ಲಿ ಭಾಗವಹಿಸಬೇಕೆಂಬ ಮಹದಾಸೆ ನನ್ನದಾಗಿತ್ತು. ಆದರೆ ಕಾರಣಾಂತರಗಳಿಂದ ಅದು ಸಾಧ್ಯವಾಗುತ್ತಿಲ್ಲ ಎಂದು ವಿಷಾದಿಸಿದರಲ್ಲದೆ, ಎಲ್ಲಾ ಸೈಕ್ಲಿಂಗ್ ಪಟುಗಳು ಸುರಕ್ಷಿತವಾಗಿ ಊಟಿ ತಲುಪಿ ವಾಪಸ್ಸಾಗಲಿ ಎಂದು ಶುಭ ಹಾರೈಸಿದರು.

ಮ್ಯಾರಥಾನ್: ಟೂರ್ ಆಫ್ ನೀಲಗಿರೀಸ್ ಸೈಕ್ಲಿಂಗ್ ತಂಡ ತಮಿಳುನಾಡಿನ ಊಟಿಗೆ ಆಯೋಜಿಸಿದ್ದ ಸೈಕಲ್ ಮ್ಯಾರಾಥಾನ್ 8 ದಿನ ನಡೆಯಲಿದ್ದು, ಸುಮಾರು 800 ಕಿ.ಮೀ. ದೂರ ಕ್ರಮಿಸಲಿದೆ. ಅಲ್ಲದೇ 80 ಸೈಕ್ಲಿಸ್ಟ್‌ಗಳು ಈ ಮ್ಯಾರಾಥಾನ್‌ನಲ್ಲಿ ಪಾಲ್ಗೊಳ್ಳುತ್ತಿರುವುದು ವಿಶೇಷ. ಕರ್ನಾಟಕ ಮಾತ್ರವಲ್ಲದೇ, ಕೇರಳ, ಆಂಧ್ರಪ್ರದೇಶ ಸೇರಿದಂತೆ ವಿವಿಧೆಡೆಯಿಂದ ಸೈಕಲ್ ಪಟುಗಳು ಈ ಸೈಕಲ್ ಮ್ಯಾರಾಥಾನ್‌ನಲ್ಲಿ ಪಾಲ್ಗೊಂಡಿದ್ದಾರೆ.


ನಾಳೆ ಮೈಸೂರಿನ ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಡಿ.8–ಡಿಸೆಂಬರ್ 10ರಂದು ಬೆಳಗ್ಗೆ 10ರಿಂದ ಸಂಜೆ 5:30 ಗಂಟೆಯವರೆಗೆ ನಿರ್ವಹಣಾ ಕಾಮಗಾರಿ ಹಮ್ಮಿಕೊಳ್ಳಲಾಗಿದ್ದು, ಕೆಸರೆ 1ನೇ ಹಂತ, 2ನೇ ಹಂತ, ಸುಭಾಷ್‌ನಗರ, ಶೋಭಾ ಗಾರ್ಡನ್, ಆರ್.ಎಸ್ ನಾಯ್ಡು ನಗರ, ಎನ್.ಆರ್.ಗಾರ್ಡನ್, ಬೆಲವತ್ತ, ಶ್ಯಾದನಹಳ್ಳಿ, ನಾಗನಹಳ್ಳಿ ಹೊಸ ಬಡಾವಣೆ, ಕೆ.ಆರ್.ಮಿಲ್ ಕಾಲೋನಿ, ವರುಣ ನಾಲೆ, ಸಿದ್ದಲಿಂಗಪುರ, ಕಳಸ್ತವಾಡಿ, ಲಕ್ಷ್ಮೀಪುರಂ, ಎಸ್‌ಎಸ್ ನಗರ, ಕಾವೇರಿನಗರ, ಸಿದ್ದಿಖಿನಗರ, ಹನುಮಂತನಗರ, ಹೈವೇ ವೃತ್ತ, ಕೆ.ಎಸ್.ಆರ್.ಟಿ.ಸಿ ಡಿಪೋ, ಹಲೀಮ್‌ನಗರ, ಬಮೀ ಭವನ, ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜು, ಸೆಂಟ್ ಜೋಷೆಫ್ ಆಸ್ಪತ್ರೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹಾಗೆಯೇ ಮೆಲ್ಲಹಳ್ಳಿ, ಹಾರೋಹಳ್ಳಿ, ಹಳಕೆರಿಹುಂಡಿ, ಶಿವಪುರ, ಹಲಗಯ್ಯನಹುಂಡಿ, ಪಿಲ್ಲಹಳ್ಳಿ, ವರಕೂಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ವರುಣ, ದಂಡಿಕೆರೆ, ವಾಜಮಂಗಲ, ಮೊಸಂಬಾಯನಹಳ್ಳಿ, ಯಾಂದಳ್ಳಿ, ಸಜ್ಜೆಹುಂಡಿ, ಜಂತಗಳ್ಳಿ, ಮಹದೇಶ್ವರ ಬಡಾವಣೆ, ಇಂಡಸ್ ಬಡಾವಣೆ, ಭೂಗತಗಳ್ಳಿ ಗೇಟ್, ಚಿಕ್ಕಹಳ್ಳಿ, ಚೋರನಹಳ್ಳಿ, ಭೂಗತಗಳ್ಳಿ, ನಾಡನಹಳ್ಳಿ, ಪೊಲೀಸ್ ಬಡಾವಣೆ, ನೇತಾಜಿನಗರ, ಐಪಿಎಸ್ ನಗರ, ಲಾಲ್ ಬಹದ್ದೂರು ಶಾಸ್ತ್ರಿ ನಗರ, ಎಸ್‌ಎಂಪಿ ಡೆವಲಪರ್ಸ್, ಶೋಭ ಡೆವಲಪರ್ಸ್, ಯಶಸ್ವಿನಿ ಹಿಲ್ ವ್ಯೂ, ವರಕೂಡು, ಬಡಗಲ ಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ಜಂತಗಳ್ಳಿ, ಚಿಕ್ಕಹಳ್ಳಿ, ಚೋರನ ಹಳ್ಳಿ, ಯಾಂದಳ್ಳಿ, ಜೆಎಸ್‌ಎಸ್ ಬಡಾವಣೆ, ವಸಂತನಗರ, ಸುಕದಾಯಿ ಬಡಾವಣೆ, ಶಾಂತವೇರಿ ಗೋಪಾಲಗೌಡನಗರ, ಸಪ್ತ ಮಾತೃಕ ಬಡಾವಣೆ, ಸಹೃದಯನಗರ, ಪ್ರಕೃತಿ ಬಡಾವಣೆ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆ ಆಗಲಿದೆ ಎಂದು ಸೆಸ್ಕ್ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

09.12.2024 ಸೋಮವಾರ, ಮಳೆ ನಕ್ಷತ್ರ: ಜ್ಯೇಷ್ಠ, 02.12.2024 ರಿಂದ 15.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ನವಮಿ, ನಕ್ಷತ್ರ: ಪುಭಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಮೈಸೂರು ಜಿಲ್ಲಾ ನೆಹರು ಯುವ ಕೇಂದ್ರ, ಭಾರತ ಸರ್ಕಾರದ ಗೃಹ ಮಂತ್ರಾಲಯ :** ಕಾಶ್ಮೀರಿ ಯುವಜನ ವಿನಿಮಯ ಕಾರ್ಯಕ್ರಮ, ಬೆಳಗ್ಗೆ 6 ಗಂಟೆಗೆ ಯೋಗ ಕಾರ್ಯಕ್ರಮ, ಸ್ವಚ್ಛತಾ ಕಾರ್ಯಕ್ರಮ, ಶ್ರಮದಾನ, ಮುಖ್ಯ ಅತಿಥಿಗಳು: ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸ್ಥಳ: ಮುಕ್ತ ವಿವಿ ಕಾವೇರಿ ಸಭಾಂಗಣ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.


■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ರಾಯಲ್ ಸೊಸೈಟಿ ಆಫ್ ಕೆಮಿಸ್ಟ್ರಿ ಇಂಡಿಯಾ (ಆರ್‌ಎಸ್‌ಸಿ, ಯುಕೆ), ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ:** ಯುಸಫ್ ಹಮೀದ್ ರಸಾಯನಶಾಸ್ತ್ರ ಶಿಬಿರ, ಉದ್ಘಾಟನೆ: ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಉಪಕುಲಪತಿ ಡಾ.ಹೆಚ್.ಬಸವನಗೌಡಪ್ಪ, ಅಧ್ಯಕ್ಷತೆ: ಜೆಎಸ್‌ಎಸ್ ಔಷಧ ವಿಜ್ಞಾನ ಕಾಲೇಜಿನ ಪ್ರಾಂಶುಪಾಲ ಡಾ.ಟಿ.ಎಂ.ಪ್ರಮೋದ್‌ಕುಮಾರ್, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಜೆಎಸ್‌ಎಸ್ ವಿಜ್ಞಾನ ಕಾಲೇಜು, ಬೆಳಗ್ಗೆ 10.30ಕ್ಕೆ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ:** ರಂಗರಾಜನ್ ಐಯ್ಯಂಗಾರ್, ಡಿವಿಎಸ್ ಆಚಾರ್ಯ ಮತ್ತು ಶ್ರೀಮತಿ ಎಸ್.ಆರ್. ಕುಮುದ ನೆನಪಿನ ಕಾರ್ಯಕ್ರಮ, ಕರ್ನಾಟಕ ಶಾಸ್ತ್ರೀಯ ಗಾಯನ ವಿದ್ವಾನ್ ಎನ್.ಹೆಚ್. ಶ್ರೀಹರಿ ಭಟ್‌ರಿಂದ, ಪಿಟೀಲು: ವಿದ್ವಾನ್ ಯಶಸ್ವಿ, ಮೃದಂಗ: ವಿದ್ವಾನ್ ನಂದನ್ ಕಶ್ಯಪ್, ಘಟಂ: ವಿದ್ವಾನ್ ಶಮಿತ್‌ಗೌಡ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ 6 ಗಂಟೆಗೆ.

■ **ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ತಿಲ್ಲಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ:** ಶ್ರೀಮತಿ ಕೆ. ವನಜಾಕ್ಷಮ್ಮ ಸಂಸ್ಮರಣಾ 29ನೆಯ ನೃತ್ಯ ಆರಾಧನಾ–2024, ಸಂಜೆ 6 ಗಂಟೆಗೆ ನಾಟ್ಯಾಚಾರ್ಯ ಪ್ರೊ.ಕೆ.ರಾಮಮೂರ್ತಿರಾವ್ ಅವರ ಪುತ್ರ ಹಾಗೂ ಶಿಷ್ಯ ವಿದ್ವಾನ್ ಕೆ.ಆರ್. ವಿಶ್ವದೀಪ ಅವರಿಂದ ಭರತನಾಟ್ಯ, ಸಂಜೆ 7 ಗಂಟೆಗೆ ನೃತ್ಯ ನಿಕೇತನ ಕೊಡವೂರು, ಉಡುಪಿ ತಂಡದವರಿಂದ ನೃತ್ಯ ವೈಭವ–ಸಮೂಹ ನೃತ್ಯ, ಸ್ಥಳ: ಗಾನಭಾರತಿ ರಮಾಗೋವಿಂದ ಕಲಾವೇದಿಕೆ, ಸಂಜೆ 6 ಗಂಟೆಗೆ.

ಮೈಸೂರು ಆಕಾಶವಾಣಿ




ಬೆಳಗ್ಗೆ: 6.10–ಚಿಂತನ, ರಘುನಾಥ್ ಹೆಚ್.ಎಸ್., 6.15–ಗೀತಾರಾಧನ, 6.35 ಮತ್ತು ಸಂಜೆ 6.10: "ಅಂಚೆ–ಅಂಕನ"–ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್. ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಡಾ.ಪಿ.ಎಸ್.ಮುರಳೀಧರ್, ವ್ಯಾಖ್ಯಾನ–ಡಾ.ಹೆಚ್.ಎನ್.ಮಂಜುರಾಜ್, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು–ವೈದ್ಯರ ಕಿವಿ ಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ): ಹಿರಿಯ ಲೇಖಕರಾದ ಹುರಗಲವಾಡಿ ಲಕ್ಷ್ಮೀನರಸಿಂಹಶಾಸ್ತ್ರಿ ಅವರೊಂದಿಗೆ ಶ್ರೀನಿವಾಸಪ್ರಸಾದ್ ಅವರು ನಡೆಸಿದ್ದ ಸಂವಾದ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಓ.ಎಸ್.ಅರುಣ್–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್–ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ ಮತ್ತು ಕೀರ್ತನಾ. ವಿ, **ಮಧ್ಯಾಹ್ನ:** 12.05–ವನಿತಾ ವಿಹಾರ–12.35–ದೇವರನಾಮ, ನಿತಿನ್ ರಾಜಾರಾಂ ಶಾಸ್ತ್ರಿ, 12.45–ನಮ್ಮ ಆರೋಗ್ಯ: ಚಳಿಗಾಲದ ಋತುಚರ್ಯೆ–ಚಳಿಗಾಲದಲ್ಲಿ ಕಂಡುಬರುವ ಆರೋಗ್ಯ ಸಮಸ್ಯೆಗಳಿಗೆ ಆಯುರ್ವೇದ ಪರಿಹಾರ' ಕುರಿತು ಮಂಡ್ಯದ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಆಯುರ್ವೇದ ತಜ್ಞ ವೈದ್ಯರಾದ ಡಾ.ಸದ್ಗುಣ ಡಿ.ಎನ್. ಅವರೊಂದಿಗೆ ಮಾತುಕತೆ, 1.00–ಪ್ರಗತಿ ಪಥ–UMANG ಯೋಜನೆ ಕುರಿತು ಪ್ರೊ.ಪ್ರದೀಪ್, ಎನ್.ಐ.ಇ ಕಾಲೇಜು ಅವರೊಂದಿಗೆ ಸಂದರ್ಶನ, ಸಂದರ್ಶಕರು: ಜಾಂಪಣ್ಣ ಆಶೀಹಾಳ್, 1.20–ಭಾವಗೀತೆಗಳು–ವಸಂತ ಪಿ.ಎಸ್., 2.40–ಚಿತ್ರಗೀತೆ ಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಸಿಕ್ಕಿಲ್ ಮಾಲಾಚಂದ್ರಶೇಖರ್–ಕೊಳಲು ವಾದನ, 4.00–ಮಹಿಳಾರಂಗ–"ನಾನು ನನ್ನ ಕಂಪನಿ" ಬಾಳೆನಾರಿನ ಉತ್ಪನ್ನಗಳನ್ನು ತಯಾರಿಸುವ ವರ್ಷ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ, 4.45–ಹಿಂದಿ ಪಾಠ–ಡಾ.ಸ್ಮಿತಾ ಚಿಪ್ಳೂಣ್‌ಕರ್, 6.50– ಕೃಷಿರಂಗ: ಕೃಷಿ ಉತ್ಪನ್ನಗಳ ಮಾರಾಟ ಹಾಗೂ ರಫ್ತು ಈ ಕುರಿತು ಲಘು ಉದ್ಯೋಗ ಭಾರತಿ ಕರ್ನಾಟಕ ಶಾಖೆ ಕಾರ್ಯದರ್ಶಿ ಸಿ.ಎನ್.ಭೋಜರಾಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಸಂಸದ್ ಸಮೀಕ್ಷಾ, 8.15–ಯುವವಾಣಿ: ಮೈಸೂರು ವಿಶ್ವವಿದ್ಯಾಲಯದ 104ನೇ ಘಟಿಕೋತ್ಸವದಲ್ಲಿ ಎಂ.ಎ. ಕನ್ನಡ ವಿಷಯದಲ್ಲಿ ಪ್ರಥಮ rankನೊಂದಿಗೆ 10 ಚಿನ್ನದ ಪದಕ ಗಳಿಸಿದ ಕೊಳ್ಳೇಗಾಲ ತಾಲೂಕು ಸತ್ತೇಗಾಲದ ತೇಜಸ್ವಿನಿ. ವಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಚಾರುಲತಾ ಮಣಿ–ಹಾಡುಗಾರಿಕೆ, 10.00–ಸಂಸತ್ತಿನ ಪ್ರಶ್ನೋತ್ತರ ಅವಧಿಯ ಕಲಾಪಗಳ ಧ್ವನಿಮುದ್ರಣ

ಮೈಸೂರಿನ ಪ್ರಮುಖ ರಸ್ತೆಯಲ್ಲಿ ಮಾಂಸದ ಮೂಟೆ!

ರಣಹದ್ದು, ನಾಯಿ ಹಿಂಡು ಕಂಡು ಕಸಿವಿಸಿಯಾದ ಜನತೆ

ಮೈಸೂರು, ಡಿ.8(ಎಂಕೆ)– ಸ್ವಚ್ಛ ನಗರಿ ಮೈಸೂರಿನ ಪ್ರಮುಖ ರಸ್ತೆಯಲ್ಲಿ ಮಾಂಸದ ಮೂಟೆ.. ರಣಹದ್ದು, ನಾಯಿಗಳ ಹಿಂಡು ಕಂಡು ಕಸಿವಿಸಿಗೊಂಡ ಜನ...!



ಮೈಸೂರಿನ ಮಲೆ ಮಹದೇಶ್ವರ ರಸ್ತೆಯಲ್ಲಿ ಭಾನುವಾರ ಮಧ್ಯಾಹ್ನ ಬಿದ್ದಿದ್ದ ಮಾಂಸ ಮೂಟೆ

ಮೈಸೂರಿನ ಮಲೆ ಮಹದೇಶ್ವರ ರಸ್ತೆ(ಬನ್ನೂರು ಮುಖ್ಯ ರಸ್ತೆ)ಯಲ್ಲಿ ಭಾನುವಾರ ಮಧ್ಯಾಹ್ನ ನಡುರಸ್ತೆಯಲ್ಲಿ ಮಾಂಸದ ಮೂಟೆ ಕಂಡು ಬಂದಿದ್ದು, ಮಾಂಸಕ್ಕಾಗಿ ಹದ್ದು–ಕಾಗೆ, ನಾಯಿಗಳ ಹಿಂಡು ಕಿತ್ತಾಡುವ ದೃಶ್ಯಗಳಿಂದ ಪಾದಚಾರಿಗಳು, ವಾಹನ ಸವಾರರು ಕಸಿವಿಸಿಗೊಂಡ ಘಟನೆ ನಡೆಯಿತು.

ರಾಯಲ್ ಮಾರ್ಟ್ ಎದುರಿನ ಕೇಂದ್ರೀಯ ಹಿಂದಿ ಸಂಸ್ಥೆಗೆ ಸಾಗುವ ರಸ್ತೆ ಬದಿಯಲ್ಲಿ ಮಾಂಸದ ಮೂಟೆ ಬಿದ್ದಿದ್ದು, ಮಾಂಸದ ಅಂಗಡಿಗಳಲ್ಲಿ ಉಳಿಯುವ ವೇಸ್ಟ್ ಅನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಬಿಸಾಡಲಾಗಿದೆ.

ಮಾಂಸದ ಚೀಲ ಬಿದ್ದ ಕೆಲ ನಿಮಿಷಕ್ಕೆ ನಾಯಿಗಳ ಹಿಂಡಿನ ಮಾತ್ರವಲ್ಲದೆ ಹದ್ದು–ಕಾಗೆಗಳ ಹಿಂಡು ಹೆಚ್ಚಾಯಿತು. ಮಾಂಸದ ದುರ್ವಾಸನೆಗೆ ವಾಹನ ಸವಾರರು ಮೂಗು ಮುಚ್ಚಿಕೊಂಡು ತಿರುಗಾಡುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು. ಕೆಲವರು ಇಷ್ಟು ದಿನ ರಸ್ತೆ ಬದಿಯಲ್ಲಿ ಕಸವನ್ನು ಕಾಣುತ್ತಿದ್ದೇವು. ಈಗ ಮಾಂಸದ ಮೂಟೆಗಳು ಕಾಣುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸ್ವಚ್ಛ ನಗರಿ ಪಟ್ಟ ಕಳಚಿ ಬೀಳಲು ಕಾರಣವಾಗಿರುವ ಪಾಲಿಕೆ ಅಧಿಕಾರಿ–ಸಿಬ್ಬಂದಿ, ಮುಂದಿನ ದಿನಗಳಲ್ಲಿ ಮೈಸೂರನ್ನು ಕೊಳಚೆ ನಗರವನ್ನಾಗಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಮಾಂಸದಂಗಡಿ, ಹೋಟೆಲ್‌ಗಳಲ್ಲಿ ಉಳಿಯುವ ವೇಸ್ಟ್(ಉಳಿಕೆ ತ್ಯಾಜ್ಯ)ವನ್ನು ವಿಲೇವಾರಿ ಮಾಡುವಲ್ಲಿ ಪಾಲಿಕೆ ಸಂಪೂರ್ಣ ವಿಫಲವಾಗಿದೆ ಎಂದು ಸ್ಥಳೀಯ ಆಕ್ಷೇಪ ವ್ಯಕ್ತಪಡಿಸಿದರು.

ಕೇಂದ್ರ ಸಚಿವ ಸಂಜಯ್ ಸೇಠ್‌ಗೆ ಜೀವ ಬೆದರಿಕೆ; 50 ಲಕ್ಷ ರೂ.ಗೆ ಬೇಡಿಕೆ

ರಾಂಚಿ, ಡಿ.8– ರಾಂಚಿ ಸಂಸದ ಹಾಗೂ ಕೇಂದ್ರ ರಕ್ಷಣಾ ಖಾತೆ ರಾಜ್ಯ ಸಚಿವ ಸಂಜಯ್ ಸೇಠ್ ಅವರು ನವದೆಹಲಿಯಲ್ಲಿ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಪಾಲ್ಗೊಳ್ಳುವ ವೇಳೆ ಮೆಸೇಜ್ ಮೂಲಕ 50 ಲಕ್ಷ ರೂ.ಗಳಿಗೆ ಬೇಡಿಕೆ ಇಟ್ಟಿದ್ದಾರೆ.

ಸಂದೇಶ ಕಳುಹಿಸಿದ ದುಷ್ಕರ್ಮಿಗಳು, ಮೂರು ದಿನಗಳಲ್ಲಿ ಹಣ ನೀಡದಿದ್ದರೆ ತೀವ್ರ ಪರಿಮಾಮ ಎದುರಿಸಬೇಕಾಗುತ್ತದೆ ಬೆದರಿಕೆ ಹಾಕಿದ್ದಾರೆ. ಬೆದರಿಕೆಯ ನಂತರ, ಕೇಂದ್ರ ಸಚಿವರ ಭದ್ರತೆಯನ್ನು ಹೆಚ್ಚಿಸಲಾಗಿದೆ. ದೆಹಲಿ ಮತ್ತು ಜಾರ್ಖಂಡ್ ಎರಡರಲ್ಲೂ ಈ ಕುರಿತು ತನಿಖೆ ನಡೆಯುತ್ತಿದೆ. ಸೇಠ್ ಅವರಿಗೆ ಬೆದರಿಕೆ ಸಂದೇಶ ಬಂದ ನಂತರ ದೆಹಲಿ ಪೊಲೀಸರು ಪ್ರಾಥಮಿಕ ತನಿಖೆ ಆರಂಭಿಸಿದ್ದಾರೆ. ಪೊಲೀಸ್ ಕಮಿಷನರ್ ಸೇರಿದಂತೆ ಉನ್ನತ ಅಧಿಕಾರಿಗಳು ದೆಹಲಿಯಲ್ಲಿರುವ ಅವರ ನಿವಾಸಕ್ಕೆ ಭೇಟಿ ನೀಡಿ ಪ್ರಕರಣದ ಬಗ್ಗೆ ವಿವರಗಳನ್ನು ಸಂಗ್ರಹಿಸಿದರು.

'ಇ–ಖಾತಾ' ಜಾಗೃತಿ ಅಭಿಯಾನಕ್ಕೆ ತೆರಳುವ ಪಾಲಿಕೆ ಸಿಬ್ಬಂದಿಗೆ ನಿವಾಸಿಗಳ ಅಸಹಕಾರ

ಮೈಗ್ರಾಪ ಸಭೆಯಲ್ಲಿ ವಲಯ ಕಚೇರಿ ಆಯುಕ್ತ ಆನಂದ್ ಅಳಲು

ಮೈಸೂರು, ಡಿ.8(ಎಸ್‌ಪಿಎನ್)–ಮನೆಮನೆ ಅಭಿಯಾನದ ಮೂಲಕ ಇ–ಸ್ವತ್ತು ಮಾಡಿಸಲು ಜನರಲ್ಲಿ ಜಾಗೃತಿ ಮೂಡಿಸುವಾಗ ನಮ್ಮನ್ನು ಕಂಡರೆ, ಮನೆ ಮಾಲೀಕರು ಬಾಗಿಲನ್ನು ದಡಾರ್ ಎಂದು ಹಾಕಿಕೊಳ್ಳುತ್ತಾರೆ ಎಂದು ಮೈಸೂರು ನಗರ ಪಾಲಿಕೆ ವಲಯ ಕಚೇರಿ 8ರ ಆಯುಕ್ತ ಆನಂದ್ ತಮ್ಮ ಅಸಹಾಯಕತೆ ತೋಡಿಕೊಂಡರು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆ ಮೈಗ್ರಾಪ ಕಚೇರಿಯಲ್ಲಿ ಪರಿಷತ್ ಅಧ್ಯಕ್ಷ ಶ್ರೀಶೈಲ ರಾಮಣ್ಣನವರ್ ಅಧ್ಯಕ್ಷತೆಯಲ್ಲಿ ಭಾನುವಾರ ನಡೆದ ಮಾಸಿಕ ಸಭೆಯಲ್ಲಿ ಇ–ಖಾತಾ, ಇ–ಸ್ವತ್ತು, ಇ–ವಿನ್ಯಾಸ ವಿತರಣೆಯಲ್ಲಿ ಸಾರ್ವಜನಿಕರಿಗಾಗುತ್ತಿರುವ ತೊಂದರೆ ಕುರಿತು ಮೈಸೂರು ನಗರ ಪಾಲಿಕೆ ವ್ಯಾಪ್ತಿಯ 4ರ ವಲಯ ಕಚೇರಿ ಆಯುಕ್ತ ಮಹೇಶ್ ಕುಮಾರ್ ಜಿಗಾಣಿ ಹಾಗೂ 8ರ ವಲಯ ಕಚೇರಿ ಆನಂದ್ ಅವರೊಂದಿಗೆ ನಡೆದ ಸಂವಾದದಲ್ಲಿ ಬೇಸರ ಹೊರಹಾಕಿದರು.

ಇ–ಸ್ವತ್ತು ಇ–ಖಾತಾ ಮಾಡಿಸುವುದರಿಂದ ಜನರಿಗೆ ಅನುಕೂಲ. ನಾವು ಜಾಗೃತಿ ಮೂಡಿಸಲು ಬಂದರೆ ಮುಖ ತಿರುಗಿಸಿ ಬಾಗಿಲು ಹಾಕಿಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ನಮ್ಮ ಸಿಬ್ಬಂದಿಗೆ ಅವಮಾನ ಆಗುವ ರೀತಿ ಸಾರ್ವಜನಕರಿಂದ ಪ್ರಕ್ರಿಯೆ ಬರುತ್ತಿದೆ ಎಂದು ಬೇಸರ ಹೊರಹಾಕಿದರಲ್ಲದೆ, ಇಲ್ಲಿಯವರೆಗೆ ನಮ್ಮ ವಲಯ ಕಚೇರಿ ಸೇರಿದಂತೆ ಇತರೆ ವಲಯ ಕಚೇರಿ ವ್ಯಾಪ್ತಿಯಲ್ಲಿ ಶೇ.50 ರಷ್ಟು ಜನರು ಮಾತ್ರ ಇ–ಖಾತಾ ಪ್ರಮಾಣ ಪತ್ರವನ್ನು ತಮ್ಮ ಸ್ವತ್ತುಗಳಿಗೆ ಮಾಡಿಸಿಕೊಂಡಿದ್ದಾರೆ. ಆದರೆ, ಇನ್ನುಳಿದವರು ಇ–ಖಾತೆ ಮಾಡಿಸಿಕೊಳ್ಳಲು ಇಚ್ಛಾಸಕ್ತಿ ತೋರುತ್ತಿಲ್ಲ. ಇಲ್ಲವೇ ಪೂರಕ ದಾಖಲಾತಿ ಇಲ್ಲದ ಕಾರಣ ವಿಳಂಬವಾಗುತ್ತಿರಬಹುದು ಎಂದು ಸದಸ್ಯರೊಬ್ಬರು ಪ್ರಶ್ನೆಗೆ ಉತ್ತರಿಸಿದರು.

ರಾಜ್ಯ ಸರ್ಕಾರವು ಆಸ್ತಿ ನೋಂದಣಿಗೆ ಇ–ಖಾತಾ ಕಡ್ಡಾಯ ಮಾಡಿದೆ. ಇದರಿಂದ ಖಾಲಿ ನಿವೇಶನ, ಮನೆ ಮಾರಾಟಕ್ಕೆ ಸಂಬಂಧಿಸಿದ ಅಕ್ರಮ ಮತ್ತು ಜನ ಮೋಸ ಹೋಗುವುದನ್ನು ತಡೆಯಲು ಇದು ಪರಿಣಾಮಕಾರಿ ಯೋಜನೆ. ಆದರೆ, ಸರ್ಕಾರ ಆಶಯಕ್ಕೆ ತಕ್ಕಂತೆ ಇ–ಖಾತಾ ವಿತರಿಸುವ ಪ್ರಕ್ರಿಯೆ ಮೈಸೂರು ನಗರ ಪಾಲಿಕೆ ವಲಯ ಕಚೇರಿಗಳಲ್ಲಿ ಮಂದಗತಿಯಲ್ಲಿ ಸಾಗುತ್ತಿದ್ದು, ಈ ಪ್ರಕ್ರಿಯೆ ಭ್ರಷ್ಟಾಚಾರ ಮೂಲ ಕೇಂದ್ರವಾಗುತ್ತಿದೆ ಎಂದು ಮೈಸೂರು ಗ್ರಾಹಕರ ಪರಿಷತ್ ಮಾಸಿಕ ಸಭೆಯಲ್ಲಿ ಸದಸ್ಯರು ಬೇಸರ ಹೊರಹಾಕಿದರು.



ಮೈಗ್ರಾಪ ಅಧ್ಯಕ್ಷ ಶ್ರೀಶೈಲ ರಾಮಣ್ಣನವರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಇ–ಖಾತಾ, ಇ–ಸ್ವತ್ತು, ಇ–ವಿನ್ಯಾಸ ವಿತರಣೆಯಲ್ಲಿ ಸಾರ್ವಜನಿಕರಿಗಾಗುತ್ತಿರುವ ತೊಂದರೆ ಕುರಿತು ಚರ್ಚೆ ನಡೆಸುತ್ತಿರುವುದು.

ವಲಯ ಕಚೇರಿ 8ರ ಆಯುಕ್ತ ಆನಂದ್ ಸದಸ್ಯರ ಪ್ರಶ್ನೆಗಳಿಗೆ ಉತ್ತರಿಸಿ, ನಮ್ಮ ವ್ಯಾಪ್ತಿಯಲ್ಲಿ ಅಂದಾಜು 18 ಸಾವಿರಕ್ಕೂ ಹೆಚ್ಚು ಖಾತಾದಾರರಿದ್ದಾರೆ. ವಲಯ ಕಚೇರಿ 4ರ ವ್ಯಾಪ್ತಿಯಲ್ಲಿ ಅಂದಾಜು 20 ಸಾವಿರ ಅಧಿಕ ಮಂದಿ ಖಾತಾದಾರರಿದ್ದಾರೆ. ಇವರಿಗೆ ಇ–ಖಾತಾ, ಇ–ಸ್ವತ್ತು ಮಾಡಿಸಲು ನಮ್ಮ ಕಚೇರಿಯಿಂದ ಜಾಗೃತಿ ನೀಡಲಾಗಿದ್ದು, ಮನೆಮನೆಗೆ ತೆರಳಿ ಇ–ಖಾತಾ ಮಾಡಿಸಲು ಮಾಲೀಕರಿಗೆ ತಿಳುವಳಿಕೆ ನೀಡಲಾಗುತ್ತಿದೆ.

ದಾಖಲಾತಿ ಸರಿಯಿದ್ದರೂ ಇ–ಖಾತಾ ಸಿಗುತ್ತಿಲ್ಲ: ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ವಲಯ ಕಚೇರಿಗಳಲ್ಲಿ ಇ–ಖಾತಾ, ಇ–ಸ್ವತ್ತು ಮಾಡಿಕೊಡಲು 3–5 ಸಾವಿರದವರೆಗೆ ನಿಮ್ಮ ಸಿಬ್ಬಂದಿ ನೇರವಾಗಿ ನಮ್ಮ ಬಳಿ ಲಂಚ ಕೇಳುತ್ತಾರೆ. ನಮ್ಮ ಸ್ವತ್ತಿನ ಎಲ್ಲಾ ದಾಖಲಾತಿ ಸರಿಯಿದ್ದು, ವರ್ಷವಿಡೀ ಕಾದರೂ ಇ–ಖಾತಾ ಕೊಡುತ್ತಿಲ್ಲ. ನಮ್ಮ ಪಕ್ಕದ ಮನೆಯವರು ಈ ರಗಳೆ ಬೇಡವೆಂದು ದುಡ್ಡು ಕೊಟ್ಟು ಇ–ಖಾತಾ ಮಾಡಿಸಿಕೊಂಡಿದ್ದಾರೆ ಎಂದು ವಲಯ ಕಚೇರಿ ಆಯುಕ್ತ ಆನಂದ್ ಅವರನ್ನು ನೇರವಾಗಿ ಪ್ರಶ್ನಿಸಿದರಲ್ಲದೆ, ಈ ವಿಷಯವನ್ನು ನಿಮ್ಮ ಆಯುಕ್ತ(ಪಾಲಿಕೆ ಆಯುಕ್ತ)ರಿಗೆ ತಿಳಿಸಿ, ಸಮಸ್ಯೆ ಬಗೆಹರಿಸುವಂತೆ ಕೆಲ ಸದಸ್ಯರು ಮನವಿ ಮಾಡಿದರು.

ಸಮಸ್ಯೆಯ ಮೂಲ: ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ಕಂದಾಯ ನಿವೇಶನ ಹಾಗೂ ಬಿ.ಖಾತಾ ನಿವೇಶನಗಳಿಗೆ ಇ–ಖಾತಾ ಇರುವುದಿಲ್ಲ. ದಶಕಗಳ ಹಿಂದೆಯೇ ನಗರ ಪ್ರದೇಶಗಳಿಗೆ ಸೇರಿದ ಗ್ರಾಮಗಳ ಜನರು ತಮ್ಮ ಆಸ್ತಿಗಳಿಗೆ ಇ–ಖಾತಾ ಇಲ್ಲದೇ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಇಂತಹ ಆಸ್ತಿಗಳಿಗೆ ಇ–ಖಾತಾ ನೀಡುವುದೇ ಸಮಸ್ಯೆಯಾಗಿದೆ ಎಂದು ವಲಯ ಕಚೇರಿ 4ರ ಆಯುಕ್ತ ಮಹೇಶ್ ಕುಮಾರ್ ಜಿಗಾಣಿ ಅಭಿಪ್ರಾಯಪಟ್ಟರು.

ತಂತ್ರಾಂಶದಲ್ಲಿನ ದೋಷದಿಂದಾಗಿ ಇ–ಖಾತಾದಲ್ಲಿನ ಲೋಪದೋಷಗಳನ್ನು ಸರಿಪಡಿಸಲು ವಿಳಂಬವಾಗುತ್ತಿದೆ. ಆದ್ದರಿಂದ ಈ ಹಿಂದೆ ಅನುಸರಿಸುತ್ತಿದ್ದ ಪದ್ಧತಿಯಂತೆ ಲಭ್ಯವಿರುವ ಖಾತಾಗಳ, ದಾಖಲೆಗಳ ಆಧಾರದ ಮೇಲೆ ನೋಂದಣಿ ಪ್ರಕ್ರಿಯೆ ನಿರ್ವಹಿಸಬೇಕು ಎಂದು ಮೈಗ್ರಾಪ ಸದಸ್ಯ, ಮುಡಾ ನಿವೃತ್ತ ಅಧಿಕಾರಿ ನಟರಾಜ್, ಅಧಿಕಾರಿಗಳಿಗೆ ಸಲಹೆ ನೀಡಿದರು.

ಸಬೂಬ ಹೇಳಿ ವಿಳಂಬ: ವಲಯ ಕಚೇರಿ 4ರಲ್ಲಿ ಇ–ಖಾತಾಗೆ ಅರ್ಜಿ ಹಾಕಿ ಹಲವು ತಿಂಗಳಾದರೂ ಮಾಡಿಕೊಡುತ್ತಿಲ್ಲ. ಕೆಳ ಹಂತದ ನೌಕರರು, ನಮ್ಮಿಂದ ಲಂಚ ಪಡೆಯಲು ಏನೇನೋ ಸಬೂಬು ಹೇಳಿಕೊಂಡು ಕಳೆದೊಂದು ವರ್ಷದಿಂದ ದಿನ ದೂಡುತ್ತಿದ್ದಾರೆ. ಯಾವುದೇ ನಿವೇಶನ ನೋಂದಣಿ ಮಾಡಬೇಕಾದರೆ ಮತ್ತು ಬ್ಯಾಂಕ್‌ನಲ್ಲಿ ಸಾಲ ಪಡೆಯಲು ಇ–ಖಾತಾ ಅತ್ಯವಶ್ಯಕ. ಆದರೆ, ವಲಯ ಕಚೇರಿಗಳಲ್ಲಿ ಇ–ಖಾತಾ ಪಡೆಯಲು ಅರ್ಜಿ ಹಾಕಿ ಎಲ್ಲಾ ದಾಖಲಾತಿ ನೀಡಿದ್ದರೂ ನಮಗೆ ಇ–ಖಾತಾ ಪ್ರಮಾಣ ಪತ್ರ ಸಿಕ್ಕಿಲ್ಲ ಎಂದು 15ಕ್ಕೂ ಹೆಚ್ಚು ಸದಸ್ಯರು, ಅಧಿಕಾರಿಗಳಿಗೆ ತಮ್ಮ ತಮ್ಮ ಅರ್ಜಿ ಸಂಖ್ಯೆ ಹಿಡಿದು ಮೊಬೈಲ್ ಮೂಲಕ ದಾಖಲಾತಿ ತೋರಿಸಿದರು.

ಹಲವು ವರ್ಷದ ಹಿಂದಿನ ಪರವಾನಿಗೆ ಕೇಳುತ್ತಾರೆ: 10 ವರ್ಷಗಳ ಹಿಂದೆ ಕಟ್ಟಿದ ಮನೆಗೆ ಇ–ಖಾತಾ ಮಾಡಿಸುವಾಗ, ಮನೆ ನಿರ್ಮಿಸುವಾಗ, ಮನೆ ಕಟ್ಟಲು ನೀಡಿದ ಪರವಾನಗಿ ಕೇಳುತ್ತಾರೆ. ಮನೆ ನಿರ್ಮಿಸುವಾಗ ಎಲ್ಲಾ ದಾಖಲೆ ಇಟ್ಟುಕೊಂಡಿರುವುದಿಲ್ಲ. ಈಗ ಅರ್ಜಿ ಸಲ್ಲಿಸಿದರೆ, ತಿಂಗಳು ಗಟ್ಟಲೆ ಕಚೇರಿಗೆ ಅಲೆಯಬೇಕು ಯಾವ ಕೆಲಸವೂ ವೇಗವಾಗಿ ನಡೆಯುತ್ತಿಲ್ಲ. ಹೆಚ್ಚಾಗಿ ಹಿರಿಯ ನಾಗರಿಕರು ಕಚೇರಿಗಳಿಗೆ ಬರುತ್ತಾರೆ. ಅವರಿಗೆ ಸೂಕ್ತ ಮರ್ಗದರ್ಶನ ನೀಡಬೇಕು ಸಭೆಯಲ್ಲಿ ಅಧಿಕಾರಿಗಳಲ್ಲಿ ಮನವಿ ಮಾಡಿದರು.

ಸಭೆಯಲ್ಲಿ ಮೈಗ್ರಾಪ ಸದಸ್ಯರಾದ ಶೋಭನ, ಪಿ.ಎಂ.ಭಟ್, ಡಿ.ವಿ.ದಯಾನಂದಸಾಗರ್, ಆರ್.ವಿ.ರಾಮನಾಥ್, ಭಾಮೀ ವಿ.ಶಣೈ, ಜಿ.ಶ್ರೀಧರ್, ಹೆಚ್.ಟಿ.ರವಿಪ್ರಶಾಂತ್, ಎಸ್.ವಿ.ಶಂಕರ್, ಕೆ.ಜಿ.ಶಶಿಧರ್, ಸುಧಾಕರ್, ಡಾ.ಜಿ.ಪಾಂಡುರಂಗ ಮೂರ್ತಿ, ಕೆ.ವಿ.ಭಾನುಪ್ರಶಾಂತ್, ವಿಶ್ವನಾಥ್, ಅರುಣ್ ಕುಮಾರ್ ಶೆಟ್ಟರ್, ಪ್ರಭಾನಂದೀಶ್, ರವಿಶಂಕರ್ ಬಳೆ, ಎಂ.ಜಾನಕಿರಾಮನ್, ಯುಆರ್.ಚೇತನ್, ಡಿ.ರವೀಂದ್ರ, ರಾಜಶಂಕರಪ್ಪ, ಎನ್.ಮೀನಾಕ್ಷಿ, ಮಂಜುನಾಥ್, ರಾಕೇಶ್, ಬಿ.ಕೆ.ಪ್ರಸನ್ನ ಸೇರಿದಂತೆ ಇತರಿದ್ದರು.

ಮೈಸೂರು ಜಿಲ್ಲಾ ಪೊಲೀಸ್ ಕ್ರೀಡಾಕೂಟ

ಡಿಎಆರ್‌ಗೆ ಮತ್ತೊಮ್ಮೆ ಚಾಂಪಿಯನ್ ಪಟ್ಟ

ಮೈಸೂರು, ಡಿ.8(ಎಂಕೆ)– ಮೈಸೂರು ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆ (ಡಿಎಆರ) ಮತ್ತೊಮ್ಮೆ ಚಾಂಪಿಯನ್ ಆಯಿತು.

ಮೈಸೂರಿನ ಜ್ಯೋತಿನಗರದಲ್ಲಿರುವ ಡಿಎಆರ್ ಕವಾಯತು ಮೈದಾನದಲ್ಲಿ ಕಳೆದ ಎರಡು ದಿನಗಳಿಂದ ನಡೆದ ವಾರ್ಷಿಕ ಕ್ರೀಡಾಕೂಟದಲ್ಲಿ 67 ಅಂಕಗಳನ್ನು ಪಡೆಯುವ ಮೂಲಕ ಡಿಎಆರ್ ತಂಡ ಸರ್ವೋತ್ತಮ ಪ್ರಶಸ್ತಿ ಪಡೆದುಕೊಂಡಿತು.



ಮೈಸೂರು ಜಿಲ್ಲಾ ಪೊಲೀಸ್ ವಾರ್ಷಿಕ ಕ್ರೀಡಾಕೂಟದಲ್ಲಿ ಡಿಎಆರ್ ತಂಡಕ್ಕೆ ಸರ್ವೋತ್ತಮ ಪ್ರಶಸ್ತಿ ನೀಡಲಾಯಿತು.

ಪುರುಷ ವಿಭಾಗದಲ್ಲಿ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ ಎಪಿಸಿ ಜಿ.ಜಿ.ರಘುನಂದನ್, 100, 400 ಮತ್ತು 800 ಮೀಟರ್ ಓಟ, ಉದ್ದ ಮತ್ತು ಎತ್ತರ ಜಿಗಿತದಲ್ಲಿ ಪ್ರಥಮ ಸ್ಥಾನದೊಂದಿಗೆ 25 ಅಂಕಗಳನ್ನು ಪಡೆಯುವ ಮೂಲಕ ಸರ್ವೋತ್ತಮ ಪ್ರಶಸ್ತಿ ಪಡೆದರೆ, ಮಹಿಳಾ ವಿಭಾಗದಲ್ಲಿ ಬೈಲಕುಪ್ಪ ಪೊಲೀಸ್ ಠಾಣೆಯ ಎಂಪಿಸಿ ಹೆಚ್.ಎಸ್.ಅಶ್ವಿತಾ, 10 ಮೀಟರ್ ಓಟ, ಶಾಟ್‌ಪುಟ್, ಉದ್ದ ಮತ್ತು ಎತ್ತರ ಜಿಗಿದಲ್ಲಿ ಪ್ರಥಮ ಸ್ಥಾನದೊಂದಿಗೆ 20 ಅಂಕಗಳನ್ನು ಪಡೆಯುವ ಸರ್ವೋತ್ತಮ ಪ್ರಶಸ್ತಿಗೆ ಭಾಜನರಾದರು.

ಗುಂಪು ವಿಭಾಗ: ಮಹಿಳೆಯರ ಗುಂಪು ವಿಭಾಗದ ಹಗ್ಗ–ಜಗ್ಗಾಟ(ಟಗ್ ಆಫ್ ವಾರ್) ಪಿಐ ಗೀತಾ ನೇತೃತ್ವದ ತಂಡ ಪ್ರಥಮ ಸ್ಥಾನ ಗೆದ್ದರೆ, ಪಿಐ ಲೋಲಾಕ್ಷಿ ತಂಡ ರನ್ನರ್ ಅಪ್ ಆಯಿತು. ಪುರುಷರ ವಿಭಾಗದ ಹಗ್ಗ–ಜಗ್ಗಾಟದಲ್ಲಿ ಡಿಎಆರ್ ತಂಡ ಜಯ ಸಾಧಿಸಿದರೆ, ಹುಣಸೂರು ದ್ವಿತೀಯ ಸ್ಥಾನ ಪಡೆಯಿತು.

ಹಾಗೆಯೇ ಶೆಟಲ್ ಕಾಕ್ ಸಿಂಗಲ್ಸ್‌ನಲ್ಲಿ ಸೋಕೋ ವಿಭಾಗದ ಪಿಎಸ್‌ಐ ಮೋಹಿತ್ ಕುಮಾರ್ ಪ್ರಥಮ, ಡಿಎಆರ್‌ನ ಆರ್‌ಎಸ್‌ಐ ಎಸ್.ವಸಂತ ಕುಮಾರ್ ಹಾಗೂ ತಳವಾರ್ ಮಾರಪ್ಪ ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದರು. ಅಲ್ಲದೆ ನಿರೂಪಕರಾದ ಆರ್‌ಎಸ್‌ಐ ಎಂ.ಕೆ.ಸುನೀಲ್, ನಿವೃತ್ತ ಆರ್‌ಎಸ್‌ಐ ಎಂ.ಬಾಬು, ಫೋಟೋಗ್ರಾಫರ್ ಸಿಹೆಚ್‌ಸಿ ರವಿ ಹಾಗೂ ಡ್ರೋನ್ ಆಪರೇಟರ್ ಎಪಿಸಿ ಬಿ.ಸುದರ್ಶನ್ ಅವರಿಗೆ ವಿಶೇಷ ಬಹುಮಾನ ನೀಡಿ ಅಭಿನಂದಿಸಲಾಯಿತು.

ಕ್ರೀಡೆ ಅವಶ್ಯ: ಕ್ರೀಡಾಕೂಟ ಸಮಾರೋಪದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ವಿಜೇತರಿಗೆ ದಕ್ಷಿಣ ವಲಯ ಡಿಜಿಪಿ ಡಾ.ಎಂ.ಬಿ.ಬೋರಲಿಂಗಯ್ಯ ವಿಜೇತರಿಗೆ ಬಹುಮಾನ ವಿತರಿಸಿದರು.

ಬಳಿಕ ಮಾತನಾಡಿದ ಅವರು, ಪೊಲೀಸರು ದೈಹಿಕ ಹಾಗೂ ಮಾನಸಿಕವಾಗಿ ಸದೃಢ'ರಾಗಿಬೇಕಾದ'ರೆ ಕ್ರೀಡೆ ಅತ್ಯವಶ್ಯಕವಾಗಿದೆ ಎಂದು ತಿಳಿಸಿದರು.

ಸಮವಸ್ತ್ರ ಧರಿಸುವ ಪೊಲೀಸ್ ಇಲಾಖೆಯಲ್ಲಿ ಕ್ರೀಡಾಕೂಟಗಳು ನಡೆಯುವುದು ಸಾಮಾನ್ಯ. ಏಕೆಂದರೆ ಪೊಲೀಸರಿಗೆ ಫಿಟ್ನೆಸ್ ಎಂಬುದು ಬಹಳ ಮುಖ್ಯವಾಗಿ ಬೇಕಾಗಿದೆ. ದಿನದ 24 ಗಂಟೆಗೂ ಕರ್ತವ್ಯ ನಿರ್ವಹಿಸಬೇಕಾದ ಅನಿವಾರ್ಯತೆ ಹೊಂದಿರುವ ಪೊಲೀಸರು ದೈಹಿಕವಾಗಿ, ಮಾನಸಿಕವಾಗಿ ಆರೋಗ್ಯವಾಗಿರಬೇಕಾದರೆ ಕ್ರೀಡೆಗಳಲ್ಲಿ ತೊಡಗಿಕೊಳ್ಳಬೇಕು. ಕನಿಷ್ಠ ವಾರದಲ್ಲಿ ನಾಲ್ಕು ದಿನವಾದರೂ ದೈಹಿಕ ಕಸರತ್ತು ನಡೆಸಬೇಕು ಎಂದು ಸಲಹೆ ನೀಡಿದರು.

ಕುಟುಂಬದ ಹಬ್ಬ: ಪೊಲೀಸರ ವಾರ್ಷಿಕ ಕ್ರೀಡಾಕೂಟ ಪೊಲೀಸ್ ಕುಟುಂಬದ ಹಬ್ಬವಾಗಿದೆ. ಪೊಲೀಸರ ಜೊತೆಗೆ ಅವರ ಕುಟುಂಬಸ್ಥರು ಸಹ ಕ್ರೀಡೆಯಲ್ಲಿ ಭಾಗವಹಿಸುವುದು ವಿಶೇಷ. ಒತ್ತಡದ ಜೀವನದಿಂದ ಸ್ವಲ್ಪ ಸಮಯವಾದರೂ ರಿಲ್ಯಾಕ್ಸ್ ಆಗಲು ಕ್ರೀಡಾಕೂಟ ಸಹಕಾರಿಯಾಗಿದೆ ಎಂದು ಶ್ಲಾಘಿಸಿದರು. ಎಸ್‌ಪಿ ಎನ್.ವಿಷ್ಣುವರ್ಧನ್, ಎಎಸ್‌ಪಿ ಎಲ್.ನಾಗೇಶ್ ಮತ್ತಿತರರಿದ್ದರು.

ದಲಿತ್ ವಾಯ್ಸ್ ಪತ್ರಿಕೆ ಸಂಸ್ಥಾಪಕ ಸಂಪಾದಕ ವಿ.ಟಿ.ರಾಜಶೇಖರ್‌ಗೆ ನುಡಿ ನಮನ

ಮೈಸೂರು,ಡಿ.8(ಪಿಎಂ)– ಇಡೀ ಭಾರತದಲ್ಲಿ ದಲಿತ ಚಳವಳಿಯ ಹುಟ್ಟು ಬೆಳವಣಿಗೆಯನ್ನು ದಾಖಲಿಸುವ ನಿಟ್ಟಿನಲ್ಲಿ ವಿ.ಟಿ.ರಾಜಶೇಖರ್ ಅವರ ದಲಿತ್ ವಾಯ್ಸ್ ನಿಯತಕಾಲಿಕೆಯ 30 ವರ್ಷಗಳ ಅವಧಿಯ ಸಂಚಿಕೆಗಳನ್ನು ಸಂಪುಟ ಮಾದರಿಯಲ್ಲಿ ಸರ್ಕಾರ ಪ್ರಕಟಿಸಲು ಮುಂದಾಗಬೇಕು ಎಂದು ಹಿರಿಯ ಸಾಹಿತಿ ಪ್ರೊ. ಅರವಿಂದ ಮಾಲಗತ್ತಿ ಹೇಳಿದರು.



ಮೈಸೂರಿನ ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ಭಾನುವಾರ ಪತ್ರಕರ್ತ ವಿ.ಟಿ.ರಾಜಶೇಖರ್ ಅವರ ಭಾವಚಿತ್ರಕ್ಕೆ ಜ್ಯೋತಿ ಬೆಳಗಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರಿನ ವಿಶ್ವಮೈತ್ರಿ ಬುದ್ಧವಿಹಾರದಲ್ಲಿ ಪ್ರಜ್ಞಾ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಜಂಟಿ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ದಲಿತ್ ವಾಯ್ಸ್ ನಿಯತಕಾಲಿಕೆಯ ಸಂಸ್ಥಾಪಕ ಸಂಪಾದಕ ವಿ.ಟಿ.ರಾಜಶೇಖರ್ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ವಿ.ಟಿ.ರಾಜಶೇಖರ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಿ ಅವರು ಮಾತನಾಡಿದರು.

ಇಷ್ಟೊತ್ತಿಗಾಗಲೇ ವಿ.ಟಿ.ರಾಜಶೇಖರ್ ಅವರ ಬಗ್ಗೆ ಸಾಕಷ್ಟು ಕೆಲಸಗಳು ಆಗಬೇಕಿತ್ತು. ಅವರು ಸಾಕಷ್ಟು ಪುಸ್ತಕಗಳನ್ನು ಬರೆದಿದ್ದು, ಅವುಗಳು ಸಣ್ಣ ಪುಸ್ತಕಗಳಾದರೂ ಮಹತ್ವದ ವಿಚಾರಗಳನ್ನು ಅವುಗಳಲ್ಲಿ ದಾಖಲಿಸಿದ್ದಾರೆ. ದಲಿತರಾದ ನಾವೇ ಅವರನ್ನು ಗುರುತಿಸುವ ಮಟ್ಟದಲ್ಲಿ ಗುರುತಿಸಲಿಲ್ಲ. ನಾವು ದಲಿತ ಹೋರಾಟಗಾರನ್ನು ಗುರುತಿಸಿ ಉತ್ತೇಜಿಸುವಲ್ಲಿ ಹಿಂದುಳಿದ್ದಿದ್ದೇವೆ. ಇನ್ನಾದರೂ ಗುರುತಿಸಿ ಉತ್ತೇಜಿಸುವ ಅಗತ್ಯವಿದೆ. ಒಂದು ವೇಳೆ ಹಾಗೆ ಮಾಡದಿದ್ದರೆ ಹೋರಾಟಗಾರರಲ್ಲಿ ಅನಾಥ ಪ್ರಜ್ಞೆ ಮೂಡಲಿದೆ. ಯಾವುದೇ ಪ್ರಶಸ್ತಿಗಳನ್ನು ನೀಡುವ ಸಂದರ್ಭದಲ್ಲಿ ವಿ.ಟಿ.ರಾಜಶೇಖರ್ ಅವರ ಹೆಸರಿನಲ್ಲಿ ಕೊಡುವ ಕೆಲಸವಾಗಬೇಕು ಎಂದು ತಿಳಿಸಿದರು.

ಜಾತಿವಾದ, ಮತಾಂತರ, ಬೂಸ ಪ್ರಕರಣ, ಜಾತಿ ವ್ಯವಸ್ಥೆ ನಿರ್ಮೂಲನೆ ಸೇರಿದಂತೆ ಹಲವು ಮಹತ್ವ ವಿಚಾರಗಳ ಮೇಲೆ ಅವರ ಪುಸ್ತಕಗಳು ಬೆಳಕು ಚೆಲ್ಲಿವೆ. ಅವರದು ಖಾರವಾದ ಬರವಣಿಗೆಯಾಗಿದ್ದು, ಪ್ರಶ್ನೆಗಳ ಎತ್ತಿ ಉತ್ತರಗಳನ್ನು ನೀಡುವ ಪರಿಭಾಷೆಯ ಲೇಖಕರು ಅವರಾಗಿದ್ದರು. ರಾಷ್ಟ್ರೀಯ ಮಟ್ಟದಲ್ಲಿ ಪ್ರಾತಿನಿಧಿಸುವಂತಹ ಹಾಗೂ ಸಂಘರ್ಷಕ್ಕೆ ಕಾರಣವಾದ ಘಟನೆಗಳನ್ನು ಇಟ್ಟುಕೊಂಡು ಅವರು ಬರೆಯುತ್ತಿದ್ದರು ಎಂದರು.

ಅವರು ಮೊದಮೊದಲು ಮಾರ್ಕ್ಸ್‌ವಾದಿಯಾಗಿದ್ದರೂ ಅನಂತರದಲ್ಲಿ ಅವರು ಪಕ್ಕಾ ಅಂಬೇಡ್ಕರ್‌ವಾದಿ ವಿಚಾರಗಳನ್ನೇ ಧಾರಣೆ ಮಾಡಿಕೊಂಡಿದ್ದರು. ದಲಿತ್ ವಾಯ್ಸ್ ಸಣ್ಣ ಪತ್ರಿಕೆಯಾದರೂ ಭಾರತದಲ್ಲಿ ಸಂಚಲನ ಸೃಷ್ಟಿ ಮಾಡಿದೆ. ವಿ.ಟಿ.ರಾಜಶೇಖರ್ ಅವರ ಮಾತಿನಲ್ಲಿ ಗಟ್ಟಿತನ ಇತ್ತು. ಅಂಬೇಡ್ಕರ್ ಅವರೇ ಅವರಲ್ಲಿ ನಿಂತು ಮಾತನಾಡುತ್ತಿದ್ದಾರೆನೋ ಎನ್ನುವಂತಾಗುತ್ತಿತ್ತು ಅವರ ಎಲ್ಲಾ ಕಾರ್ಯಚಟುವಟಿಕೆಗಳು ಜನಸಾಮಾನ್ಯರು ಹಾಗೂ ತಳಸಮುದಾಯದ ಪರವಾಗಿತ್ತು ಅಮ ಅಪಾರ ಬದ್ಧತೆ ಹೊಂದಿದ್ದರು ಎಂದರು.

ಹಿರಿಯ ಹೋರಾಟಗಾರ ಬೆಂಗಳೂರಿನ ಗೋಪಿನಾಥ್, ಸಹಕಾರ ಇಲಾಖೆ ನಿವೃತ್ತ ಅಪರ ನಿಬಂಧಕ ಎಸ್.ಚಿಕ್ಕಸವಕ, ಮಾಜಿ ಮೇಯರ್ ಪುರುಷೋತ್ತಮ್, ಹವ್ಯಾಸಿ ಬರಹಗಾರ ಹ.ರಾ.ಕುಮಾರ್, ಪ್ರಜ್ಞಾ ಟ್ರಸ್ಟ್ ಅಧ್ಯಕ್ಷ ಸೋಸಲೇ ಸಿದ್ದರಾಜು, ನಿವೃತ್ತ ಪ್ರಾಧ್ಯಾಪಕ ಪ್ರೊ.ನಂಜರಾಜೇ ಅರಸ್, ಮುಖಂಡ ಅಹಿಂದ ಜವರಪ್ಪ, ವಕೀಲ ಆರ್.ಲಕ್ಷ್ಮಣ್ ಮತ್ತಿತರರು ಹಾಜರಿದ್ದರು.

3.65 ಕೋಟಿ ವೆಚ್ಚದಲ್ಲಿ ಎನ್.ಆರ್.ಕ್ಷೇತ್ರದ ವಿವಿಧ ಶಾಲೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಎನ್.ಆರ್.ಕ್ಷೇತ್ರದ ವಿವಿಧ ಶಾಲೆಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಶಾಸಕ ತನ್ವೀರ್ ಸೇಠ್ ಚಾಲನೆ ನೀಡಿದರು. ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್, ಮುಡಾ ಆಯುಕ್ತ ರಘುನಂದನ್ ಇನ್ನಿತರರಿದ್ದಾರೆ.

ಮೈಸೂರು, ಡಿ.8–ಮೈಸೂರಿನ ಬನ್ನಿಮಂಟಪದಲ್ಲಿರುವ ಅಫ್ನಾಫರ್ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅವರು ವಿವಿಧ ಶಾಲೆಗಳ ಶೈಕ್ಷಣಿಕ ಗುಣಮಟ್ಟ ಉತ್ತಮಪಡಿಸುವ ನಿಟ್ಟಿನಲ್ಲಿ 3.65 ಕೋಟಿ ರೂ. ವೆಚ್ಚದ ಕಾಮಗಾರಿಗಳಿಗೆ ಚಾಲನೆ ನೀಡಿದ್ದಲ್ಲದೇ, ಶಾಲೆಗಳಿಗೆ ಪೀಠೋಪಕರಣಗಳನ್ನು ವಿತರಿಸಿದರು.

ಈ ವೇಳೆ ಮಾತನಾಡಿದ ಅವರು, ಮುಡಾದಿಂದ 1.25 ಕೋಟಿ ವೆಚ್ಚದಲ್ಲಿ ರಾಜೀವ್‌ನಗರದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಟ್ಟಡ ನಿರ್ಮಾಣ, ಕೆಆರ್‌ಐಡಿಎಲ್ ಸಿಎಸ್‌ಆರ್ ಅನುದಾನದಲ್ಲಿ 75 ಲಕ್ಷ ರೂ. ವೆಚ್ಚದಲ್ಲಿ ಶಾಲಾ ಕೊಠಡಿ, ಪ್ರಯೋಗಾಲಯ ಹಾಗೂ ಗ್ರಂಥಾಲಯ ನಿರ್ಮಾಣ ಮಾಡಲಾಗುತ್ತಿದೆ ಕಲ್ಯಾಣಗಿರಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಮುಡಾದಿಂದ 1.50 ಕೋಟಿ ರೂ. ವೆಚ್ಚದಲ್ಲಿ ಶಾಲಾ ಕೊಠಡಿಗಳು ಹಾಗೂ ಶೌಚಾಲಯ ನಿರ್ಮಾಣಕ್ಕೆ ಡಿಪಿಆರ್ ಸಿದ್ಧಪಡಿಸಲಾಗಿದೆ.

ಕೆಎಸ್‌ಡಿಎಲ್ ಸಂಸ್ಥೆಯ 50 ಲಕ್ಷ ರೂ. ಸಿಎಸ್‌ಆರ್ ಅನುದಾನದಲ್ಲಿ ನಿಜಾಮಿಯಾ ಸರ್ಕಾರಿ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶಾಲಾ ಕೊಠಡಿ ಹಾಗೂ ಪ್ರಯೋಗಾಲಯ ನಿರ್ಮಾಣ ಮಾಡಲಾಗುತ್ತಿದೆ. ಆರ್‌ಎಂಎಸ್‌ಎ ಯೋಜನೆಯಡಿ ಬನ್ನಿಮಂಟಪ ಹುಡ್ಕೋ ಸರ್ಕಾರಿ ಪ್ರೌಢಶಾಲೆಯಲ್ಲಿ 76 ಲಕ್ಷ ಹಾಗೂ ನಿಜಾಮಿಯಾ ಪ್ರೌಢಶಾಲೆಯಲ್ಲಿ 75 ಲಕ್ಷದಲ್ಲಿ ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಲಾಗಿದೆ ಎಂದರು.

ಅಲ್ಲದೇ ಒಟ್ಟಾರೆ 23 ಶಾಲಾ ಕೊಠಡಿಗಳ ನಿರ್ಮಾಣ, 2 ಅಂಗನವಾಡಿ ಕೇಂದ್ರಗಳ ನಿರ್ಮಾಣ, 27 ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆ ಮಾಡಲಾಗುತ್ತಿದೆ ಎಂದು ಹೇಳಿದರು. ಇದೇ ವೇಳೆ 23 ಶಾಲೆಗಳಿಗೆ 380 ಡೆಸ್ಕ್‌ಗಳು, 25 ಶಾಲೆಗಳಿಗೆ ಬ್ಯಾಂಡ್ ಸೆಟ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ನಗರ ಪಾಲಿಕೆ ಆಯುಕ್ತ ಅಸಾದ್ ಉರ್ ರೆಹಮಾನ್ ಷರೀಫ್, ಮುಡಾ ಆಯುಕ್ತ ಎ.ಎನ್.ರಘುನಂದನ್, ಬಿಇಓ ರೇವಣ್ಣ, ಡಿಡಿಪಿಐ ಪಾಂಡುರಂಗ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಸಯ್ಯದ್ ಎಕ್ಬಾಲ್, ಜಿ.ಎನ್.ಮಂಜುನಾಥ್, ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶೌಕತ್ ಅಲಿ, ಅನ್ವರ್ ಪಾಷಾ (ಅಣ್ಣು), ಸಯ್ಯದ್ ಫಾರೂಖ್, ಶಹಿನ್ ಷಾ ಅಹಮದ್ ಮತ್ತಿತರರು ಉಪಸ್ಥಿತರಿದ್ದರು.

ಮಠಗಳಿಂದಲೇ ಧರ್ಮ, ಸಂಸ್ಕೃತಿ, ದಾಸೋಹ ಉಳಿದಿದೆ

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅಭಿಮತ

ಮೈಸೂರು, ಡಿ.8(ಎಂಟಿವೈ)– ದೇಶದಲ್ಲಿ ಮಠಗಳಿಂದಲೇ ಇಂದಿಗೂ ಧರ್ಮ, ಸಂಸ್ಕೃತಿ, ದಾಸೋಹ ಉಳಿದಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಶ್ಲಾಘಿಸಿದ್ದಾರೆ.

ಮೈಸೂರು ತಾಲೂಕಿನ ಜಯಪುರ ಹೋಬಳಿಯ ಬರಡನಪುರ ಗ್ರಾಮದಲ್ಲಿ ಶ್ರೀ ಮಹಾಂತೇಶ್ವರ ಮಠದ ವತಿಯಿಂದ ಆಯೋಜಿಸಿದ್ದ ಪಟ್ಟಸ್ಥಲ ಬ್ರಹ್ಮೋಪದೇಶ ಪೂರ್ವಕ ಪಟ್ಟಾಧಿಕಾರ ಮಹೋತ್ಸವ ಮತ್ತು ಶ್ರೀ ಮಹಾಂತೇಶ್ವರ ಮಂಗಳ ಮಂಟಪ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದೇಶಕ್ಕೆ ಮಠಮಾನ್ಯಗಳ ಕೊಡುಗೆ ಅಪಾರ. ತ್ರಿವಿಧ ದಾಸೋಹದಲ್ಲಿ ಮಠಗಳು ತೊಡಗಿಸಿಕೊಂಡಿವೆ. ಅನ್ನ, ಶಿಕ್ಷಣ, ಆರೋಗ್ಯದಂತ ಕ್ಷೇತ್ರಗಳಲ್ಲಿ ಅತ್ಯಮೂಲ್ಯ ಸೇವೆ ಒದಗಿಸುತ್ತಿವೆ. ಅಲ್ಲದೆ, ದೇಶದ ಸಂಸ್ಕೃತಿ, ಆಚಾರ–ವಿಚಾರಗಳು, ಧರ್ಮ ಸಂರಕ್ಷಣೆಯಲ್ಲೂ ಮಠಗಳ ಪಾತ್ರ ಅತ್ಯಮೂಲ್ಯ ಎಂದರು.



ಮೈಸೂರು ತಾಲೂಕಿನ ಜಯಪುರ ಹೋಬಳಿಯ ಬರಡನಪುರ ಗ್ರಾಮದಲ್ಲಿ ಶ್ರೀ ಮಹಾಂತೇಶ್ವರ ಮಠದ ವತಿಯಿಂದ ಆಯೋಜಿಸಿದ್ದ ಪಟ್ಟಸ್ಥಲ ಬ್ರಹ್ಮೋಪದೇಶ ಪೂರ್ವಕ ಪಟ್ಟಾಧಿಕಾರ ಮಹೋತ್ಸವ ಮತ್ತು ಶ್ರೀ ಮಹಾಂತೇಶ್ವರ ಮಂಗಳ ಮಂಟಪ ಉದ್ಘಾಟನಾ ಕಾರ್ಯಕ್ರಮವನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಉದ್ಘಾಟಿಸಿದರು.

ಪರತತ್ವದ ಅರಿವಿನೊಂದಿಗೆ ಧರ್ಮದ ಜೀವನ ಸಾರ್ಥಕತೆ ತಂದು ಕೊಡಲಿದೆ. ಮಾನವನ ಆಂತರಿಕ ಶಾಂತಿ ನೆಮ್ಮದಿ ಕಾಪಾಡಲು ಧರ್ಮ ಸಹಾಯ ಮಾಡುತ್ತದೆ. ನಾವೆಲ್ಲರೂ ಕಾಯಕ ದಾಸೋಹದೊಂದಿಗೆ ಋಷಿ ಮುನಿಗಳ ಸಾಧನೆಯ ಹಾದಿಯಲ್ಲಿ ನಡೆಯಬೇಕು. ಸಾರ್ಥಕ ಬದುಕಿಗೆ ಧರ್ಮವೇ ಅಡಿಗಲ್ಲಾಗಿರುವುದರಿಂದ ಎಲ್ಲರೂ ಧರ್ಮ ಪಾಲನೆಗೆ ಹೆಚ್ಚು ಆದ್ಯತೆ ನೀಡಬೇಕು. ಧರ್ಮವೆಂದರೆ ಕೇವಲ ಆಚರಣೆ ಅಥವಾ ಪಂಥವಲ್ಲ, ಸತ್ಯದ ದಾರಿಯಲ್ಲಿ ಮಾನವ ಜೀವನ ಹಿಡಿದಿಡುವ ಮೌಲ್ಯಗಳಾಗಿವೆ ಎಂದು ಪ್ರತಿಪಾದಿಸಿದರು.

ನಾನು ಈ ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ಜನಿಸಿದ ಹೆಣ್ಣುಮಕ್ಕಳಿಗೆ ಭಾಗ್ಯ ಲಕ್ಷ್ಮೀ ಬಾಂಡ್ ವಿತರಣೆ ಮಾಡಿದ್ದು, ಹದಿನೆಂಟು ವರ್ಷ ತುಂಬಿದ ನಂತರ ಹಣ ಸಿಗುತ್ತದೆ. ಈ ಹಣದಲ್ಲಿ ಹೆಣ್ಣು ಮಕ್ಕಳಿಗೆ ಮದುವೆ ಮಾಡದೇ ಆಕೆಯ ಉನ್ನತ ಶಿಕ್ಷಣಕ್ಕೆ ವಿನಿಯೋಗ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಸ್ವಾಮೀಜಿಗಳು ಶಾಶ್ವತವಲ್ಲ. ಆದರೆ, ಅವರು ಮಾಡಿದ್ದ ಕೆಲಸ ಮಾತ್ರ ಶಾಶ್ವತವಾಗಿರುತ್ತದೆ. ಮಠಗಳು ಜನಸೇವೆಗೆ ಮಾಡುತ್ತಿರುವ ಸೇವಾ ಕಾರ್ಯ ಶಾಶ್ವತವಾಗಿಸುವ ನಿಟ್ಟಿನಲ್ಲಿರಬೇಕು ಎಂದರು.

ತುಮಕೂರಿನ ಸಿದ್ಧಗಂಗಾ ಕ್ಷೇತ್ರದ ಶ್ರೀ ಸಿದ್ದಲಿಂಗಸ್ವಾಮೀಜಿ ಮಾತನಾಡಿ, ಯಡಿಯೂರಪ್ಪ ಅವರು ಮಠಗಳ ಸೇವೆಯನ್ನು ಗುರುತಿಸಿದ್ದಾರೆ. ಬರಡನಪುರ ಮಠದ ಸ್ವಾಮಿಗಳು ಸಣ್ಣ ಪ್ರಮಾಣದಲ್ಲಿ ನಿರ್ಮಿಸಿದ್ದ ಈ ಮಠ ಅವರ ಶ್ರಮದಿಂದ ಹೆಮ್ಮರವಾಗಿದೆ. ರಾಜ್ಯದುದ್ದಕ್ಕೂ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಮಠಗಳು ಕಾರಣವಾಗಿದೆ ಎಂದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಸುತ್ತೂರು ಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಮಾರ್ಗದರ್ಶನದಿಂದ ಮಠ–ಮಾನ್ಯಗಳು ಶಿಕ್ಷಣ ಸೇವೆಯನ್ನು ನೀಡುತ್ತಿವೆ. ನಾನು ಹುಣಸೂರಿನ ಶಾಸಕನಾಗಿದ್ದ ಸಂದರ್ಭದಲ್ಲಿ ಯಡಿಯೂರಪ್ಪ ಅವರು ಕರೆ ಮಾಡಿ ಜೆಡಿಎಸ್ ಈ ಭಾಗದಲ್ಲಿ ಭದ್ರಕೋಟೆ, ಹಾಗಾಗಿ ಬನ್ನಿ ನಾನು ಮುಖ್ಯಮಂತ್ರಿ ಆಗುತ್ತೇನೆ ಎಂದಾಗ ತಕ್ಷಣ ನಾನು ಒಪ್ಪಿಕೊಂಡು ನಾನು ಬರುತ್ತೇನೆ ಎಂದು ಹೇಳಿದ್ದೆ. ಆದರೆ ಅವತ್ತಿನ ದಿನದಲ್ಲಿ ಯಡಿಯೂರಪ್ಪ ಅವರ ಬಳಿ ಜಿ.ಟಿ.ದೇವೇಗೌಡ ಹಣ ತೆಗೆದುಕೊಂಡಿದ್ದಾರೆಂದು ಅಪಪ್ರಚಾರ ಮಾಡಲಾಯಿತು ಎಂದು ವಿಷಾದಿಸಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ವಕೀಲ ಸುರೇಶ್, ಸಾಹಿತಿ ಶಂಕರ್ ದೇವನೂರು, ಮಹದೇಶ್ವರಬೆಟ್ಟದ ಶ್ರೀ ಸಾಲೂರು ಬ್ರಹ್ಮನ್ಮಠದ ಡಾ.ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಮೈಸೂರಿನ ಕುಂದೂರು ಮಠದ ಡಾ. ಶರತ್ ಚಂದ್ರಸ್ವಾಮಿ, ಮಹದೇಶ್ವರ ಮಠದ, ವೀರಶೈವ ಮುಖಂಡ ಪೊನ್ನಾಚಿ ಮಹದೇವಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವ ಸ್ವಾಮಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : ನೀವು ನಿನ್ನೆ ಹೆಚ್ಚು ಕುಡಿದಿದ್ರಾ?
ಗಂಡ : ಇಲ್ಲ, ನಾನು ನಿನ್ನೆ ಕುಡಿದೇ ಇರ್ಲಿಲ್ಲ
ಪತ್ನಿ : ಹಾಗಾದ್ರೆ, ನಲ್ಲಿಯ ಹತ್ತಿರ ಹೋಗಿ ಏಕೆ ಮಾತನಾಡ್ತಿದ್ರಿ?
'ಅಳಬ್ಯಾಡ... ಎಲ್ಲಾ ಸರಿ ಆಗ್ತದೆ' ಅಂತ....

ಮೈಸೂರು ಮಿತ್ರ

ಸೋಮವಾರ, 9 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

'ಮಳೆ ಬಂದರೆ ಮರದಡಿ ನಿಲ್ಲಬೇಡಿ, ಕಷ್ಟ ಬಂದರೆ ನೆಂಟರ ಮನೆಗೆ ಹೋಗಬೇಡಿ, ಸುಖ ಬಂದರೆ ನೀವು ನಂಬಿರುವ ದೇವರನ್ನು ಮರೆಯಬೇಡಿ...'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಕೀಟ ಸಣ್ಣದಾದರೂ ಕಾಟ ಬಹಳ್'

ನಿಮ್ಮ ಪತ್ರಗಳು

ಅಂಬೇಡ್ಕರ್ ಪರಿನಿರ್ವಾಣ ದಿನ ಸ್ಮರಿಸೋಣ

ಮಾನ್ಯರೆ,

ಡಿಸೆಂಬರ್, 6, 1956 ಡಾ.ಭೀಮ್‌ರಾವ್ ಅಂಬೇಡ್ಕರ್ ಅವರು ನಿಧನ



ಹೊಂದಿದ ದಿನ. ಇಡೀ ಜಗತ್ತೇ ದುಃಖಪಟ್ಟ ದಿನ. ಅಂಬೇಡ್ಕರ್ ಈ ದೇಶದ ದಲಿತರಿಗೆ ಸೂರ್ಯ. ಈ ದೇಶದ ಮಹಿಳೆ, ಶೋಷಿತ ಹಾಗೂ ದಮನಿತರ ಧ್ವನಿಯಾಗಿದ್ದವರು.

ದಲಿತರು ಎದೆ ಹುಬ್ಬೇರಿಸುವಂತೆ ನಿಲ್ಲುವ ಹಾಗೆ ಮಾಡಿದವರು ಡಾ.ಬಿ.ಆರ್.ಅಂಬೇಡ್ಕರ್. ಡಿ.6ರಂದು ದಲಿತರು ತಬ್ಬಲಿಯಾದ ದಿನ. ಭಾರತ ದೇಶದಲ್ಲಿ ತಾಂಡವಾಡುತ್ತಿದ್ದ ಶ್ರೇಣಿಕೃತ ಪದ್ಧತಿ ನಡುವೆ ಎಲ್ಲರಿಗೂ ಸ್ವಾತಂತ್ರ್ಯ, ಸಮಾನತೆ ತಂದು ಕೊಟ್ಟ ಮಹಾ ಚಿಂತಕ. ಏಕಕಾಲದಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನತೆ ತಂದುಕೊಟ್ಟ ರಾಷ್ಟ್ರ ಭಾರತ. ಇದಕ್ಕೆ ಮೂಲ ಕಾರಣರೂ ಡಾ.ಅಂಬೇಡ್ಕರ್. ಅವತ್ತಿನ ದಿನಗಳಲ್ಲಿ ಅತಿ ಹೆಚ್ಚು ಅಧ್ಯಯನ ಮಾಡಿದ ಕೆಲವೇ ವ್ಯಕ್ತಿಗಳಲ್ಲಿ ಅಂಬೇಡ್ಕರ್ ಕೂಡ ಒಬ್ಬರು. ಇಡೀ ಜೀವನ ಪರ್ಯಂತ ಸಮುದಾಯ ಮತ್ತು ಒಡನಾಡಿಗಳಿಗೆ ತಮ್ಮ ಜೀವನವನ್ನು ಮೀಸಲಾಗಿಟ್ಟ ಮಹಾನ್ ಮೇಧಾವಿ. ಅಂಬೇಡ್ಕರ್ ಇಲ್ಲದ ಭಾರತವನ್ನು ಇವತ್ತು ಕಲ್ಪನೆ ಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಇವತ್ತಿನ ಆಧುನಿಕ ಭಾರತಕ್ಕೆ ಡಾ.ಅಂಬೇಡ್ಕರ್ ದಾರಿದೀಪ. ಅವರು ಪರಿನಿರ್ವಾಣ ಹೊಂದಿದ ದಿನದ ಪುಣ್ಯ ಸ್ಮರಣೆ ಸ್ಮರಿಸೋಣ. **–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.**

ಕೆ.ಸಿ. ಬಡಾವಣೆಯ ಮುಂಭಾಗ ಪೆಟ್ಟಿಗೆ ಅಂಗಡಿಗಳನ್ನು ತೆರವುಗೊಳಿಸಿ

ಮಾನ್ಯರೆ,

ಮೈಸೂರಿನ ಚಾಮುಂಡಿಬೆಟ್ಟಕ್ಕೆ ಹೋಗುವ ರಸ್ತೆಯ ಪಕ್ಕ ಕೆ.ಸಿ.ಬಡಾವಣೆಯ ಪ್ರವೇಶ ದ್ವಾರದ ಬಳಿ ವೈದ್ಯನಾಥೇಶ್ವರ ಶಿವನ ದೇವಾಲಯದ ಮುಂಭಾಗ ಇತ್ತೀಚೆಗೆ ಕೆಲವು ಪೆಟ್ಟಿಗೆ ಅಂಗಡಿಗಳು ತಲೆ ಎತ್ತಿವೆ. ಇಲ್ಲಿ ಪ್ರವಾಸಿಗರ ಶೋಷಣೆ ದಿನನಿತ್ಯ ನಡೆಯುತ್ತಿದೆ. ಸಂಜೆಯಾದರೆ ಧೂಮಪಾನ, ಮದ್ಯಪಾನ, ಉಳಿದ ಪ್ಲಾಸ್ಟಿಕ್‌ಗಳಿಗೆ ಬೆಂಕಿ ಹಾಕಿ ಸುಡುವ ಮೂಲಕ ವಾಯುಮಾಲಿನ್ಯ ಮಾಡಲಾಗುತ್ತಿದೆ. ಅಲ್ಲಿ ಕಲುಷಿತ ನೀರು ಉಪಯೋಗಿಸುವುದರಿಂದ ಹಲವಾರು ರೋಗಗಳ ತಾಣವಾಗಿ ಪೆಟ್ಟಿಗೆ ಅಂಗಡಿಗಳು ಮಾರ್ಪಟ್ಟಿವೆ. ಗಲೀಜು ಮುಂತಾದವುಗಳು ಮಾಡುತ್ತಿರುವುದರಿಂದ ಬಡಾವಣೆಯ ನಿವಾಸಿಗಳಿಗೆ ತೊಂದರೆಯಾಗುತ್ತಿದೆ. ಕೆಲವರು ಪೆಟ್ಟಿಗೆ ಅಂಗಡಿ ಬಾಡಿಗೆಗೆ ಕೊಟ್ಟಿದ್ದು, ಅವ್ಯವಹಾರಗಳಿಗೆ ದಾರಿಯಾಗಿದೆ. ಆದ್ದರಿಂದ ಎಲ್ಲಾ ಪೆಟ್ಟಿಗೆ ಅಂಗಡಿಗಳನ್ನು ಈ ಕೂಡಲೇ ತೆರವುಗೊಳಿಸಬೇಕೆಂದು ಈ ಮೂಲಕ ಮನವಿ. **–ಬಡಾವಣೆಯ ನಿವಾಸಿಗಳು, ಮೈಸೂರು.**

ಶೀಘ್ರ ಡಾಂಬರೀಕರಣಗೊಳಿಸಿ

ಮಾನ್ಯರೆ,

ಮಂಡ್ಯ ತಾಲೂಕು, ದುದ್ದ ಹೋಬಳಿಯ ಮಾರ್ನಚಾಕನಹಳ್ಳಿ ಗ್ರಾಮದಿಂದ ಬಿಳಗೂಲಿ, ಪುಟ್ಟಕೊಪ್ಪಲು, ಮಾಚಳ್ಳಿ ಹಾಗೂ ಹುಲಿಕೆರೆ ಗ್ರಾಮದವರೆಗೆ ಸಂಪರ್ಕಿಸುವ ರಸ್ತೆ ಸಂಪೂರ್ಣ ಹಾಳಾಗಿದ್ದು, ಸಾರ್ವಜನಿಕರ ಓಡಾಟ ಮತ್ತು ವಾಹನ ಸಂಚಾರ ಕಷ್ಟಕರವಾಗಿದೆ. ಹಲವು ವರ್ಷಗಳಿಂದ ರಸ್ತೆ ಹಾಳಾಗಿದ್ದರೂ, ರಸ್ತೆಗೆ ಡಾಂಬರೀಕರಣ ಮಾಡದೇ ಇರುವುದು ವಿಷಾದನೀಯ. ಈ ವಿಚಾರವಾಗಿ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತು ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಸಹ ನಿರ್ಲಕ್ಷ್ಯ ತೋರುತ್ತಿದ್ದಾರೆ. ಹದಗೆಟ್ಟ ಈ ರಸ್ತೆಯಲ್ಲಿ ಬಸ್ಸುಗಳು ಹಾಗೂ ದ್ವಿಚಕ್ರ ವಾಹನಗಳು ಓಡಾಡುತ್ತಿರುವುದರಿಂದ, ಆಗಾಗ್ಗೆ ಅಪಘಾತಗಳು ಸಂಭವಿಸುತ್ತಲೇ ಇದೆ. ಆದ್ದರಿಂದ ದಯವಿಟ್ಟು ಸಂಬಂಧಪಟ್ಟ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಇಲಾಖಾ ಅಧಿಕಾರಿಗಳು ಸದರಿ ರಸ್ತೆಗಳನ್ನು ಶೀಘ್ರದಲ್ಲಿ ಡಾಂಬರೀಕರಣಗೊಳಿಸಿ, ಸಾರ್ವಜನಿಕರು ಹಾಗೂ ವಾಹನಗಳ ಓಡಾಡಲು ಅನುವು ಮಾಡಿಕೊಡಬೇಕಾಗಿ ಮನವಿ.

–ಗ್ರಾಮಸ್ಥರು, ಮೇಲುಕೋಟೆ.

ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ ಇದೆಂತಹ ಭೇದ ಭಾವ

ಮಾನ್ಯರೆ,

ಇದೇ, ಡಿಸೆಂಬರ್ ತಿಂಗಳಿನಲ್ಲಿ ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ, ಗಣ್ಯರು ಮತ್ತು ಅತಿ ಗಣ್ಯರಿಗೆ ಹಾಗೂ ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿನಿಧಿಗಳು ಮತ್ತು ಇತರ ಅಧಿಕಾರಿಗಳಿಗೆ ಬೇರೆ-ಬೇರೆ ರೀತಿಯಲ್ಲಿ ಊಟದ ವ್ಯವಸ್ಥೆ ಮಾಡಿರುವುದಾಗಿ ಈಗಾಗಲೇ ಸಮ್ಮೇಳನದ ಆಹಾರ ಸಮಿತಿಯವರು ಮಾಧ್ಯಮಗಳ ಮುಂದೆ ಹೇಳಿ, ಮೆನುವನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದ್ದಾರೆ,

ಗಣ್ಯರು ಮತ್ತು ಅತಿ ಗಣ್ಯರಿಗೆ ವ್ಯವಸ್ಥೆ ಮಾಡಿರುವ" ಮೆನು" ಸ್ಟಾರ್ ಹೋಟೆಲ್‌ನ ಮೆನು ರೀತಿಯಲ್ಲಿ ಇದೆ, ತಿನ್ನುವ ಆಹಾರದಲ್ಲೇಕೆ ಬೇಧ-ಭಾವ ತೋರುವುದು, ಇದು ಒಂದು ರೀತಿಯಲ್ಲಿ ಭಾಗವಹಿಸುತ್ತಿರುವ ಪ್ರತಿನಿಧಿಗಳಿಗೆ ಮಾಡುತ್ತಿರುವ ಅವಮಾನವಲ್ಲವೆ? ಸಮ್ಮೇಳನದಲ್ಲಿ ಭಾಗವಹಿಸುವ ಪ್ರತಿನಿಧಿಗಳು ಮತ್ತು ಇತರರು ಮನುಷ್ಯರಲ್ಲವೇ? ಇವರುಗಳನ್ನೇಕೆ, ಎರಡನೆ ದರ್ಜೆಯ ಮನುಷ್ಯರಂತೆ ನೋಡುವುದು? ಇದೇನು ನಿಮ್ಮ ಮನೆಯಲ್ಲ, ಸಾರ್ವಜನಿಕರ ಸಮಾರಂಭ,!

ಸಮ್ಮೇಳನದಲ್ಲಿ ಭಾಗವಹಿಸುವ ಪೊಲೀಸ್ ಸಿಬ್ಬಂದಿ ಸೇರಿದಂತೆ, ಸಾರ್ವಜನಿಕರಿಗೂ ಒಂದೇ ರೀತಿಯ ಊಟದ ವ್ಯವಸ್ಥೆ ಮಾಡಿ, ಎಲ್ಲರನ್ನೂ ಸಮಾನವಾಗಿ ಕಾಣುವಂತಾಗಲಿ. **–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**

ದೇವಸ್ಥಾನದಲ್ಲಿ ಅವ್ಯವಸ್ಥೆ

ಮಾನ್ಯರೆ,


ಮೈಸೂರಿನ ಹೊರವಲಯದಲ್ಲಿರುವ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನಕ್ಕೆ ಸಹಸ್ರಾರು ಭಕ್ತಾದಿಗಳು ಪ್ರತಿದಿನ ಭೇಟಿ ನೀಡುತ್ತಾರೆ. ದೇವಸ್ಥಾನದ ಒಳ ಪ್ರವೇಶಿಸುವ ಜಾಗ ತುಂಬಾ ಎತ್ತರವಾಗಿದೆ. ಹಾಗೂ ದೇವಸ್ಥಾನದಿಂದ ದೇವಿಯ ದರ್ಶನ ಪಡೆದು ನಿರ್ಗಮಿಸುವಾಗ ತುಂಬಾ ಇಳಿಜಾರಿದೆ. ಇದರಿಂದ ಭಕ್ತರಿಗೆ ಹೋಗಲು, ಬರಲು ಕಷ್ಟವಾಗುತ್ತಿದೆ. ಈ ದೇವಸ್ಥಾನವು ರಾಜ್ಯ ಮುಜರಾಯಿ ಇಲಾಖೆಗೆ ಒಳಪಡುತ್ತದೆ. ಜನಪ್ರತಿನಿಧಿಗಳು, ಅಧಿಕಾರಿಗಳು ಸಹ ಭೇಟಿ ನೀಡುತ್ತಾರೆ. ಈ ಅವ್ಯವಸ್ಥೆ ತಪ್ಪಿಸಲು ದೇವಸ್ಥಾನದಲ್ಲಿ ಮೆಟ್ಟಿಲು ವ್ಯವಸ್ಥೆ ಮಾಡಿಕೊಡಲು ಮನವಿ. **–ಜಿ.ಪಿ.ರಾಜೇಶ್, ಸ್ನೇಹಿತರು, ಮೈಸೂರು.**

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.

47. ಎಸ್.ಜಿ.ನರಸಿಂಹಾಚಾರ್





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಪ್ರೈಮರಿ ಶಾಲೆಯಲ್ಲಿ ಓದುವಾಗ ನಾವು ಕಲಿತಿದ್ದ ಗೋವಿನ ಪದ್ಯದ 'ಇಟ್ಟರೆ ಸಗಣಿಯಾದೆ ತಟ್ಟಿದರೆ ಕುರುಳಾದೆ; ಸುಟ್ಟರೇ ನೊಸಲಿಗೆ ವಿಭೂತಿಯಾದೆ; ತಟ್ಟದೇ ಹಾಕಿದರೆ ಮೇಲುಗೊಬ್ಬರವಾದೆ; ನೀನಾರಿಗಾದೆಯೋ ಎಲೆ ಮಾನವ' ಸಾಲುಗಳನ್ನು ಇಂದಿಗೂ ಮರೆಯಲಾರೆವು. ಅದೇ ರೀತಿ 'ಬಾರೋ ನಾವಾಡುವ ಬಾರೋ, ಸಾರಿತು ತಿಂಗಳಿದೋ'; 'ಮರಳಿ ಯತ್ನವ ಮಾಡು, ಮರಳಿ ಯತ್ನವ ಮಾಡು' ಪದ್ಯಗಳ ಪ್ರಾರಂಭದ ಸಾಲುಗಳನ್ನು ಇಂದೂ ನಮ್ಮ ನೆನಪಿನಲ್ಲಿ ಉಳಿದು ಬಂದಿದ್ದರೆ ಆಶ್ಚರ್ಯವಿಲ್ಲ.

ಈ ಸುಲಭ-ಸುಂದರ ಬಾಲಕವನಗಳನ್ನು ರಚಿಸಿಕೊಟ್ಟವರು ಶ್ರೇಷ್ಠ ಕವಿಗಳೂ ವಿದ್ವಾಂಸರೂ ಆಗಿದ್ದ ಎಸ್.ಜಿ.ನರಸಿಂಹಾಚಾರ್ (1862–1907) ಅವರು. ಎಳೆಯ ವಯಸ್ಸಿನಲ್ಲೇ ಮನಸ್ಸಿನ ಮೇಲೆ ಪರಿಣಾಮ ಬೀರುವ ನೀತಿ ಕವನಗಳನ್ನು ಮಕ್ಕಳಿಗೆ ರಚಿಸಿಕೊಟ್ಟ ಆಚಾರ್ಯರು ಅವರು. ಅವರ ಬೋಧಪ್ರದ ಕವನಗಳು ಮುಂದೆ ಎಷ್ಟೋ ಜನಕ್ಕೆ ಆದರ್ಶವಾಯಿತು. ಬದುಕಿಗೊಂದು ಮಾರ್ಗ ಹಾಕಿಕೊಟ್ಟಿತು. ಅವರಲ್ಲಿ ಸಾಹಿತ್ಯಾಭಿರುಚಿ ಬೆಳೆಸಿತು. ಮಕ್ಕಳಿರಲಿ ದೊಡ್ಡವರೂ ಈ ಪದ್ಯಗಳನ್ನು ಮೆಚ್ಚಿ ಮೆಲುಕು ಹಾಕಿದರು. ಬಾಲ ಸಾಹಿತ್ಯಕ್ಕೆ ನರಸಿಂಹಾಚಾರ್ಯರ ಕೊಡುಗೆ ಅಷ್ಟು ಅಪಾರವಾದದ್ದು. ಇವರ ಮಳೆಗಾಲ, ಕಾಮನಬಿಲ್ಲು, ನೇಗಿಲು, ನಕ್ಷತ್ರ, ಕಾವೇರಿಯ ಮಹಿಮೆ, ಮಲಗುವ ಹೊತ್ತು, ಹೊಗೆಯ ಗಾಡಿ, ಚಂದ್ರ ಇತ್ಯಾದಿ ಕವನಗಳು ಜನಪ್ರಿಯವಾಗಿದ್ದವು. ಶಾಲೆಯ ಮಕ್ಕಳನ್ನೇ ಹೆಚ್ಚು ಗಮನದಲ್ಲಿಟ್ಟುಕೊಂಡು ಕಾವ್ಯ ರಚನೆ ಮಾಡಿದ ಇವರನ್ನು ಶಿಶುಸಾಹಿತ್ಯದ ಆದ್ಯ ಪ್ರವರ್ತಕರು ಎಂದರೆ ತಪ್ಪಾಗದು. ಈ ಕವನಗಳಲ್ಲದೆ ನರಸಿಂಹಾಚಾರ್ಯರು ಪ್ರೌಢಶಾಲೆಯ ವಿದ್ಯಾರ್ಥಿಗಳಿಗಾಗಿ 'ಹಿಂದೂ ದೇಶದ ನಾಗರಿಕ ತಾತ್ಪರ್ಯ ಸಹಿತವಾದ ಟಿಪ್ಪಣಿ' ಹಾಗೂ 'ಬಾಲ ಭೂ ವಿವರಣೆ' ಪುಸ್ತಕಗಳನ್ನು ಪ್ರಕಟಿಸಿದರು. ಕೆಲವು ಇಂಗ್ಲಿಷ್ ಪದ್ಯಗಳನ್ನು ಅನುವಾದ ಮಾಡಿ ಆ ಕಾರ್ಯದಲ್ಲಿ ಮೊದಲಿಗರಾದರು.

ನರಸಿಂಹಾಚಾರ್ಯರು ಮಕ್ಕಳಿಗೆ ಮಾತ್ರ ಕವನಗಳನ್ನು ರಚನೆ ಮಾಡಲಿಲ್ಲ. ಇವರು ಕವಿ, ಅನುವಾದಕ, ವಿಮರ್ಶಕ, ಸಂಶೋಧಕರೂ ಆಗಿದ್ದರು. ಕನ್ನಡ, ಸಂಸ್ಕೃತ, ಇಂಗ್ಲಿಷ್, ತಮಿಳು ಭಾಷೆಗಳ ದೊಡ್ಡ ವಿದ್ವಾಂಸರಾಗಿದ್ದರು. ಹಳಗನ್ನಡದಲ್ಲಿ ಅವರಿಗೆ ಅಪಾರ ಪಾಂಡಿತ್ಯವಿತ್ತು. ಕಾವ್ಯ ಹಾಗೂ ಗದ್ಯಗ್ರಂಥಗಳ ಭಾಷಾಂತರ ಮಾಡಿದ್ದಲ್ಲದೆ ಇವರು ಹಲವಾರು ಸ್ವತಂತ್ರ ಕೃತಿಗಳನ್ನು ರಚಿಸಿದರು. ಇವರು 1894ರಲ್ಲಿ ರಚಿಸಿದ ಶ್ರೀಚಾಮರಾಜೇಂದ್ರ ಒಡೆಯರ ಚರಮಗೀತೆ ಹಾಗೂ ಶ್ರೀಕೃಷ್ಣರಾಜ ಒಡೆಯರ್ ಪಟ್ಟಕ್ಕೆ ಬಂದಾಗ ರಚಿಸಿದ ಮಂಗಳ ಪದ್ಯ ಇವೂ ನರಸಿಂಹಾಚಾರ್ಯರು ಸ್ವತಂತ್ರವಾಗಿ ರಚಿಸಿದ ಪದ್ಯಗಳು.

ನರಸಿಂಹಾಚಾರ್ಯರು ಅನೇಕ ಹಳಗನ್ನಡ, ನಡುಗನ್ನಡ ಗ್ರಂಥಗಳನ್ನು ಪ್ರಕಟಿಸಿ ಹೊಸಗನ್ನಡ ಸಾಹಿತ್ಯದ ಪ್ರವರ್ತಕರಲ್ಲಿ ಅಗ್ರಗಣ್ಯರಾಗಿದ್ದರು. ಪ್ರಾಚೀನ ಕನ್ನಡ ಕಾವ್ಯಗಳನ್ನು ಹೊರತಂದ ಕೀರ್ತಿ ಇವರದು. ತಮ್ಮ ಬಂಧು ಆರ್. ನರಸಿಂಹಾಚಾರ್ಯರ ಜೊತೆಗೂಡಿ 'ಕರ್ಣಾಟಕ ಕವಿರಚನೆ'ಯ ಮೊದಲ ಸಂಪುಟ ಇವರಿಬ್ಬರ ಸಹ ಕರ್ತೃತ್ವದಲ್ಲಿ 1907ರಲ್ಲಿ ಪ್ರಕಟವಾಯಿತು. ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ನಡೆದ ಕರ್ನಾಟಕ ಗ್ರಂಥಕರ್ತರ ಸಮ್ಮೇಳನದ ಅಧ್ಯಕ್ಷರಾಗಿದ್ದರು ಅವರು.

ನರಸಿಂಹಾಚಾರ್ 1862ರ ಸೆಪ್ಟೆಂಬರ್ 11ರಂದು ಶ್ರೀರಂಗಪಟ್ಟಣದಲ್ಲಿ ಜನಿಸಿದರು. ತಂದೆ ಪೂಜಾಳಂ ಮನೆತನದ ಅಳಸಿಂಗರಾಚಾರ್ಯರು ಭಗವದ್ಭಕ್ತರು. ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಕೈಂಕರ್ಯ ಮಾಡುತ್ತಿದ್ದರು. ತಾಯಿ ಸೀತಮ್ಮನವರು. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡ ನರಸಿಂಹಾಚಾರ್ಯರು ಶ್ರೀರಂಗಪಟ್ಟಣದಲ್ಲಿಯೇ ಪ್ರಾರಂಭಿಕ ಶಿಕ್ಷಣ ಮುಗಿಸಿ ನಂತರ ಕಾಲೇಜು ಶಿಕ್ಷಣಕ್ಕಾಗಿ ಮೈಸೂರಿಗೆ ಬಂದು ಬಿ.ಎ. ಪದವಿ ಗಳಿಸಿದರು. 1887ರಲ್ಲಿ ಮೈಸೂರು ಸರಕಾರದ ವಿದ್ಯಾ ಇಲಾಖೆಗೆ ಸೇರಿ ಶ್ರೀರಂಗಪಟ್ಟಣದಲ್ಲಿ ಉಪಾಧ್ಯಾಯರಾಗಿ ಸ್ವಲ್ಪ ಕಾಲ ಸೇವೆ ಸಲ್ಲಿಸಿ ಸುಮಾರು 1891ರಲ್ಲಿ ಮೈಸೂರನ್ನು ತಮ್ಮ ಕಾರ್ಯ ಕ್ಷೇತ್ರವನ್ನಾಗಿ ಮಾಡಿಕೊಂಡರು.

ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ಪಂಡಿತರಾಗಿ ಸೇರಿ ಪಂಪ ಕವಿಯ 'ಆದಿ ಪುರಾಣ'ವನ್ನು ಸಂಪಾದಿಸಿದರು. ಅದನ್ನು 1900ರಲ್ಲಿ ಸಂಸ್ಥೆಯ ಪ್ರಪ್ರಥಮ ಕನ್ನಡ ಗ್ರಂಥವನ್ನಾಗಿ ಹೊರತಂದರು. ಈ ಗ್ರಂಥ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಗೆ ನಾಂದಿಯಾಯಿತು. ಸಂಸ್ಥೆಯ ಕೀರ್ತಿ ಹೆಚ್ಚಿತು. ಈ ಮಧ್ಯೆ ಅವರಿಗೆ ಸಂಸ್ಥೆಯ ಗ್ರಂಥಪಾಲಕರಾಗಿ ಬಡ್ತಿ ನೀಡಲಾಗಿತ್ತು. ಈ ಹುದ್ದೆಯಲ್ಲಿದ್ದಾಗ ನರಸಿಂಹಾಚಾರ್ಯರು ಮೈಸೂರು ವಿದ್ಯಾಭ್ಯಾಸ ಇಲಾಖೆಯ ಪಂಡಿತ ಪರೀಕ್ಷೆ, ದೇಶೀಯ ಪರೀಕ್ಷೆ ಮೊದಲಾದವುಗಳ ಪರೀಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಶಾಲಾ ಪರೀಕ್ಷೆಗಳಿಗೆ ಪ್ರಶ್ನೆಪತ್ರಿಕೆಗಳನ್ನು ಸಿದ್ಧಗೊಳಿಸಿ ಕೊಡುತ್ತಿದ್ದರು.

ನಂತರ 1902ರಲ್ಲಿ ಬೆಂಗಳೂರಿನಲ್ಲಿ ಮೈಸೂರು ಸರ್ಕಾರದ ವಿದ್ಯಾಭ್ಯಾಸ ಇಲಾಖೆಯ ಇನ್‌ಸ್ಪೆಕ್ಟರ್ ಜನರಲ್ ಅವರ ಕಛೇರಿಯಲ್ಲಿ ಸರಕಾರದ ಕನ್ನಡ ಭಾಷಾಂತರಕಾರರಾಗಿ ನೇಮಕಗೊಂಡರು. ಕನ್ನಡ ಭಾಷಾಭಿವೃದ್ಧಿ ಸಮಿತಿ, ಶಾಲಾ ಪಠ್ಯ ನಿಯಾಮಕ ಸಮಿತಿ, ಪರೀಕ್ಷಾ ಮಂಡಲಿಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದರು. ಶಾಲಾ ಪಠ್ಯ ನಿಯಾಮಕ ಸಮಿತಿಯಲ್ಲಿದ್ದಾಗ ನರಸಿಂಹಾಚಾರ್ಯರು ಸಮಿತಿಯ ಇತರೆ ಪಂಡಿತ ಸದಸ್ಯರ ಸಹಕಾರದೊಂದಿಗೆ ಕನ್ನಡ ನಾಲ್ಕನೇ ತರಗತಿಯ ಪಠ್ಯ ಪುಸ್ತಕ, ಆರನೆಯ ತರಗತಿಯ ಪಠ್ಯಪುಸ್ತಕಗಳನ್ನು ಸ್ವತಃ ರಚಿಸಿದರು.

1904ರಲ್ಲಿ ರುದ್ರಭಟ್ಟನ 'ಜಗನ್ನಾಥ ವಿಜಯ' ಕಾವ್ಯವನ್ನು ಸಂಪಾದಿಸಿ ಪ್ರಕಟಿಸಿದರು. ಈ ಹುದ್ದೆಗಳಲ್ಲಿದ್ದಾಗ ಅವರಿಗೆ ಹಲವಾರು ಪ್ರಸಿದ್ಧ ವಿದ್ವಾಂಸರ ಪರಿಚಯವಾಯಿತು.

ಎಸ್.ಜಿ.ನರಸಿಂಹಾಚಾರ್ಯರು ತಮ್ಮ ಬಂಧುವೇ ಆದ ಎಂ.ಎ.ರಾಮಾನುಜ ಯ್ಯಂಗಾರ್ಯರ ಜೊತೆಗೂಡಿ 'ಕರ್ಣಾಟಕ ಕಾವ್ಯ ಮಂಜರಿ' ಮಾಸಪತ್ರಿಕೆಯನ್ನು 1892ರಲ್ಲಿ ಪ್ರಾರಂಭ ಮಾಡಿದರು. ಊರೂರು ಅಲೆದು ತಾಳೇಗರಿಯ ಗ್ರಂಥಗಳನ್ನು ಸಂಗ್ರಹಿಸಿದರು. ಪತ್ರಿಕೆಯ ಮೂಲಕ ಪ್ರಾಚೀನ ಮತ್ತು ಮಧ್ಯ ಕಾಲೀನ ಕನ್ನಡ ಸಾಹಿತ್ಯದ ಗ್ರಂಥಗಳನ್ನು ಧಾರಾವಾಹಿಯಾಗಿ ಪ್ರಕಟಿಸಿದ್ದಲ್ಲದೆ ಪುಸ್ತಕ ರೂಪದಲ್ಲಿಯೂ ಅವುಗಳನ್ನು ಹೊರತಂದರು. 'ಗದಾ ಯುದ್ಧ', 'ಮಲ್ಲಿನಾಥಪುರಾಣ', 'ಲೀಲಾವತಿ ಪ್ರಬಂಧ', 'ಕರ್ಣಾಟಕ ಪಂಚತಂತ್ರ' 'ಮಿತ್ರವೃಂದ ಗೋವಿಂದ', 'ಜಯನೃಪಕಾವ್ಯ' ಮುಂತಾದ ಕಾವ್ಯಗಳು ಅಲ್ಪಾವಧಿಯಲ್ಲೇ ಸಂಪಾದಿತವಾಗಿ ಪ್ರಕಟವಾದವು. ಸುಮಾರು ಆರು ವರ್ಷಗಳ ಕಾಲ ಈ ಕಾರ್ಯ ಜರುಗಿತು. ಅಲ್ಲಿನವರೆಗೆ ದೊರೆಯದೆ ಇದ್ದ ಕನ್ನಡ ಕಾವ್ಯಗಳು ಸುಲಭವಾಗಿ ದೊರೆಯುವಂತಾದವು.

ಪತ್ರಿಕೆ ನಿಂತು ಹೋದಾಗ ಎದೆಗುಂದದೆ ಇಬ್ಬರೂ ಸುಮಾರು ಒಂದೂವರೆ ವರುಷದೊಳಗೆ 'ಕರ್ಣಾಟಕ ಕಾವ್ಯಕಲಾನಿಧಿ' ಎಂಬ ಹೊಸ ಪತ್ರಿಕೆಯನ್ನು ಪ್ರಾರಂಭಿಸಿದರು. ಇದು 1916ರವರೆಗೆ ನಡೆದು ನಿಂತುಹೋಯಿತು. ಈ ಎರಡು ಪತ್ರಿಕೆಗಳು ಅಮೂಲ್ಯವಾದ ಕನ್ನಡ ಕಾವ್ಯಗಳನ್ನು ಹೊರತಂದವು. ಅವುಗಳಲ್ಲಿ ಸುಮಾರು 75 ಗ್ರಂಥಗಳು ಪ್ರಕಟವಾದವು. ಆ ಗ್ರಂಥಗಳ ಪೈಕಿ ಇಬ್ಬರೂ ಸೇರಿ 15 ವರುಷಗಳಲ್ಲಿ ಸಂಪಾದಿಸಿದ ಸುಮಾರು 40 ಪುಸ್ತಕಗಳು ಇದ್ದವು. ಈ ಎರಡೂ ಮಾಸಪತ್ರಿಕೆಗಳಿಗೆ ಎಸ್.ಜಿ.ನರಸಿಂಹಾಚಾರ್ಯರು ಹಾಗೂ ಎಂ.ಎ.ರಾಮಾನುಜೈಯ್ಯಂಗಾರ್ಯರು ಸಂಪಾದಕರಾಗಿ ಶ್ರೇಷ್ಠ ಸೇವೆ ಸಲ್ಲಿಸಿದ್ದರು.

ನರಸಿಂಹಾಚಾರ್ಯರು ಕಾವ್ಯ ಹಾಗೂ ಗದ್ಯ ಗ್ರಂಥಗಳ ಭಾಷಾಂತರ ಮಾಡಿದ್ದಲ್ಲದೆ ಹಲವಾರು ಸ್ವತಂತ್ರ ಕೃತಿಗಳನ್ನು ರಚಿಸಿದರು. ಗ್ರಂಥಗಳನ್ನು ಅನುವಾದ ಮಾಡಿ ಹೊರತಂದರು. ಅನೇಕ ಕನ್ನಡ ಕವಿಗಳ ಚಂಪೂ, ಗದ್ಯ, ಪದ್ಯ, ನಾಟಕ, ಕೀರ್ತನೆ, ಶತಕ, ನಿಘಂಟುಗಳನ್ನು ಪರಿಷ್ಕರಿಸಿ ಪ್ರಕಟಿಸಿದ ಕೀರ್ತಿ ಇವರದು. ಇವರ ಭಾಷಾಶೈಲಿ ಸರಳ ವಾಗಿದ್ದು ಜನಸಾಮಾನ್ಯರನ್ನು ತಲುಪುವಂತಿತ್ತು.

ಕನ್ನಡಕ್ಕೆ ವಿಶಿಷ್ಟ ಸೇವೆ ಮಾಡಿದ ಎಸ್.ಜಿ. ನರಸಿಂಹಾಚಾರ್ಯರು 1907ರ ಡಿಸೆಂಬರ್ 22ರಂದು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕಾಲುಫಣಿ ವ್ಯಾಧಿಯಿಂದ ಅಕಾಲಿಕವಾಗಿ ತೀರಿಕೊಂಡರು. ಅವರು ಕಾಲವಾದಾಗ ಅವರಿಗಿನ್ನೂ 45 ವರ್ಷ ವಯಸ್ಸಾಗಿತ್ತು.

ಕೆ.ಆರ್.ಬ್ಯಾಂಕಿನ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಅಗ್ರಹಾರ(ಮಾಧವರಾವ್ ವೃತ್ತ) ವೃತದಲ್ಲಿರುವ ಕೃಷ್ಣರಾಜೇಂದ್ರ ಸಹಕಾರಿ ಬ್ಯಾಂಕಿನ 2025ನೇ ಸಾಲಿನ ಕ್ಯಾಲೆಂಡರ್ ಅನ್ನು ಮಾಜಿ ಅಧ್ಯಕ್ಷರು ಹಾಗೂ ಹಾಲಿ ನಿರ್ದೇಶಕರಾದ ನಂ.ಸಿದ್ದಪ್ಪ ಭಾನುವಾರ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಉಪಾಧ್ಯಕ್ಷೆ ಸರ್ವಮಂಗಳ, ಹೆಚ್.ವಿ.ಭಾಸ್ಕರ್, ಎಂ.ಡಿ.ಪಾರ್ಥಸಾರಥಿ, ಜಿ.ಎಂ.ಪಂಚಾಕ್ಷರಿ, ಶಿವಪ್ರಕಾಶ್, ಗಣೇಶ್ ಮೂರ್ತಿ, ಅರುಣ್ ಸಿದ್ದಪ್ಪ, ಕಾರ್ಯದರ್ಶಿ ಅನಂತ್ ವೀರಪ್ಪ, ಸಿಬ್ಬಂದಿ ವರ್ಗದವರಾದ ಪ್ರಕಾಶ್, ಗಿರೀಶ್, ಎಚ್.ಸಿ.ಮಹದೇವಸ್ವಾಮಿ, ಸಂತೋಷ್ ಉಪಸ್ಥಿತರಿದ್ದರು.

ಸ್ಮಾರ್ಟ್ ಕಾರ್ಡ್ ಪಡೆಯಲು ಆಹ್ವಾನ

ಮೈಸೂರು,ಡಿ.8–ಕಾರ್ಮಿಕರ ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ ಯೋಜನೆಯಡಿ ಚಾಲಕ, ನಿರ್ವಾಹಕ, ಕ್ಲೀನರ್, ನಿಲ್ದಾಣ ಸಿಬ್ಬಂದಿ, ಮಾರ್ಗ ಪರಿಶೀಲನಾ ಸಿಬ್ಬಂದಿ, ಬುಕಿಂಗ್ ಗುಮಾಸ್ತ, ನಗದು ಗುಮಾಸ್ತ, ಡಿಪೋ ಗುಮಾಸ್ತ, ಸಮಯಪಾಲಕ, ಕಾವಲುಗಾರ ಅಥವಾ ಪರಿಚಾರಕ, ಮೋಟಾರು ಗ್ಯಾರೇಜುಗಳಲ್ಲಿ ಟೈರು ಜೋಡಿಸುವ ಮತ್ತು ಬೇರ್ಪಡಿಸುವ ಘಟಕಗಳಲ್ಲಿ, ಪಂಚರ್ ದುರಸ್ತಿ ಮಳಿಗೆಗಳಲ್ಲಿ, ವೀಲ್ ಬ್ಯಾಲೆನ್ಸಿಂಗ್ ಮತ್ತು ಅಲೈನ್ಮೆಂಟ್ ಘಟಕಗಳಲ್ಲಿ, ನೀರಿನಿಂದ ಸ್ವಚ್ಛಗೊಳಿಸುವ ಘಟಕಗಳಲ್ಲಿ ಕೆಲಸ ಮಾಡುವವರು ಮೋಟಾರು ವಾಹನ ಹೊರಕವಚ ನಿರ್ಮಾಣ ಘಟಕಗಳಲ್ಲಿ, ಟಿಂಕರಿಂಗ್, ಎಲೆಕ್ಟ್ರಿಕಲ್ ಹಾಗೂ ಎಸಿ ಘಟಕ ಇತ್ಯಾದಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು ಈ ಯೋಜನೆಯಡಿ ನೋಂದಾಯಿಸಿ ಸ್ಮಾರ್ಟ್‌ಕಾರ್ಡ್ ಪಡೆದುಕೊಳ್ಳಬಹುದು. ಅಭ್ಯರ್ಥಿಗಳು 18ರಿಂದ 60 ವರ್ಷ ವಯೋಮಿತಿ ಹೊಂದಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು ಹಾಗೂ ಇಎಸ್‌ಐ ಮತ್ತು ಇಪಿಎಫ್ ಸೌಲಭ್ಯ ಹೊಂದಿರಬಾರದು. ಹೆಚ್ಚಿನ ಮಾಹಿತಿಗಾಗಿ ಕುವೆಂಪುನಗರದ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿರುವ ಕಾರ್ಮಿಕ ಅಧಿಕಾರಿಗಳ ಕಚೇರಿ ಅಥವಾ ಕಾರ್ಮಿಕ ಇಲಾಖೆ ಸಹಾಯವಾಣಿ ಸಂಖ್ಯೆ: 155214 ಅನ್ನು ಸಂಪರ್ಕಿಸಬಹುದು.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಬಿಜೆಪಿ ಯುವ ಮೋರ್ಚಾ ಪಂಜಿನ ಮೆರವಣಿಗೆ

ಮೈಸೂರು, ಡಿ.8(ಎಸ್‌ಪಿಎನ್)– ಬಾಂಗ್ಲಾದೇಶದ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಬಿಜೆಪಿ ಮೈಸೂರು ನಗರ ಯುವ ಮೋರ್ಚಾ ಪದಾಧಿಕಾರಿಗಳು ವಿವಿಧ ಘೋಷಣೆಗಳನ್ನು ಕೂಗಿ ಗಾಂಧಿಚೌಕದಿಂದ ಕೆ.ಟಿ.ಸ್ಟ್ರೀಟ್‌ನ ಕಾಲಭೈರವ ದೇವಸ್ಥಾನದವರೆಗೆ ಪಂಜಿನ ಮೆರವಣಿಗೆ ನಡೆಸಿದರು.



ಬಾಂಗ್ಲಾದೇಶದ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳು ಮೈಸೂರಲ್ಲಿ ಪಂಜಿನ ಮೆರವಣಿಗೆ ನಡೆಸಿದರು.

ಪಂಜಿನ ಮೆರವಣಿಗೆ ಗಾಂಧಿಚೌಕದಿಂದ ಪ್ರಾರಂಭವಾಗಿ ಪ್ರಭಾ ಟಾಕೀಸ್, ಕೆ.ಟಿ.ಸ್ಟ್ರೀಟ್‌ನಲ್ಲಿ ಸಾಗಿ ಕಾಲಭೈರವ ದೇವಸ್ಥಾನದಲ್ಲಿ ಮುಕ್ತಾಯಗೊಂಡಿತು. ಈ ಜಾಥಾದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ 'ಭಾರತ್ ಮಾತಾಕೀ ಜೈ', 'ಮಾತರಂ, ಮಾತರಂ, ವಂದೇ ಮಾತರಂ', 'ನಾವೆಲ್ಲಾ ಒಂದು, ನಾವೆಲ್ಲಾ ಹಿಂದೂ' ಇತರೆ ಘೋಷಣೆಗಳನ್ನು ಕೂಗಿ, ಒಗ್ಗಟ್ಟು ಪ್ರದರ್ಶಿಸಿದರು.

ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ ಮಾತನಾಡಿ, ಬಾಂಗ್ಲಾದೇಶದಲ್ಲಿ ಇರುವ ಹಿಂದೂಗಳು ಅಲ್ಪಸಂಖ್ಯಾತರಾಗಿದ್ದು, ದಿನನಿತ್ಯ ಜೀವನ್ಮರಣದ ಹೋರಾಟ ನಡೆಸುತ್ತಿದ್ದಾರೆ. ಹಿಂದೂಗಳಿಗೆ ಅಲ್ಲಿನ ಸರ್ಕಾರವೇ ಶತ್ರುವಾಗಿ ಕಾಡುತ್ತಿದೆ. ಬಾಂಗ್ಲಾದಲ್ಲಿ ಸಂಕಷ್ಟದಲ್ಲಿರುವ ಹಿಂದೂಗಳಿಗೆ ಆತ್ಮಸ್ಥೈರ್ಯ ತುಂಬುವುದು ಭಾರತದ ಸಮಸ್ತ ಹಿಂದುಗಳ ಕರ್ತವ್ಯವಾಗಿದೆ. ಅಂತೆಯೇ ವಿಶ್ವದ ಯಾವುದೇ ಭಾಗದಲ್ಲಿ ಹಿಂದೂಗಳಿಗೆ ಸಂಕಷ್ಟ ಎದುರಾದಾಗ ಅವರ ರಕ್ಷಣೆ, ಆತ್ಮಸ್ಥೈರ್ಯ ತುಂಬುವುದು ನಮ್ಮ ಧರ್ಮ ಎಂದು ಅವರು ಪ್ರತಿಪಾದಿಸಿದರು.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ, ಅದರಲ್ಲೂ ಮಹಿಳೆಯರ ಮೇಲಿನ ದೌರ್ಜನ್ಯ, ಮಕ್ಕಳ ಮೇಲಿನ ದಬ್ಬಾಳಿಕೆಯನ್ನು ಭಾರತದ ಹಿಂದೂಗಳು ಎಂದಿಗೂ ಸಹಿಸುವುದಿಲ್ಲ. ಅದರಲ್ಲೂ ಈ ದೇಶದ ಪ್ರದಾನಿ ನರೇಂದ್ರ ಮೋದಿಜೀ ಇಂತಹ ಘಟನೆಯನ್ನು ಸಹಿಸುವುದಿಲ್ಲ. ಬಾಂಗ್ಲಾದೇಶ ಈ ಕೂಡಲೇ ಬಂಧಿಸಿರುವ ಇಸ್ಕಾನ್‌ನ ಸ್ವಾಮಿ ಚಿನ್ಮಯಿ ಕೃಷ್ಣದಾಸ್ ಅವರನ್ನು ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ಬಿಜೆಪಿ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ಯುವ ಮೋರ್ಚಾ ನಗರ ಅಧ್ಯಕ್ಷ ರಾಕೇಶ್ ಗೌಡ, ನಗರ ಉಪಾಧ್ಯಕ್ಷರಾದ ಜೋಗಿ ಮಂಜು, ಹೇಮಾ ನಂದೀಶ್, ಎಸ್.ಕೆ. ದಿನೇಶ್, ಪಾಲಿಕೆ ಮಾಜಿ ಸದಸ್ಯ ಕೆ.ಜಿ ರಮೇಶ್, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಡಿ ಲೋಹಿತ್, ಸಚಿನ್, ಯುವ ಮೋರ್ಚಾ ಪದಾಧಿಕಾರಿಗಳಾದ ಮನುಶೈವ, ಚೇತನ್, ರವಿ, ಧನರಾಜ್, ಗುರು, ಕೀರ್ತಿ, ಸಂತೋಷ್, ಪರಮೇಶ್, ಕಾಂತ, ಕೀರ್ತಿ, ದರ್ಶನ, ಮಂಡಲ ಅಧ್ಯಕ್ಷರಾದ ನಿಶಾಂತ್, ಅರ್ಜುನ್, ಮಧು, ಮೋಹನ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು,ಡಿ.8– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ನಂತರದ ಪಿಯುಸಿ ಮತ್ತು ಸಮಾನಂತರ (PUC & Equivalent Courses) ಮತ್ತು ಸಂಯೋಜಿತ ಉಭಯ ಪದವಿ ಕೋರ್ಸ್‌ಗಳಲ್ಲಿ (Integrated Degree Courses) ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ-1ರ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2024-25ನೇ ಸಾಲಿಗೆ ಮೆಟ್ರಿಕ್ ನಂತರದ 'ವಿದ್ಯಾರ್ಥಿವೇತನ', 'ಶುಲ್ಕ ವಿನಾಯಿತಿ' ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆ ಅವಧಿಯನ್ನು ಡಿ.20ರವರೆಗೆ ವಿಸ್ತರಿಸಲಾಗಿದೆ. https://ssp.postmatric.karnataka.gov.in/ ಮೂಲಕ ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬೇಕು. ಅಥವಾ ಸಹಾಯವಾಣಿ ಸಂ: 8050770005, ಇಮೇಲ್ ವಿಳಾಸ bcwdhe lpline@gmail.com ಅಥವಾ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ ದೂ.ಸಂ: 1902, ಇಮೇಲ್ ವಿಳಾಸ postmatrichelp@karnataka.gov.in ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಸಮಾಜ ಸೇವಕರಿಗೆ ಸನ್ಮಾನ ಕಾರ್ಯಕ್ರಮ

ಮೈಸೂರು, ಡಿ.8–ಮೈಸೂರಿನ ಇಲವಾಲದಲ್ಲಿರುವ ಬ್ರಹ್ಮಾಕುಮಾರೀಸ್ ಜ್ಞಾನ ಸರೋವರ ರಿಟ್ರೀಟ್ ಸೆಂಟರ್‌ನಲ್ಲಿ ಡಿ.15ರಂದು ಜಿಲ್ಲೆಯಲ್ಲಿ ಕರ್ತವ್ಯನಿರತ ಸಮಾಜ ಸೇವಕರನ್ನು ಗುರುತಿಸಿ ಸನ್ಮಾನಿಸಲು ವಿಶೇಷ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಉದ್ದೇಶವು ಆಧ್ಯಾತ್ಮಿಕ ಸಶಕ್ತೀಕರಣದಿಂದ ಸ್ವಚ್ಛ ಮತ್ತು ಆರೋಗ್ಯಕರ ಸಮಾಜದ ನಿರ್ಮಾಣದ ಶೀರ್ಷಿಕೆ ಹೊಂದಿದ್ದು, ಸಮಾಜದಲ್ಲಿ ಶಾಂತಿ ಕಾಪಾಡುವುದರಿಂದ ಅನೇಕ ಘಟಕಗಳಲ್ಲಿ ಸ್ವಚ್ಛತೆ ಕಾಪಾಡುವ 50 ಸಮಾಜ ಸೇವಕರನ್ನು ಗೌರವಿಸಲಾಗುತ್ತದೆ ಎಂದು ಮೂಲಗಳು ಪ್ರಕಟಣೆಯಲ್ಲಿ ತಿಳಿಸಿವೆ.

ಒಂದನೇ ಪುಟದಿಂದ

ರಾಜ್ಯ ಸರ್ಕಾರದಿಂದ ಸಿದ್ಧತೆ

ಬೆಲೆ ನಿಗದಿ ಸೇರಿ ಮತ್ತಿತರ ಕಾರ್ಯಗಳನ್ನು ಕೆಲವೇ ದಿನಗಳಲ್ಲಿ ಆರಂಭಿಸಲಾಗುತ್ತದೆ ಎಂದು ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಅನುಮತಿ ಸಿಕ್ಕಿಲ್ಲ: ಮೇಕೆದಾಟು ಯೋಜನೆಗೆ ಅಗತ್ಯವಿರುವ ಅರಣ್ಯ ಭೂಮಿ ಸ್ವಾಧೀನಕ್ಕೆ ಅನುಮತಿ ಕೋರಿ ಕೇಂದ್ರ ಅರಣ್ಯ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ ಅದಕ್ಕೆ ಈವರೆಗೆ ಸಚಿವಾಲಯದಿಂದ ಅನುಮತಿ ದೊರೆತಿಲ್ಲ ಹಾಗೂ ಪ್ರಸ್ತಾವನೆ ಪರಿಶೀಲಿಸಿಲ್ಲ. ಅರಣ್ಯ ಸಚಿವಾಲಯ ಪರಿಶೀಲಿಸಿ, ಅದನ್ನು ರಾಷ್ಟ್ರೀಯ ವನ್ಯಜೀವಿ ಮಂಡಳಿ ಅವಗಾಹನೆಗೆ ನೀಡ ಬೇಕಿದೆ. ಆದರೆ ಈ ಪ್ರಕ್ರಿಯೆ ವಿಳಂಬವಾ ಗುತ್ತಿರುವುದರಿಂದ ಯೋಜನೆ ಮೇಲೆ ಪರಿ ಣಾಮ ಬೀರುವ ಸಾಧ್ಯತೆಗಳಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಯೋಜನೆಯಿಂದಾಗಿ 5 ಗ್ರಾಮ ಶಿಫ್ಟ್: ಯೋಜನೆಯಿಂದಾಗಿ 5 ಗ್ರಾಮಗಳ 160.81 ಹೆಕ್ಟೇರ್ ಖಾಸಗಿ ಭೂಮಿ ಮುಳುಗಡೆಯಾಗಲಿದೆ. ಅದರಂತೆ ಗ್ರಾಮಗಳಾದ ಸಂಗಮ, ಮುತ್ತತ್ತಿ, ಮಡಿವಾಳ, ಕೊಗ್ಗೆದೊಡ್ಡಿ ಮತ್ತು ಬೊಮ್ಮಸಂದ್ರದಲ್ಲಿ ಭೂ ಸ್ವಾಧೀನ ಮಾಡಿಕೊಳ್ಳಬೇಕಿದೆ. ಅಲ್ಲದೆ, ಯೋಜನೆಯಿಂದಾಗಿ 233 ಕುಟುಂಬಗಳ ಮೇಲೆ ಪರಿಣಾಮ ಉಂಟಾಗಲಿದೆ. ಆ ಕುಟುಂಬಗಳನ್ನು ಬೇರೆಡೆ ಸ್ಥಳಾಂತರಿಸುವುದು ಹಾಗೂ ಪರಿಹಾರ ನೀಡುವುದಕ್ಕೂ ಶೀಘ್ರ ನಿರ್ಧರಿಸಲಾಗುತ್ತದೆ.

ಚಳಿಗಾಲದ ಅಧಿವೇಶನ

ಸಭಾಪತಿಗಳು, ಉಪ ಸಭಾಪತಿಗಳು, ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಹಲವಾರು ಗಣ್ಯರು ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಸಾಕ್ಷಿಯಾಗಲಿದ್ದಾರೆ ಎಂದರು.

ಮೊದಲ ದಿನ ಇತ್ತೀಚೆಗೆ ನಡೆದ ಉಪ ಚುನಾವಣೆಯಲ್ಲಿ ಆಯ್ಕೆಯಾದ ವಿಧಾನಸಭೆ ಸದಸ್ಯರಿಗೆ ಪ್ರಮಾಣ ವಚನ ಬೋಧನೆ ನಡೆಯಲಿದೆ. ಮಧ್ಯಾಹ್ನ ಬಿಎಸ್‌ಸಿ (ಕಲಾಪ ಸಲಹಾ ಸಮಿತಿ) ಸಭೆ ನಡೆಯಲಿದ್ದು, ಈ ಸಭೆಯಲ್ಲಿ ಮುಂದಿನ ಅಧಿವೇಶನದ ರೂಪುರೇಷಗಳ ಬಗ್ಗೆ ಸಮಗ್ರ ಚರ್ಚಿಸಿ ಅಂತಿಮಗೊಳಿಸಲಾಗುವುದು.

ಈ ಬಾರಿ ಅಧಿವೇಶನದಲ್ಲಿ 5 ವಿಧೇಯಕಗಳ ಮೇಲೆ ಸುಧೀರ್ಘ ಚರ್ಚೆ ನಡೆಯಲಿದೆ. ಎರಡು ಆಧ್ಯಾದೇಶದ ಬದಲಿ ವಿಧೇಯಕಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದು. ಅಧಿವೇಶನದಲ್ಲಿ 10 ದಿನಗಳ ಕಾಲ ಪ್ರಶ್ನೋತ್ತರ ಅವಧಿ ನಿಗದಿಪಡಿಸಲಾಗಿದೆ. ಗಮನ ಸೆಳೆಯುವ ಸೂಚನೆಗಳು, ಶೂನ್ಯ ವೇಳೆ, ನಿಲುವಳಿ ಸೂಚನೆ ನಡೆಸಲಾಗುವುದು. ಈವರೆಗೆ 3,004 ಪ್ರಶ್ನೆಗಳು, 205 ಗಮನ ಸೆಳೆಯುವ ಸೂಚನೆಗಳು, 96 ನಿಯಮ 351ರ ಸೂಚನೆಗಳನ್ನು ಸ್ವೀಕರಿಸಲಾಗಿದೆ. ಜತೆಗೆ 3 ಖಾಸಗಿ ವಿಧೇಯಕಗಳನ್ನು ಸಹ ಸ್ವೀಕರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಹೊಸದಾಗಿ ಸಭಾಧ್ಯಕ್ಷರ ಪೀಠ ಸಿದ್ಧ: ಬೆಂಗಳೂರಿನ ವಿಧಾನಸೌಧದ ವಿಧಾನಸಭೆಯ ಮೊಗಸಾಲೆಯಲ್ಲಿ ಇರುವ ಮಾದರಿಯಲ್ಲಿಯೇ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಈ ಬಾರಿ ಹೊಸದಾಗಿ ಸಭಾಧ್ಯಕ್ಷರ ಪೀಠವನ್ನು ಸಿದ್ಧಪಡಿಸಲಾಗಿದೆ. ಅಧಿವೇಶನದ ಕಾರ್ಯವ್ಯವಸ್ಥೆಗಾಗಿ 2,500 ಅಧಿಕಾರಿಗಳು, ಸಿಬ್ಬಂದಿ ಮತ್ತು ಸೂಕ್ತ ಪೊಲೀಸ್ ಬಂದೋಬಸ್ತ್‌ಗಾಗಿ ಒಟ್ಟು 8,500 ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ 10 ಸಮಿತಿ ರಚಿಸಿ ವಸತಿ, ಸಾರಿಗೆ ಸೇರಿದಂತೆ ವಿವಿಧ ವ್ಯವಸ್ಥೆ ಮಾಡಲಾಗಿದೆ ಎಂದರು.

ಛಾಯಾಚಿತ್ರಗಳ ಪ್ರದರ್ಶನಕ್ಕೆ ವ್ಯವಸ್ಥೆ: ಕಲಾಪ ವೀಕ್ಷಣೆಗೆ ಆಗಮಿಸುವ ವಿದ್ಯಾರ್ಥಿ, ಶಿಕ್ಷಕರಿಗೆ ಮಾಹಿತಿಗಾಗಿ ಬೆಳಗಾವಿಯಲ್ಲಿ 1924ರಲ್ಲಿ ಮಹಾತ್ಮ ಗಾಂಧೀಜಿ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ದಶಮಾನೋತ್ಸವ ನೆನಪಿನ ಛಾಯಾಚಿತ್ರಗಳ ಪ್ರದರ್ಶನಕ್ಕೆ ಏರ್ಪಾಡು ಮಾಡಲಾಗಿದೆ. ಇದಕ್ಕಾಗಿ ಮಹಾತ್ಮ ಗಾಂಧೀಜಿ ಅವರ ಅಪರೂಪದ ಛಾವಚಿತ್ರಗಳನ್ನು ಸಂಗ್ರಹಿಸಿ ಸುವರ್ಣಸೌಧದ ಆಯಾ ಕಡೆಗಳಲ್ಲಿ ಹಾಕಲಾಗಿದೆ ಎಂದರು.

ಸುವರ್ಣಸೌಧದೊಳಗೆ ಅನುಭವ ಮಂಟಪದ ವೈಭವ: ವಿಶ್ವಗುರು ಬಸವಣ್ಣ ಸ್ಥಾಪಿಸಿದ 'ವಿಶ್ವದ ಮೊದಲ ಸಂಸತ್ತು' ಎಂಬ ಖ್ಯಾತಿಯ, ಅನುಭವ ಮಂಟಪದ ಬೃಹತ್ ತೈಲವರ್ಣ ಚಿತ್ರವನ್ನು ಚಳಿಗಾಲ ಅಧಿವೇಶನದ ಮೊದಲ ದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣಗೊಳಿಸಲಿದ್ದಾರೆ. ಸ್ಪೀಕರ್ ಯು.ಟಿ.ಖಾದರ್ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಲಿದೆ.

15.13ಲಕ್ಷ ಸಾಲ ಪಡೆದ ಭೂಪ ಬಂಧನ

ಅದೇ ದಿನ ಅದೇ ಶಾಖೆಯಲ್ಲಿ 55.95 ಗ್ರಾಂ ತೂಕದ 7 ಬಳೆಗಳನ್ನು ಅಡಮಾನವಿಟ್ಟು 3.10 ಲಕ್ಷ, ಅ.19ರಂದು ಮುಖ್ಯ ಕಚೇರಿ ಶಾಖೆಯಲ್ಲಿ 47.97 ಗ್ರಾಂ ತೂಕದ 6 ಬಳೆಗಳನ್ನು ಅಡಮಾನವಿಟ್ಟು 2.35 ಲಕ್ಷ, ಅ.28ರಂದು ಅದೇ ಶಾಖೆಯಲ್ಲಿ 16.37 ಗ್ರಾಂ ತೂಕದ 2 ಬಳೆ ಅಡಮಾನವಿಟ್ಟು 90 ಸಾವಿರ ರೂ. ಸಾಲ ಪಡೆದಿದ್ದಾನೆ. ಈತ ಒಟ್ಟಾರೆ 278.03 ಗ್ರಾಂ ತೂಕದ ನಕಲಿ ಆಭರಣಗಳನ್ನು ಎರಡೂ ಶಾಖೆಗಳಲ್ಲೂ ಅಡಮಾನವಿಟ್ಟು ಒಟ್ಟು 15.13 ಲಕ್ಷ ರೂ. ಸಾಲ ಪಡೆದಿರುವುದು ಬೆಳಕಿಗೆ ಬಂದಿದೆ.

ಡಿ.4ರಂದು ಬ್ಯಾಂಕ್‌ನಲ್ಲಿ ಸಿಕ್ಕಿಬಿದ್ದ ಈತನನ್ನು ಪೊಲೀಸರಿಗೆ ಒಪ್ಪಿಸಿದ ನಂತರ ಜಿಲ್ಲಾ ಕೋ–ಆಪರೇಟಿವ್ ಸೆಂಟ್ರಲ್ ಬ್ಯಾಂಕ್‌ನ ಕೋ–ಆಪರೇಟಿವ್ ಸೊಸೈಟೀಸ್ ಸಿಇಓ ಕಚೇರಿಯ ಜಂಟಿ ರಿಜಿಸ್ಟ್ರಾರ್ ಪ್ರವೀಣ್ ಬಿ.ನಾಯಕ್ ಅವರು ಈ ಸಂಬಂಧ ಡಿ.4ರಂದು ಮಡಿಕೇರಿ ಟೌನ್ ಠಾಣೆಗೆ ನೀಡಿದ ದೂರನ್ನು ದಾಖಲಿಸಿಕೊಳ್ಳಲಾಗಿದೆ.

ಈ ಪ್ರಕರಣ ಬೆಳಕಿಗೆ ಬಂದ ನಂತರ ಬ್ಯಾಂಕ್‌ನಲ್ಲಿ ಅಡಮಾನವಿಟ್ಟಿದ್ದ ಆಭರಣಗಳನ್ನು ಪರಿಶೀಲನೆ ನಡೆಸಿದ ವೇಳೆ ಬ್ಯಾಂಕ್‌ನ ಮುಖ್ಯ ಕಚೇರಿ ಶಾಖೆಯಲ್ಲಿ ಅ.21ರಂದು ಎಮ್ಮೆಮಾಡು ಗ್ರಾಮದ ಬಿ.ಎ.ಮೂಸ ಎಂಬಾತ 16.15 ಗ್ರಾಂ ತೂಕದ 2 ಬಳೆಗಳನ್ನು ಅಡಮಾನವಿಟ್ಟು 79 ಸಾವಿರ ರೂ. ಸಾಲ ಪಡೆದಿದ್ದ. ಈ ಆಭರಣಗಳೂ ಕೂಡ ನಕಲಿ ಎಂಬುದು ಪತ್ತೆಯಾಗಿದ್ದು, ಬ್ಯಾಂಕ್‌ನ ಮ್ಯಾನೇಜರ್ ಎ.ಬಿ.ದಮಯಂತಿ ಅವರು ಈ ಸಂಬಂಧ ಡಿ.7ರಂದು ಮಡಿಕೇರಿ ಟೌನ್ ಠಾಣೆಗೆ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಜೆಡಿಎಸ್ ಮುಗಿಸಲು ಬಿಜೆಪಿಯಿಂದ ಸ್ಕೆಚ್

ಬಿಜೆಪಿಯವರು ವ್ಯವಸ್ಥಿತವಾಗಿ ಜೆಡಿಎಸ್ ಬೆನ್ನಿಗೆ ಚೂರಿ ಹಾಕಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ 25 ಸಾವಿರ ಮತಗಳ ಅಂತರದಲ್ಲಿ ಗೆಲ್ಲಬೇಕಾದರೆ ಯಾವ್ಯಾವ ಮೂಲೆಯಿಂದ ಅವರಿಗೆ ಸಹಾಯ ಬಂದಿದೆ ನೀವೇ ಆಲೋಚನೆ ಮಾಡಿ. ಜೆಡಿಎಸ್ ಮುಗಿಸುವ ಉದ್ದೇಶದಿಂದ ಕಾಂಗ್ರೆಸ್ ಅಭ್ಯರ್ಥಿ ಯೋಗೇಶ್ವರ್ ಗೆಲುವಿಗೆ ಬಿಜೆಪಿ ಪರೋಕ್ಷವಾಗಿ ಸಹಾಯ ಮಾಡಿದೆ. ಬಿಜೆಪಿ ಉದ್ದೇಶ ಜೆಡಿಎಸ್ ಅನ್ನು ಮುಗಿಸುವುದೇ ಆಗಿದ್ದು, ಭವಿಷ್ಯದಲ್ಲಿ ಜೆಡಿಎಸ್ ಪಕ್ಷವನ್ನು ಬಿಜೆಪಿ ನುಂಗಿ ಹಾಕುತ್ತದೆ. ಜೆಡಿಎಸ್ ಕೂಡ ಬಹಳ ಇತಿಹಾಸ ಹೊಂದಿರುವ ಪಕ್ಷ. ಅದನ್ನು ಮುಗಿಸಲು ಬಿಜೆಪಿಯವರು ಸ್ಕೆಚ್ ಹಾಕಿದ್ದಾರೆ. ಇನ್ನು ಜೆಡಿಎಸ್‌ನವರು ರಾಜಕೀಯವಾಗಿ ಹೇಗೆ ಬದುಕುತ್ತಾರೆ ಕಾದು ನೋಡಬೇಕು ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನನಗೆ ಸಮಯ ಬರುತ್ತದೆ, ಒಳ್ಳೆಯದಾಗುತ್ತದೆ ಎಂದು ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಈ ಮಾತನ್ನು ಹೇಳಬಾರದು ಅನ್ನಲಾಗಲ್ಲ. ಮಾತನಾಡುವಾಗ ಅಳೆದು ತೂಗಿ ಮಾತನಾಡುವುದು ಕಷ್ಟ. ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಜನಪರವಾದ ಕೆಲಸ ಮಾಡುತ್ತಿದ್ದೇವೆ. ಅದಕ್ಕೆ ಉಪ ಚುನಾವಣೆ ಫಲಿತಾಂಶವೇ ಸಾಕ್ಷಿ. ಕುಮಾರಸ್ವಾಮಿ ಅವರ ಕ್ಷೇತ್ರದಲ್ಲೇ ಕಾಂಗ್ರೆಸ್ ಗೆದ್ದಿದೆ. ಬಸವರಾಜ ಬೊಮ್ಮಾಯಿ ಕ್ಷೇತ್ರದಲ್ಲೂ ನಾವು ಗೆದ್ದಿದ್ದೇವೆ. ಕುಟುಂಬ ರಾಜಕೀಯದ ವಿರುದ್ಧ ಮತದಾರರು ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಿದ್ದಾರೆ. ಜನರಿಗೆ ಕಾಂಗ್ರೆಸ್ ಬಗ್ಗೆ ಒಳ್ಳೆಯ ಭಾವನೆ ಬಂದಿದೆ ಎಂದ ಅವರು, ಸರ್ಕಾರ ಮಾಡುತ್ತಿರುವ ಕೆಲಸಗಳ ಬಗ್ಗೆ ಚರ್ಚೆ ಆಗಬೇಕು. ಆದರೆ ಪ್ರತಿದಿನ ಅಧಿಕಾರದ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲ. ರಾಜಕೀಯದಲ್ಲಿ ಬದಲಾವಣೆಗಳು ಕಾಲದಿಂದ ಕಾಲಕ್ಕೆ ಇದ್ದೇ ಇರುತ್ತದೆ. ಅಧಿಕಾರ ಶಾಶ್ವತ ಅಲ್ಲ. ಸಮಯ ಬಂದಾಗ ಏನು ಆಗಬೇಕೋ ಅದು ಆಗುತ್ತೆ ಎಂದರು.

ಬಾಣಂತಿಯರ ಸಾವು ಗಂಭೀರವಾಗಿ ಪರಿಗಣಿಸಿದ್ದೇವೆ: ಬಳ್ಳಾರಿಯ ಬಿಮ್ಸ್‌ನಲ್ಲಿ ನಡೆದಿರುವ ಬಾಣಂತಿಯರ ಸರಣಿ ಸಾವು ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಬಾಣಂತಿಯರ ಸರಣಿ ಸಾವು ದುರದೃಷ್ಟಕರವಾದುದಾಗಿದ್ದು, ಕೆಲ ಔಷಧಿ ಕಂಪನಿಗಳ ಬೇಜವಾಬ್ದಾರಿ ಬಾಣಂತಿಯರ ಸಾವಿಗೆ ಕಾರಣವಾಗಿದ್ದು, ಪ್ರಯೋಗಾಲಯದ ವರದಿ ಬಂದ ನಂತರ ಕಾನೂನಿನ ರೀತ್ಯಾ ಕ್ರಮ ಕೈಗೊಳ್ಳಲಾಗುವುದು ಎಂದ ಅವರು, ಶಿಕ್ಷೆ ವಿಧಿಸಿದ ಮಾತ್ರಕ್ಕೆ ಹೋದ ಜೀವ ಬರುವುದಿಲ್ಲ. ಆದಾಗ್ಯೂ ಸರ್ಕಾರದ ಪರವಾಗಿ ಮೃತರ ಕುಟುಂಬದವರಿಗೆ ಸಾಂತ್ವನ ಹೇಳುತ್ತೇನೆ ಎಂದು ಅವರು ತಿಳಿಸಿದರು.

ಪಾಂಡವಪುರದಲ್ಲಿ ಮನ್‌ಮುಲ್ ನಂದಿನಿ ಪಾರ್ಲರ್ ಉದ್ಘಾಟನೆ



ಪಾಂಡವಪುರ ಪಟ್ಟಣದ ಡಾ.ರಾಜ್‌ಕುಮಾರ್ ವೃತ್ತದಲ್ಲಿ ನೂತನವಾಗಿ ಆರಂಭಗೊಂಡ ಹೈಟೆಕ್ ನಂದಿನಿ ಪಾರ್ಲರ್‌ನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು. ಮನ್‌ಮುಲ್ ಅಧ್ಯಕ್ಷ ಬೋರೇಗೌಡ, ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು ಇದ್ದಾರೆ.

ಪಾಂಡವಪುರ: ಪಟ್ಟಣದ ಡಾ.ರಾಜ್‌ಕುಮಾರ್ ವೃತ್ತದಲ್ಲಿ ನೂತನವಾಗಿ ಆರಂಭಗೊಂಡ ಮನ್‌ಮುಲ್‌ನ ಹೈಟೆಕ್ ನಂದಿನಿ ಪಾರ್ಲರ್‌ನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು ಮನ್‌ಮುಲ್ ಒಕ್ಕೂಟದಲ್ಲಿ ತಯಾರಾಗುವ ಸಿಹಿತಿಂಡಿ, ತಿನಿಸ್ಸುಗಳು ಹಾಗೂ ಹಾಲು, ಮೊಸರು ಮಾರಾಟ ಮಾಡುವ ಉದ್ದೇಶದಿಂದ ಪಾಂಡವಪುರ ಪಟ್ಟಣದ ಡಾ.ರಾಜ್‌ಕುಮಾರ್ ವೃತ್ತದಲ್ಲಿ ಹೈಟೆಕ್ ನಂದಿನಿ ಪಾರ್ಲರ್ ಆರಂಭಿಸಲಾಗಿದೆ. ಸಾರ್ವಜನಿಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಮನ್‌ಮುಲ್ ಅಧ್ಯಕ್ಷ ಬಿ.ಬೋರೇಗೌಡ ಮಾತನಾಡಿ, ಹೈಟೆಕ್ ನಂದಿನಿ ಪಾರ್ಲರ್ ಮೂಲಕ ಮನ್‌ಮುಲ್ ಒಕ್ಕೂಟದ ಪ್ರಾಡೆಕ್ಟ್ ಎಲ್ಲರಿಗೂ ತಲುಪಿಸುವ ಉದ್ದೇಶದಿಂದ ಆರಂಭಿಸಲಾಗಿದೆ. ಪಾರ್ಲರ್‌ನ ಮಾಲೀಕರಾದ ಮಂಜುನಾಥ್ ಅವರು ಒಕ್ಕೂಟದ ಪದಾರ್ಥಗಳನ್ನೇ ಮಾರಾಟ ಮಾಡುವ ಕೆಲಸ ಮಾಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮನ್‌ಮುಲ್ ನಿರ್ದೇಶಕ ಕಾಡೇನಹಳ್ಳಿ ರಾಮಚಂದ್ರು, ಮಾಲೀಕ ಎಚ್.ಎನ್.ಮಂಜುನಾಥ್, ಟಿಎಚ್‌ಓ ಡಾ.ಸಿ.ಎ. ಅರವಿಂದ್, ಸಬ್‌ಇನ್ಸ್‌ಪೆಕ್ಟರ್ ಉಮೇಶ್, ಮನ್‌ಮುಲ್ ಒಕ್ಕೂಟದ ಅಧಿಕಾರಿ ರಾಜು, ಗ್ರಾಪಂ ಸದಸ್ಯ ಯಶ್ವಂತ್, ಬಿ.ಜೆ.ಸ್ವಾಮಿ, ಪ್ರಕಾಶ್ ಸೇರಿದಂತೆ ಹಲವರು ಹಾಜರಿದ್ದರು.

ಡಿ.11 ರಂದು ಸಾರ್ವಜನಿಕರ ಕುಂದು ಕೊರತೆ ಸಭೆ

ಮಂಡ್ಯ,ಡಿ.8– ಮಂಡ್ಯ ಲೋಕಾಯುಕ್ತ ವಿಭಾಗದ ಅಧಿಕಾರಿಗಳು ಡಿ.11 ರಂದು ಸಾರ್ವಜನಿಕರ ಕುಂದು ಕೊರತೆ ಸಭೆಯನ್ನು ನಾಗಮಂಗಲ ತಾಲೂಕಿನ ತಾಲೂಕು ಕಚೇರಿ ಆವರಣದಲ್ಲಿ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಸಾರ್ವಜನಿಕರಿಂದ ದೂರು ಮತ್ತು ಅಹವಾಲುಗಳ ಸ್ವೀಕಾರ ಕಾರ್ಯಕ್ರಮವನ್ನು ಆಯೋಜಿಸಿದ್ದಾರೆ.

ಕಾರ್ಯಕ್ರಮದಲ್ಲಿ ಮಂಡ್ಯ ಕರ್ನಾಟಕ ಲೋಕಾಯುಕ್ತ ಪೊಲೀಸ್ ಇನ್ಸ್‌ಪೆಕ್ಟರ್‌ಗಳಾದ ಬಿ.ಪಿ.ಬ್ಯಾಟರಾಯನಗೌಡ, ಮೋಹನ್ ರೆಡ್ಡಿ ಆರ್.ಎಂ. ಹಾಗೂ ಡಿವೈಎಸ್‌ಪಿ ಹೆಚ್.ಟಿ.ಸುನಿಲ್ ಕುಮಾರ್ ಅವರು ಪಾಲ್ಗೊಳ್ಳಲಿದ್ದಾರೆ.

ಸರ್ಕಾರಿ ಮತ್ತು ಅರೆ ಸರ್ಕಾರಿ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರು ಸರ್ಕಾರಿ ಕೆಲಸ ಮಾಡಿಕೊಡಲು ಅನಗತ್ಯ ವಿಳಂಬ ಮಾಡಿದ ಬಗ್ಗೆ ಹಾಗೂ ಭ್ರಷ್ಟಾಚಾರದ ಬಗ್ಗೆ ತಾಲೂಕಿನ ಸಾರ್ವಜನಿಕರು ಲೋಕಾಯುಕ್ತ ಅಧಿಕಾರಿಗಳನ್ನು ಖುದ್ದಾಗಿ ಭೇಟಿ ಮಾಡಿ ತಮ್ಮ ದೂರು/ಅಹವಾಲುಗಳನ್ನು ಸಲ್ಲಿಸಬಹುದು ಎಂದು ಮಂಡ್ಯ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸುರೇಶ್ ಬಾಬು.ಎಸ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಂಡ್ಯದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆ

ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಅಭಿನಂದನಾ ಸಮಾರಂಭ ಮುಂದೂಡಿಕೆ

ಮದ್ದೂರು: ಡಿಸೆಂಬರ್ 15ರಂದು ಮಂಡ್ಯದಲ್ಲಿ ನಡೆಯಬೇಕಿದ್ದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಅಭಿನಂದನಾ ಸಮಾರಂಭವನ್ನು ಮುಂದೂಡಲಾಗಿದೆ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ತಿಳಿಸಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಸೂಚನೆ ಮೇರೆಗೆ ಕಾರ್ಯಕ್ರಮ ಮುಂದೂಡಲಾಗಿದ್ದು, ಬೇರೆ ಯಾವುದೇ ಕಾರಣಗಳು ಇಲ್ಲ ಎಂದರು. ಸಮ್ಮೇಳನದ ಸಂದರ್ಭದಲ್ಲಿ ಯಾವುದೇ ಗೊಂದಲಗಳು ಆಗಬಾರದು ಎಂದು ಕಾರ್ಯಕ್ರಮ ಮುಂದೂಡಿಕೆ ಮಾಡಲಾಗಿದ್ದು, ಕಾರ್ಯಕ್ರಮ ಮಾಡುವ ಬಗ್ಗೆ ಕುಮಾರ ಸ್ವಾಮಿ ಅವರಿಗೆ ತಿಳಿಸಿದ್ದೇವು. ಸಮ್ಮೇಳನ ಮುಗಿದ ಮೇಲೆ ಕಾರ್ಯಕ್ರಮ ಮಾಡಲು ಸೂಚನೆ ಬಂದಿದ್ದು, ಶೀಘ್ರ ದಿನಾಂಕ ನಿಗದಿ ಮಾಡುತ್ತೇವೆ ಎಂದರು.



ಸುದ್ದಿಗಾರರೊಂದಿಗೆ ಮಾತನಾಡುತ್ತಿರುವ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು. ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಈ ವೇಳೆ ಉಪಸ್ಥಿತರಿದ್ದರು.

ಕಾರ್ಯಕ್ರಮದ ಬಗ್ಗೆ ಸಚಿವ ಚಲುವರಾಯಸ್ವಾಮಿ ಟೀಕೆ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ, ಇಂತಹ ಜಿಲ್ಲಾ ಮಂತ್ರಿಗಳನ್ನು ಬಹಳ ನೋಡಿದ್ದೇವೆ. ಚಲುವರಾಯಸ್ವಾಮಿ ಚುನಾವಣೆಯಲ್ಲಿ ಸೋತಿಲ್ಲವೇ? ಸಮ್ಮಿಶ್ರವಾಗಿ ಚುನಾವಣೆ ಮಾಡಿದ್ದಾಗ ಇವರು ಏನು ಮಾಡಿದ್ದರೆಂಬುದನ್ನು ನೋಡಿದ್ದೇವೆ ಜನರ ತೀರ್ಮಾನ ಒಪ್ಪಿದ್ದೇವೆ ನಮಗೂ ಮಾತನಾಡಲು ಬರುತ್ತದೆ. ರಸ್ತೆಗಳಿಗೆ ಹೊಸ ಡಾಂಬರು ಬೇಡ, ಗುಂಡಿ ಬಿದ್ದಿರುವುದನ್ನು ಮುಚ್ಚಲಿ ಸಾಕು ಎಂದು ಛೇಡಿಸಿದರು.

ಸಾಹಿತ್ಯ ಸಮ್ಮೇಳನದ ಸಭೆಗಳಲ್ಲಿ ಕುಮಾರಸ್ವಾಮಿ ಭಾಗವಹಿಸದೇ ಇರುವ ವಿಚಾರದ ಬಗ್ಗೆ ಮಾತನಾಡಿ, ನಾವೆಲ್ಲ ಸಭೆಗಳಲ್ಲಿ ಭಾಗವಹಿಸಿದ್ದೇವೆ. ಕೇಂದ್ರ ಮಂತ್ರಿಗಳು ಬರಲು ಸಾಧ್ಯವಾಗಿಲ್ಲ. ಸಂಸತ್ ಅಧಿವೇಶನ ಇರುವ ಹಿನ್ನೆಲೆಯಲ್ಲಿ ಭಾಗವಹಿಸಿಲ್ಲ. ಮಧ್ಯಾಹ್ನ 1.30ಕ್ಕೆ ಬರಲು ಹೇಳಿ 4 ಗಂಟೆಗೆ ಸಚಿವರು ಬರುತ್ತಾರೆ. ಇದಾ ಉಸ್ತುವಾರಿ ಸಚಿವರ ಹುಟ್ಟು ಎಂದು ಕಿಡಿಕಾರಿದ ಅವರು, ನಮಗೆ ವಹಿಸಿರುವ ಜವಾಬ್ದಾರಿ ಮಾಡುತ್ತಿದ್ದೇವೆ. ಜಿಲ್ಲಾಡಳಿತ ಕರೆದಿದೆ ನಾವು ಹೋಗಿದ್ದೇವೆ ನಾವು ನಾಡು ನುಡಿಯ ಕೆಲಸ ಮಾಡಿದ್ದೇವೆ ಸಾಹಿತ್ಯ ಸಮ್ಮೇಳನ ಚೆನ್ನಾಗಿ ಮಾಡಲಿ ಎಂದರು.

ನಿಖಿಲ್‌ಕುಮಾರಸ್ವಾಮಿಗೆ ಜೆಡಿಎಸ್ ರಾಜ್ಯಾಧ್ಯಕ್ಷ ಪಟ್ಟ ವಿಚಾರದ ಬಗ್ಗೆ ಮಾತನಾಡಿ, ಅದನ್ನು ದೇವೇಗೌಡರು ತೀರ್ಮಾನ ಮಾಡುತ್ತಾರೆ. ಕಾಂಗ್ರೆಸ್‌ನಲ್ಲೂ ವಂಶರಾಜಕಾರಣ ಇದೆ. ಜವಹಾರ್ ಲಾಲ್ ನೆಹರು ಕುಟುಂಬದಲ್ಲಿ ಕೂಡ ಕುಟುಂಬ ರಾಜಕಾರಣ ಇದೆ. ದೇವೇಗೌಡರ ಕುಟುಂಬ ರಾಜಕಾರಣ ಮಾಡಿದರೆ ತಪ್ಪೇನು? ಕಾಂಗ್ರೆಸ್‌ನಲ್ಲಿ ಇದೀಗ ಏನು ಆಗುತ್ತಿದೆ ನೋಡಿಕೊಂಡು ಚಲುವರಾಯಸ್ವಾಮಿ ಮಾತನಾಡಬೇಕು. ಇದು ಬಹಳ ದಿನ ನಡೆಯುವುದಿಲ್ಲ. ಲಘುವಾಗಿ ಮಾತನಾಡುವನ್ನದನ್ನು ನಿಲ್ಲಿಸಿ ಗೌರವ ಇಟ್ಟುಕೊಂಡು ಮಾತನಾಡಲಿ ಎಂದು ಹೇಳಿದರು.

ಭಾರತೀನಗರದಲ್ಲಿ ಕನ್ನಡ ರಥಕ್ಕೆ ಅದ್ಧೂರಿ ಸ್ವಾಗತ

ಭಾರತೀನಗರ, ಡಿ.8–ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳದ ಅಂಗವಾಗಿ ಜಿಲ್ಲಾದ್ಯಂತ ಸಂಚರಿಸುತ್ತಿರವ ಕನ್ನಡ ರಥಕ್ಕೆ ಭಾರತೀನಗರದಲ್ಲಿ ಅದ್ದೂರಿ ಸ್ವಾಗತ ನೀಡಲಾಯಿತು.

ಮಳವಳ್ಳಿ ತಾಲೂಕಿನಿಂದ ಆಗಮಿಸಿದ ಕನ್ನಡ ರಥವನ್ನು ಶಾಸಕ ಮಧು ಜಿ.ಮಾದೇಗೌಡ, ಗ್ರಾಪಂ ಅಧ್ಯಕ್ಷೆ ಸೌಭಾಗ್ಯ ರಮೇಶ್, ಪಿಡಿಓ ಸುಧಾ, ಪೊಲೀಸ್ ಇನ್ಸ್‌ಪೆಕ್ಟರ್ ಆನಂದ್ ಹಾಗೂ ಗ್ರಾಮ ಪಂಚಾಯಿತ ಉಪಾಧ್ಯಕ್ಷೆ, ಸದಸ್ಯರುಗಳು ಅದ್ದೂರಿಯಾಗಿ ಬರಮಾಡಿಕೊಂಡರು.

ನಂತರ ಶಾಸಕ ಮಧು ಜಿ.ಮಾದೇಗೌಡ ಮಾತನಾಡಿ, ಮಂಡ್ಯದಲ್ಲಿ ಡಿ.20, 21, 22 ರಂದು ಮೂರು ದಿನಗಳ ಕಾಲ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ರಥ ಭಾರತೀನಗರಕ್ಕೆ ಆಗಮಿಸಿದೆ. ಇದನ್ನು ಅದ್ದೂರಿಯಾಗಿ ಬರಮಾಡಿಕೊಂಡು ಬೀಳ್ಕೊಡಬೇಕು. ಕನ್ನಡ ಸಾಹಿತ್ಯ ಸಮ್ಮೇಳನ ನಮ್ಮ ಮಂಡ್ಯದಲ್ಲಿ ನಡೆಯಲಿದ್ದು ಮೂರು ದಿನಗಳ ಕಾಲ ಕನ್ನಡದ ಹಬ್ಬವಾಗಿದೆ. ನಮ್ಮ ತಾಲೂಕಿನಿಂದ ಪ್ರತಿದಿನ 25000 ಜನರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಈ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಗೊಳಿಸೋಣ ಎಂದರು.



ಭಾರತೀನಗರಕ್ಕೆ ಆಗಮಿಸಿದ ಕನ್ನಡ ರಥವನ್ನು ಭವ್ಯವಾಗಿ ಸ್ವಾಗತಿಸಲಾಯಿತು.

ಅಂಗನವಾಡಿ ಕಾರ್ಯಕರ್ತರಿಂದ ಪೂರ್ಣ ಕುಂಭ ಸ್ವಾಗತ ನೀಡಲಾಯಿತು. ವಿವಿಧ ಜಾನಪದ ಕಲಾ ಪ್ರಕಾರಗಳಾದ ಪೂಜಾಕುಣಿತ, ಚರ್ಮವಾದ್ಯ, ಮತ್ತಿತರ ಪ್ರಕಾರಗಳೊಂದಿಗೆ ಭಾರತೀನಗರದ ಮದ್ದೂರು ಮಳವಳ್ಳಿ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ನಡೆಸಲಾಯಿತು. ಈ ವೇಳೆ ಕನ್ನಡಾಭಿಮಾನಿಗಳು ಭುವನೇಶ್ವರಿಗೆ ಜೈಕಾರ ಹಾಕಿ ಕನ್ನಡ ಭಾಷೆ, ನಾಡು–ನುಡಿ ಬಗ್ಗೆ ಘೋಷಣೆ ಕೂಗಿದರು. ಕನ್ನಡ ಗೀತೆಗಳನ್ನು ವಿದ್ಯಾರ್ಥಿಗಳು ಹಾಡಿದರು.

ಜಿಲ್ಲೆಯ ವಿವಿಧ ಭಾಗದ ಸ್ವಯಂ ಸೇವಾ ಕಲಾ ತಂಡಗಳು ರಥದೊಟ್ಟಿಗೆ ಆಗಮಿಸಿದ್ದು, ಕನ್ನಡ ಭಾಷೆಗೆ ಮೆರಗು ನೀಡುವ ಕಲೆ ಪ್ರದರ್ಶಿಸಿದರು. ನಂತರ ಸುತ್ತಮುತ್ತಲ ಅಣ್ಣೂರು, ದೊಡ್ಡಅರಸಿನಕೆರೆ, ಮೆಣಸಗೆರೆ ಗ್ರಾಮ ಪಂಚಾಯಿತಿಗಳಲ್ಲಿ ಸಂಚರಿಸಿ ಸಮ್ಮೇನದ ಬಗ್ಗೆ ಪ್ರಚಾರ ಕೈಗೊಳ್ಳಲಾಯಿತು. ನಂತರ ಮದ್ದೂರು ಪಟ್ಟಣಕ್ಕೆ ಎಲ್ಲರೂ ಬೀಳ್ಕೊಕೊಟ್ಟರು.

ಇದೇ ವೇಳೆ ಗ್ರಾಪಂ ಉಪಾಧ್ಯಕ್ಷೆ ಸುವರ್ಣ, ಸದಸ್ಯರಾದ ಕೆ.ಟಿ.ಶ್ರೀನಿವಾಸ್, ಪುಟ್ಟರಾಮು, ಕೆವಿ.ಶ್ರೀನಿವಾಸ್, ಮಿಥುನ್, ವಿನಯ್ ಹೊನ್ನೇಗೌಡ, ರಾಘವೇಂದ್ರ ಉಪಸ್ಥಿತರಿದ್ದರು.

ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿ ಆಹ್ವಾನ

ಮಂಡ್ಯ,ಡಿ.8– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಮಿಷನ್ ಶಕ್ತಿ ಯೋಜನೆಯ ಉಪಯೋಜನೆ ಸಾಮರ್ಥ್ಯದಡಿ ಜಿಲ್ಲಾ ಮಹಿಳಾ ಸಬಲೀಕರಣ ಘಟಕಕ್ಕೆ ಜೆಂಡರ್ ಸ್ಪೆಷಲಿಸ್ಟ್–1 ಹುದ್ದೆ, ಡಿ.ಇ.ಓ ಮತ್ತು ಪಿ.ಎಂ.ಎಂ.ವಿ.ವೈ ಕಾರ್ಯಕ್ರಮ ಸಹಾಯಕರು–1 ಹುದ್ದೆ ಸೇರಿದಂತೆ ಒಟ್ಟು 2 ಹುದ್ದೆಗಳನ್ನು ತಾತ್ಕಾಲಿಕವಾಗಿ ಗುತ್ತಿಗೆ ಒಪ್ಪಂದದ ಮೇರೆಗೆ ಗೌರವಧನ ಆಧಾರದಲ್ಲಿ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕಚೇರಿಯಲ್ಲಿ ಪಡೆದು ಡಿಸೆಂಬರ್ 30ರೊಳಗೆ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08232–227336/221315 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ.ಆರ್.ಪೇಟೆಯಲ್ಲಿ ಅಂಬೇಡ್ಕರ್ ಪರಿನಿಬ್ಬಾಣ ದಿನ ಆಚರಣೆ

ಕೆ.ಆರ್.ಪೇಟೆ,ಡಿ.8–ತಾಲೂಕು ಛಲವಾದಿ ಮಹಾಸಭಾ ಹಾಗೂ ತಾಲೂಕು ದಲಿತ ಪರ ಸಂಘಟನೆಗಳ ವತಿಯಿಂದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 68ನೇ ಪರಿನಿಬ್ಬಾಣ ದಿನವನ್ನು ಆಚರಿಸಲಾಯಿತು.

ಪಟ್ಟಣದ ಎಂ.ಕೆ.ಬೊಮ್ಮೇಗೌಡ ವೃತ್ತದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಬೃಹತ್ ಕಟೌಟ್ ಪ್ರತಿಷ್ಠಾಪಿಸಿದ ದಲಿತ ಪರ ಸಂಘಟನೆಗಳ ಮುಖಂಡರು ಹಾಗೂ ಅಂಬೇಡ್ಕರ್ ಅನುಯಾಯಿಗಳು ಅಂಬೇಡ್ಕರ್ ಕಟೌಟ್‌ಗೆ ವಿಶೇಷ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ ಸಂವಿಧಾನ ಶಿಲ್ಪಿಗೆ ವಿಶೇಷವಾಗಿ ಭಕ್ತಿ ನಮನಗಳನ್ನು ಸಲ್ಲಿಸಿದರು.

ತಾಲೂಕು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ರಾಜಯ್ಯ ಮಾತನಾಡಿ ಅಂಬೇಡ್ಕರ್ ಅವರು ಇಡೀ ವಿಶ್ವವೇ ಮೆಚ್ಚುವಂತಹ ಸಂವಿಧಾನವನ್ನು ಭಾರತಕ್ಕೆ ಕೊಟ್ಟಿದ್ದಾರೆ. ಅಂಬೇಡ್ಕರ್ ಅವರು ಬರೆದ ಸಂವಿಧಾನವು ಸರ್ವಶ್ರೇಷ್ಠವಾದದು. ದೇಶದ ಎಲ್ಲಾ ಜನತೆಗೆ ಸಾಮಾಜಿಕ ನ್ಯಾಯವನ್ನು ನೀಡಿದ ಅಂಬೇಡ್ಕರ್ ಅವರ ಸಂವಿಧಾನವನ್ನು ಇಡೀ ವಿಶ್ವವೇ ಮೆಚ್ಚಿದೆ. ಇದರಿಂದಾಗಿ ಅಂಬೇಡ್ಕರ್ ಹುಟ್ಟಿದ ದಿನವನ್ನು ವಿಶ್ವಜ್ಞಾನ ದಿನ ಎಂದು ಪ್ರಪಂಚದ ಅಮೇರಿಕಾ, ಇಂಗ್ಲೆಂಡ್ ಸೇರಿದಂತೆ ವಿವಿಧ ಪ್ರಮುಖ ದೇಶಗಳು ಆಚರಣೆ ಮಾಡುತ್ತಿವೆ ಇದಕ್ಕೆ ಅಂಬೇಡ್ಕರ್ ಅವರ ಜ್ಞಾನವೇ ಮುಖ್ಯವಾಗಿದೆ ಎಂದರು.



ಪುರಸಭಾ ಸದಸ್ಯ ಡಿ.ಪ್ರೇಮಕುಮಾರ್ ಮಾತನಾಡಿ ಇಡೀ ಪ್ರಪಂಚದಲ್ಲಿ ಅಂಬೇಡ್ಕರ್ ಅವರಷ್ಟು ಡಿಗ್ರಿಗಳನ್ನು ಪಡೆದವರು ಯಾರೂ ಇಲ್ಲ. ಇದರಿಂದಾಗಿ ಅಂಬೇಡ್ಕರ್ ಅವರಿಗೆ ಇಡೀ ಪ್ರಪಂಚವೇ ಗೌರವ ಕೊಡುತ್ತಿದೆ ಇಂತಹ ಮಹನೀಯ ಭಾರತದಲ್ಲಿ ಹುಟ್ಟದೇ ಇದ್ದರೆ ಸಂವಿಧಾನ ಬರೆಯದೇ ಇದ್ದರೆ ದಲಿತರಾದ ನಾವುಗಳು ಇಂದಿಗೂ ಗುಲಾಮಗಿರಿಯಲ್ಲಿಯೇ ಬದುಕ ಬೇಕಾಗಿತ್ತು ಎಂದರು.


ತಾಲೂಕು ಛಲವಾದಿ ಮಹಾಸಭಾ ಅಧ್ಯಕ್ಷ ಊಚನಹಳ್ಳಿ ನಟರಾಜ್ ಮಾತನಾಡಿದರು.

ತಾಲೂಕು ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ರಾಜಯ್ಯ, ಮುಖಂಡರಾದ ಸೋಮಸುಂದರ್, ನಿವೃತ್ತ ಶಿಕ್ಷಕ ಶಂಕರ್, ಚಿಕ್ಕಗಾಡಿಗನಹಳ್ಳಿ ಸಂತೋಷ್, ಲಕ್ಷ್ಮೀಪುರ ರಂಗಸ್ವಾಮಿ, ಮಾಂಬಳ್ಳಿ ಜಯರಾಂ, ಹೊಸಹೊಳಲು ಕುಮಾರ್, ಮುದುಗೆರೆ ಮಹೇಂದ್ರ ಹರಿಹರಪುರ ನರಸಿಂಹ, ನಾಟನಹಳ್ಳಿ ಮಂಜು, ವಾರ್ಡನ್ ರಾಮಕೃಷ್ಣ ಪ್ರದೀಪ್, ಕಾರ್ ವಾಸು, ಸತೀಶ್, ಚಂದ್ರು, ಮತ್ತಿತರರು ಸೇರಿದಂತೆ ನೂರಾರು ಜನರು ಭಾಗವಹಿಸಿದ್ದರು.

ಸರ್ಕಾರದ ಬೊಕ್ಕಸ ಬರಿದಾಗಿ ಕಳಪೆ ಔಷಧ ಖರೀದಿಯೇ ಬಾಣಂತಿಯರ ಸಾವಿಗೆ ಕಾರಣ

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಆರೋಪ

ಹುಬ್ಬಳ್ಳಿ, ಡಿ.8– ರಾಜ್ಯ ಸರ್ಕಾರದ ಆರ್ಥಿಕಸ್ಥಿತಿ ಬೌದ್ಧಿಕವಾಗಿ ದಿವಾಳಿಯಾಗಿದೆ. ಸರ್ಕಾರದ ಬೊಕ್ಕಸ ಬರಿದಾಗಿದೆ. ಗುಣಮಟ್ಟದ ಔಷಧಿ ಖರೀದಿ ಮಾಡಲೂ ದುಡ್ಡಿಲ್ಲ. ಕಳಪೆ ಔಷಧಿ ಪೂರೈಕೆ ಕಂಪನಿಗಳಿಂದ ಖರೀದಿಸುತ್ತಿದೆ ಅದರ ಪರಿಣಾಮದಿಂದಲೇ ಬಳ್ಳಾರಿಯಲ್ಲಿ ಬಾಣಂತಿಯರ ಸಾವು ಸಂಭವಿಸಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಗಂಭೀರ ಆರೋಪ ಮಾಡಿದರು.



ಪ್ರಹ್ಲಾದ್ ಜೋಶಿ

ಹುಬ್ಬಳ್ಳಿಯಲ್ಲಿ ಇಂದು ಮಾಧ್ಯಮ ದವರೊಂದಿಗೆ ಮಾತನಾಡಿದ ಅವರು, ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಯೇ ಲಭ್ಯವಿಲ್ಲ. ವೈದ್ಯರು ಹೊರಗಡೆ ತರಲು ಚೀಟಿ ಬರೆದು ಕೊಡುತ್ತಿದ್ದಾರೆ. ರಾಜ್ಯವನ್ನು ಇಂಥ ಅವಸ್ಥೆಗೆ ತಂದಿಟ್ಟಿದೆ ಈ ಸರ್ಕಾರ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಳ್ಳಾರಿ ಬಾಣಂತಿಯರ ಸಾವಿನ ಪ್ರಕರಣದಲ್ಲಿ ಆರೋಗ್ಯ ಸಚಿವರು ಸಂಪೂರ್ಣ ವೈಫಲ್ಯ ಕಂಡಿದ್ದಾರೆ. ತಮ್ಮ ತಪ್ಪು ಮುಚ್ಚಿಕೊಳ್ಳಲು ಕೇಂದ್ರ ದತ್ತ ಬೆರಳು ತೋರುತ್ತಿದ್ದಾರೆ ಎಂದು ಆರೋಪಿಸಿದರು. ಐವಿ ದ್ರಾವಣಕ್ಕೆ ಕೇಂದ್ರ ಅನುಮತಿ ನೀಡಿದೆ ಎಂದಿದ್ದಾರೆ. ಆದರೆ, ಕೇಂದ್ರದ ಅನುಮತಿ ಪಡೆಯುವಾಗ ಗುಣಮಟ್ಟದ ಔಷಧಿ ಕಳುಹಿಸಿ ನಂತರದಲ್ಲಿ ಕಳಪೆ ಗುಣಮಟ್ಟದ್ದನ್ನು ಪೂರೈಸಿದರೆ ಯಾರು ಹೊಣೆ? ರಾಜ್ಯ ಸರ್ಕಾರ ಆಗಾಗ ತಪಾಸಣೆ ನಡೆಸಬೇಕಲ್ಲವೇ ಎಂದು ಪ್ರಶ್ನಿಸಿದರು.

21ನೇ ಶತಮಾನದ ಮುಂದುವರಿದ ಮೆಡಿಕಲ್ ಸೈನ್ಸ್ ಯುಗದಲ್ಲಿ ಬಾಣಂತಿಯರ ಸಾವು ಎಂದರೆ ನಾಚಿಕೆಗೇಡಿನ ಸಂಗತಿ. ರಾಜ್ಯ ಕಾಂಗ್ರೆಸ್ ಸರ್ಕಾರ ಗಂಭೀರವಾಗಿ ಪರಿಗಣಿಸದೇ ಇರುವುದಕ್ಕೆ ನಾಚಿಕೆಯಾಗಬೇಕು ಎಂದು ವಾಗ್ದಾಳಿ ನಡೆಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ಸಾಹಿತ್ಯಕ-ಸಾಂಸ್ಕೃತಿಕ ಸ್ಪರ್ಧೆ

ಯುವರಾಜ ಕಾಲೇಜಿಗೆ ಸಮಗ್ರ ಚಾಂಪಿಯನ್‌ಶಿಪ್

ಮೈಸೂರು,ಡಿ.8(ಪಿಎಂ)– ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ವತಿಯಿಂದ ಆಯೋಜಿಸಿದ್ದ 2024–25ನೇ ಶೈಕ್ಷಣಿಕ ಸಾಲಿನ ವಿಶ್ವವಿದ್ಯಾನಿಲಯ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಯುವರಾಜ ಕಾಲೇಜು ವಿದ್ಯಾರ್ಥಿಗಳ ತಂಡವು ಸಮಗ್ರ ಚಾಂಪಿಯನ್‌ಶಿಪ್‌ನಲ್ಲಿ ಪ್ರಥಮ ಸ್ಥಾನಕ್ಕೆ ಭಾಜನವಾಯಿತು.

ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದ ಯುವರಾಜ ಕಾಲೇಜು ವಿದ್ಯಾರ್ಥಿಗಳು 31 ಅಂಕಗಳನ್ನು ಪಡೆಯುವ ಮೂಲಕ ಪ್ರಥಮ ಸ್ಥಾನ ಪಡೆದರು. ಅಂತೆಯೇ ಮಾನಸ ಗಂಗೋತ್ರಿಯ ಬಯೋ ಟೆಕ್ನಾಲಜಿ ವಿಭಾಗ ಮತ್ತು ಕಾವಾ ಕಾಲೇಜು ವಿದ್ಯಾರ್ಥಿಗಳ ತಂಡವು ತಲಾ 15 ಅಂಕಗಳನ್ನು ಪಡೆಯುವ ಮೂಲಕ ದ್ವಿತೀಯ ಸ್ಥಾನ ಹಂಚಿಕೊಂಡವು. ಅದೇ ರೀತಿ 11 ಅಂಕಗಳನ್ನು ಪಡೆದ ಮೈಸೂರಿನ ಸರ್ಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳ ತಂಡವು ಸಮಗ್ರ ಚಾಂಪಿಯನ್‌ಶಿಪ್‌ನಲ್ಲಿ ಮೂರನೇ ಸ್ಥಾನಕ್ಕೆ ಭಾಜನವಾಯಿತು.



ಮೈಸೂರಿನ ಮಾನಸ ಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರೋಪ ಸಮಾರಂಭದಲ್ಲಿ ಸಮಗ್ರ ಪ್ರಶಸ್ತಿಯಲ್ಲಿ ಪ್ರಥಮ ಸ್ಥಾನಕ್ಕೆ ಭಾಜನರಾದ ಯುವರಾಜ ಕಾಲೇಜು ವಿದ್ಯಾರ್ಥಿಗಳು ಅತಿಥಿಗಳಿಂದ ಟ್ರೋಫಿ ಸ್ವೀಕರಿಸಿದರು.

ಮೈಸೂರಿನ ಮಾನಸ ಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರೋಪ ಸಮಾರಂಭದಲ್ಲಿ ಟ್ರೋಫಿ ಹಾಗೂ ಪ್ರಮಾಣ ಪತ್ರಗಳನ್ನು ವಿತರಣೆ ಮಾಡಲಾಯಿತು. ಜೊತೆಗೆ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೂ ಪ್ರಮಾಣ ಪತ್ರ ನೀಡಲಾಯಿತು. ವಿಶ್ವವಿದ್ಯಾನಿಲಯದ ಸಂಯೋಜಿತ ಕಾಲೇಜುಗಳು ಹಾಗೂ ಅಧ್ಯಯನ ವಿಭಾಗಗಳಿಂದ ಸುಮಾರು 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

ಮಾನಸ ಗಂಗೋತ್ರಿಯ ಲಲಿತ ಕಲೆಗಳ ಕಾಲೇಜಿನ ಸಭಾಂಗಣ, ಆವರಣ, ಬಿಎಂಶ್ರೀ ಸಭಾಂಗಣ, ಇಎಂಆರ್‌ಸಿ ಸಭಾಂಗಣದಲ್ಲಿ ಶನಿವಾರ ಹಾಗೂ ಭಾನುವಾರ ಸೇರಿದಂತೆ ಎರಡು ದಿನಗಳ ಕಾಲ ಸ್ಪರ್ಧೆಗಳು ನಡೆದವು. ಸಂಗೀತ, ನೃತ್ಯ, ರಂಗ ಚಟುವಟಿಕೆಗಳು, ಲಲಿತ ಕಲೆಗಳು ಹಾಗೂ ಸಾಹಿತ್ಯದ 5 ಪ್ರಕಾರಗಳಿಗೆ ಸೇರಿದ 17 ವಿವಿಧ ರೀತಿಯ ಸ್ಪರ್ಧೆಗಳು ನಡೆದವು. ಇದರಲ್ಲಿ 4 ಬಹುವ್ಯಕ್ತಿ ಸ್ಪರ್ಧೆಗಳು ಹಾಗೂ 13 ಏಕವ್ಯಕ್ತಿ ಸ್ಪರ್ಧೆಗಳು ನಡೆದವು.

ದಕ್ಷಿಣ ಪೂರ್ವ ವಲಯ ಉತ್ಸವದಲ್ಲಿ ಭಾಗಿ: ತೀರ್ಪುಗಾರರ ಆಯ್ಕೆಯಂತೆ ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿ ತಂಡಗಳಿಗೆ ಪ್ರಮಾಣ ಪತ್ರಗಳನ್ನು ವಿತರಣೆ ಮಾಡಲಾಯಿತು. ಇಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಉತ್ತಮ ಪ್ರದರ್ಶನ ನೀಡುವವರು 38ನೇ ದಕ್ಷಿಣ ಪೂರ್ವ ವಲಯ ಯುವಜನೋತ್ಸವದಲ್ಲಿ ಪಾಲ್ಗೊಳ್ಳಲು ಅರ್ಹತೆ ಪಡೆಯಲಿದ್ದಾರೆ. ಡಿ.19ರಿಂದ 23ರವರೆಗೆ ಬೆಂಗಳೂರಿನ ಕೆಂಗೇರಿಯ ಕ್ರೈಸ್ಟ್ ಕ್ಯಾಂಪಸ್‌ನಲ್ಲಿ (ಡೀಮ್ಡ್ ಯುನಿವರ್ಸಿಟಿ) 38ನೇ ದಕ್ಷಿಣ ಪೂರ್ವ ವಲಯ ಯುವಜನೋತ್ಸವ ನಡೆಯಲಿದೆ.

ಸಮಾರೋಪ ಸಮಾರಂಭದಲ್ಲಿ ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜ, ಆಡಳಿತಾಧಿಕಾರಿ ಪ್ರೊ.ಎಸ್.ಟಿ.ರಾಮಚಂದ್ರ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಪ್ರೊ.ಸಿ.ಗುರುಸಿದ್ದಯ್ಯ, ಸಹಾಯಕ ನಿರ್ದೇಶಕ ಡಾ.ಎಸ್.ಎನ್. ಸುಷ್ಮಾ, ಪ್ರಾಧ್ಯಾಪಕ ಡಾ.ನಿಂಗರಾಜು ಮತ್ತಿತರರು ಹಾಜರಿದ್ದರು.

ಸಂತೋಷದಿಂದ ಜೀವಿಸುವುದೇ ಬದುಕಿನ ಮಾರ್ಗ

'ಸಮತೆ–ಮಮತೆ' ಕಾರ್ಯಕ್ರಮದಲ್ಲಿ ಪ್ರೊ.ಕೃಷ್ಣೇಗೌಡ ಅಭಿಮತ

ಮೈಸೂರು,ಡಿ.8(ಎಸ್‌ಪಿಎನ್)– ಮನುಷ್ಯ ಹಲವು ಆಲೋಚನೆಗಳಲ್ಲಿ ನಿತ್ಯ ಬದುಕು ಕಟ್ಟಿಕೊಳ್ಳುತ್ತಾನೆ. ಆದರೆ, ಆತ ದಿನನಿತ್ಯ ಎಷ್ಟು ಹಸನ್ಮುಖಿ ಬದುಕು ಕಟ್ಟಿಕೊಳ್ಳುತ್ತಾನೆ ಎಂಬುದು ಮುಖ್ಯ ಎಂದು ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ ತಿಳಿಸಿದರು.

ಮೈಸೂರು ಜೆ.ಕೆ.ಮೈದಾನದ ಮೈಸೂರು ಮೆಡಿಕಲ್ ಕಾಲೇಜು ಶತಮಾನೋತ್ಸವ ಭವನದಲ್ಲಿ ಸ್ವರಾಂಜಲಿ ಮತ್ತು ಶಾರದಾ ಎಜುಕೇಷನಲ್ ಚಾರಿಟಬಲ್ ಟ್ರಸ್ಟ್ ಸೇರಿದಂತೆ ಇತರೆ ಸಂಘ–ಸಂಸ್ಥೆಗಳ ಸಹಯೋಗದೊಂದಿಗೆ 'ಸಮತೆ–ಮಮತೆ' ಶೀರ್ಷಿಕೆಯಡಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಸಂತಸದಿಂದ ಜೀವನ ನಡೆಸುತ್ತಿದ್ದೇವೆ ಎಂಬುದನ್ನು ನಾವು ಮೊದಲು ತಿಳಿದಕೊಳ್ಳಬೇಕು. ಅದುವೆ ಬದುಕಿನ ಮಾರ್ಗ. ನಮ್ಮ ಹಿರಿಯರು ತಮ್ಮ ಜೀವನ ಅನುಭವಿಸುವುದನ್ನು ಮರೆಯಬಾರದು ಎಂದ ಅವರು, ಹಿರಿಯ ಕಲಾವಿದೆ ಹೆಚ್.ಆರ್.ಲೀಲಾವತಿ ಅವರು, 1934ರಲ್ಲಿ ಹುಟ್ಟಿದರೂ ನನಗೀಗ 16 ವರ್ಷ ಎನ್ನುತ್ತಾರೆ. 16 ವರ್ಷ ಪ್ರಾಯದವರಿಗೆ ಇರುವ ದನಿ ಈಗಲೂ ಅವರಿಗಿದೆ. ಅದು ಸಾಧ್ಯವಾಗಿದ್ದು, ಅವರು ತಮ್ಮ ಬದುಕನ್ನು ಸ್ವೀಕರಿಸಿದ ರೀತಿ ಎಂದು ಕೆಲ ಘಟನೆಗಳನ್ನು ಉಲ್ಲೇಖಿಸಿ ತಿಳಿಸಿದರು. ಪ್ರಸ್ತುತ ದೇಹದ ಆರೋಗ್ಯ ಮಾತ್ರ ಮುಖ್ಯವಲ್ಲ. ಸಾಮಾಜಿಕ ಆರೋಗ್ಯವೂ ಮುಖ್ಯ. ಎಲ್ಲರೂ ನಂಬುವಂತಹ ಸಮಾಜ ನಮ್ಮ ಸುತ್ತಲೂ ಇರಬೇಕು. ಎಲ್ಲರೂ ನಮ್ಮವರೇ ಎಂದು ಬದುಕಿದರೆ ಅದೇ ಮಮತೆ, ಅದೇ ಸಮತೆ ಎಂದರು.



'ಸಮತೆ–ಮಮತೆ' ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು.

ಹಿರಿಯ ಗಾಯಕಿ ಎಚ್.ಆರ್. ಲೀಲಾವತಿ ಮಾತನಾಡಿ, ವಯಸ್ಸಾದ ಮೇಲೆ ಎಲ್ಲರೂ ಕಾಳಜಿಯನ್ನು ಬಯಸುತ್ತಾರೆ. ಹಿರಿಯ ಜೀವಗಳಿಗೆ ಪ್ರೋತ್ಸಾಹ, ಸಾಂತ್ವಾನ ಹೆಚ್ಚು ಅಗತ್ಯವಿರುತ್ತದೆ ಎಂದರಲ್ಲದೆ, ಹಿರಿಯ ನಾಗರಿಕರಿಗೆ ಪರಸ್ಪರ ಕ್ಷೇಮ ಕುಶಲ ಮಾತುಗಳಿಗೆ ವೇದಿಕೆ ಕಲ್ಪಿಸಿರುವುದು ಸಂತಸ ತಂದಿದೆ. ಇಂಥ ಕಾರ್ಯಕ್ರಮಗಳು ಹೆಚ್ಚಳವಾಗಬೇಕು ಎಂದರು.

ಸಿನಿಮಾ ಸಂಗೀತ ನಿರ್ದೇಶಕರಾದ ರಾಜನ್–ನಾಗೇಂದ್ರ ಅವರ ಶಿಷ್ಯರಾದ ಇಂದುಮತಿ ಜೈಪಾಲ್, ಹರಿಹರ ಕೃಷ್ಣಮೂರ್ತಿ ಅವರನ್ನು ಅಭಿನಂದಿಸಲಾಯಿತು. ರಂಗವಲ್ಲಿ ಸ್ಪರ್ಧೆಯಲ್ಲಿ ಕೆ.ಬಿ.ಲೀಲಾವತಿ, ಎ.ಎಸ್.ಸರಳಾ, ಎಸ್.ಶಕುಂತಲಾ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನವನ್ನು ಹಾಗೂ ಯದುಗಿರಿ, ಪದ್ಮಾ ವೆಂಕಟೇಶ್, ಎಸ್.ಮನೋರಮಾ ಅವರಿಗೆ ಸಮಾಧಾನಕರ ಬಹುಮಾನ ನೀಡಲಾಯಿತು.

ಗಾಯನ ಸ್ಪರ್ಧೆಯಲ್ಲಿ ಮಹಿಳಾ ವಿಭಾಗದಲ್ಲಿ ಜಯಂತಿ ಗೋಪಾಲ್, ಎಚ್.ಕೆ.ಉಮಾ, ಎಸ್.ಮೀನಾಕ್ಷಿ, ಪುರುಷ ವಿಭಾಗದಲ್ಲಿ ಎಸ್. ವೆಂಕಟೇಶ್, ಎಚ್.ವಿ.ನಾಗೇಂದ್ರ ಭಗವಾನ್ ಅವರಿಗೆ ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನವನ್ನು, ಎಸ್.ಕೆ. ಮೋಹನ್‌ಕುಮಾರ್, ಸಾಂಬ ಮೂರ್ತಿಗೆ ಸಮಾಧಾನಕರ ಬಹುಮಾನ ನೀಡಲಾಯಿತು. ಫ್ಯಾನ್ಸಿ ಡ್ರೆಸ್ ವಿಭಾಗದಲ್ಲಿ ಎಚ್.ಶ್ರೀಕಂಠೇಶ್, ಪರ್ವತಪ್ಪ, ಯದುಗಿರಿ, ರಮೇಶ್, ಗಾಯಿತ್ರಿ, ಶ್ರೀಕಾಂತ್ ಬಹುಮಾನಗಳನ್ನು ಪಡೆದರು. ಕಾರ್ಯಕ್ರಮದಲ್ಲಿ ಹಿರಿಯರಿಗೆ ಆರ್ಥಿಕ ಸಹಾಯ ನೀಡಲಾಯಿತು.

ಸ್ವರಾಂಜಲಿ ತಂಡದ ಮುಖ್ಯಸ್ಥೆ ಡಾ. ಲಾವಣ್ಯ ಶೆಣೈ, ನಾಟ್ಯ ಕುಟೀರ ಭಾರತೀಯ ಶಾಸ್ತ್ರೀಯ ನೃತ್ಯಶಾಲೆ ನಿರ್ದೇಶಕಿ ಕಲಾಮಂಡಲಂ ಸುಚಿತ್ರಾ ಅನಿಲ್ ಕುಮಾರ್, ಟ್ರಸ್ಟ್ ಅಧ್ಯಕ್ಷ ಶಂಕರ್ ಇದ್ದರು.

ಮನೆ ಬೀಗ ಮುರಿದು ಚಿನ್ನಾಭರಣ ಕಳವು

ಮೈಸೂರು, ಡಿ.8(ಎಂಕೆ)– ಅಕ್ಕ–ಪಕ್ಕದ ಮನೆಗಳನ್ನು ಲಾಕ್‌ಮಾಡಿ, ಮನೆಯೊಂದರ ಬೀಗ ಒಡೆದು ಚಿನ್ನಾಭರಣ ದೋಚಿರುವ ಘಟನೆ ಹೂಟಗಳ್ಳಿಯ ಕನ್ನೇಗೌಡ ಬ್ಲಾಕ್‌ನಲ್ಲಿ ಭಾನುವಾರ ಬೆಳಗಿನ ಜಾವ ನಡೆದಿದೆ.

ಇಲ್ಲಿನ ನಿವಾಸಿ ತಿಮ್ಮಶೆಟ್ಟಿ ಎಂಬುವರ ಮನೆಯಲ್ಲಿ ಕಳ್ಳತನ ನಡೆದಿದ್ದು, ಯಾರು ಇಲ್ಲದ ವೇಳೆ ಮನೆಯ ಬೀಗ ಒಡೆದು ಲಾಕರ್‌ನಲ್ಲಿದ್ದ 70 ಗ್ರಾಂ ತೂಕದ ಚಿನ್ನಾಭರಣ ದೋಚಿದ್ದಾರೆ. ಕಳ್ಳತನ ಮಾಡುವಾಗ ಅಕ್ಕ–ಪಕ್ಕದ ಮನೆಯವರು ಹೊರಗಡೆ ಬರದಂತೆ ನೆರೆ–ಹೊರೆಯವರ ಮನೆಗಳಿಗೆ ಬೀಗ ಹಾಕಿದ್ದಾರೆ.

ತಿಮ್ಮಶೆಟ್ಟಿ ಅವರ ಮನೆ ಬೀಗ ಒಡೆಯುವ ಶಬ್ದ ಕೇಳಿದ ಅಕ್ಕ–ಪಕ್ಕದವರು ಮನೆಯಿಂದ ಹೊರಗಡೆ ಬರಲು ಸಾಧ್ಯವಾಗದೆ, ಕರೆಮಾಡಿ ವಿಷಯ ತಿಳಿಸಿದ್ದಾರೆ. ಘಟನೆ ಮಾಹಿತಿ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಶ್ವಾನ ದಳ ಮತ್ತು ಬೆರಳಚ್ಚು ತಂಡದೊಂದಿಗೆ ಪರಿಶೀಲನೆ ನಡೆಸಿದ್ದಾರೆ. ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ನಿಂದ ಬಿದ್ದು ಸವಾರ ಸಾವು

ಮೈಸೂರು, ಡಿ.8(ಎಂಕೆ)– ಬೈಕ್ ಚಾಲನೆ ವೇಳೆ ನಿತ್ರಾಣಗೊಂಡು ಕುಸಿದು ಬಿದ್ದು ಸವಾರ ಮೃತಪಟ್ಟಿರುವ ಘಟನೆ ಮೈಸೂರಿನ ರಾಜರಾಜೇಶ್ವರಿ ನಗರದ ರಿಂಗ್ ರಸ್ತೆ ಬಳಿ ನಡೆದಿದೆ.

ಚಾಮರಾಜನಗರ ತಾಲೂಕಿನ ನಂಜೇದೇವನಪುರ ನಿವಾಸಿ ರವಿ(40) ಮೃತ ವ್ಯಕ್ತಿ. ಶನಿವಾರ ಬೆಳಗ್ಗೆ ತನ್ನ ಪುತ್ರನನ್ನು ನೋಡಲು ಪಿರಿಯಾಪಟ್ಟಣಕ್ಕೆ ಬೈಕಿನಲ್ಲಿ ತೆರಳುತ್ತಿದ್ದಾಗ ಇದ್ದಕ್ಕಿದ್ದಂತೆ ಅಸ್ವಸ್ಥಗೊಂಡು ವಾಹನ ಸಮೇತ ಕೆಳಗೆ ಬಿದ್ದಿದ್ದಾರೆ. ತಕ್ಷಣವೇ ಸಾರ್ವಜನಿಕರು ಆಸ್ಪತ್ರೆಗೆ ಕರೆದುಕೊಂಡು ದಾಖಲಿಸಿದರಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಕುವೆಂಪುನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರು ಮಿತ್ರ ಸೋಮವಾರ 9 ಡಿಸೆಂಬರ್ 2024

ಆರೋಗ್ಯಯುತ ಸಮಾಜಕ್ಕೆ ಸಂವಿಧಾನ ಅಗತ್ಯ

ಸಂವಿಧಾನ ಓದು ಅಧ್ಯಯನ ಶಿಬಿರದಲ್ಲಿ ನಿವೃತ್ತ ನ್ಯಾಯಮೂರ್ತಿ ನಾಗಮೋಹನದಾಸ್ ಪ್ರತಿಪಾದನೆ

ಮಡಿಕೇರಿ, ಡಿ.8–ಸಂವಿಧಾನದ ಪರ ಧ್ವನಿ ಮೊಳಗಿದಾಗ ಮಾತ್ರ ಸಮಾಜದಲ್ಲಿ ಸಮಾನತೆ, ಭ್ರಾತೃತ್ವ ಹುಟ್ಟುಹಾಕಲು ಸಾಧ್ಯ ಎಂದು ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನದಾಸ್ ಪ್ರತಿಪಾದಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ 'ಸಂವಿಧಾನ ಓದು ಅಧ್ಯಯನ ಶಿಬಿರ' ಉದ್ಘಾಟಿಸಿ ಮಾತನಾಡಿದ ಅವರು, ಕ್ಲಿಷ್ಟಕರ ಸನ್ನಿವೇಶಗಳಲ್ಲಿ ಸರಿಯಾದ ನಿರ್ಧಾರಗಳನ್ನು ತಳೆಯಲು ಸಂವಿಧಾನದ ಅರಿವು ಅತ್ಯವಶ್ಯವಾಗಿ ನಮಗೆ ಬೇಕು. ಜೊತೆಗೆ ಬದುಕಿನಲ್ಲಿ ಕಾನೂನಿನ ಪರಿಜ್ಞಾನದೊಂದಿಗೆ ಮೌಲ್ಯಗಳು ಅತ್ಯವಶ್ಯ ಎಂದರು.



ಮಡಿಕೇರಿ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಸಂವಿಧಾನ ಓದು ಅಧ್ಯಯನ ಶಿಬಿರದಲ್ಲಿ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಮಾತನಾಡಿದರು.

ಪ್ರತಿ ಜಿಲ್ಲೆಗೆ 100 ಮಂದಿ: ಶಾಂತಿಯುತ, ಭ್ರಾತೃತ್ವದ ಸಮಾನತೆಯ ಸಮ ಸಮಾಜದ ನಿರ್ಮಾಣಕ್ಕೆ ಸಂವಿಧಾನ ಒಂದೇ ಹಾದಿಯಾಗಿದ್ದು, ಈ ನಿಟ್ಟಿನಲ್ಲಿ ಸಂವಿಧಾನದ ಪರ ಧ್ವನಿಗಳನ್ನು ಹುಟ್ಟು ಹಾಕಲು ಸಂವಿಧಾನದ ಓದು ಶಿಬಿರಗಳನ್ನು ರಾಜ್ಯವ್ಯಾಪಿ ಆಯೋಜಿಸಲಾಗುತ್ತಿದೆ. ಪ್ರತಿ ಜಿಲ್ಲೆಯಲ್ಲಿ ಸಂವಿಧಾನದ ಮೂಲ ಆಶಯಗಳನ್ನು ಆಳವಾಗಿ ಅರಿತ 100 ಮಂದಿಯನ್ನು ಸಜ್ಜುಗೊಳಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶ ಎಂದು ತಿಳಿಸಿದರು.

ಸಂವಿಧಾನವನ್ನು ಅರಿತು ಬದುಕನ್ನು ಹಸನಾಗಿಸಿಕೊಳ್ಳುವುದರೊಂದಿಗೆ ಸವಾಲುಗಳನ್ನು ಮೆಟ್ಟಿ ನಿಲ್ಲೋಣ. ಇಂತಹ ಶಿಬಿರಗಳಿಂದ ಪಡೆದ ಜ್ಞಾನವನ್ನು ಕುಟುಂಬದೊಂದಿಗೆ, ನೆರೆಹೊರೆಯವರೊಂದಿಗೆ ಹಂಚಿಕೊಳ್ಳುವುದರ ಜೊತೆಯಲ್ಲೇ ನಾಡಿನುದ್ದಕ್ಕೂ ಪಸರಿಸಬೇಕಾಗಿದೆ ಎಂದು ಹೇಳಿದರು.

ಮೌಲ್ಯಗಳಿಂದ ಸುಂದರ ಭಾರತ: 1962ರ ಭಾರತ ಮತ್ತು ಪಾಕಿಸ್ತಾನ ಯುದ್ಧದ ಸಂದರ್ಭ ಫೀ.ಮಾ.ಕೆ.ಎಂ.ಕಾರ್ಯಪ್ಪ ಅವರ ಪುತ್ರ ಕೆ.ಸಿ.ಕಾರ್ಯಪ್ಪ ಹಾಗೂ ಭಾರತೀಯ ಹಲವು ಯೋಧರನ್ನು ಪಾಕಿಸ್ತಾನ ಸೆರೆ ಹಿಡಿದಿತ್ತು. ಆ ಸಂದರ್ಭ ಅಲ್ಲಿನ ಸೈನ್ಯ ಮುಖ್ಯಸ್ಥರಾಗಿದ್ದ ಅಯೂಬ್ ಖಾನ್, ಫೀ.ಮಾ.ಕೆ.ಎಂ.ಕಾರ್ಯಪ್ಪ ಅವರಿಗೆ ಪತ್ರ ಬರೆದು, ನಿಮ್ಮ ಮಗನನ್ನು ತಾವು ಅಪೇಕ್ಷಿಸಿದರೆ ಬಿಡುಗಡೆ ಮಾಡುವುದಾಗಿ ತಿಳಿಸುತ್ತಾರೆ. ಆ ಸಂದರ್ಭ ಕಾರ್ಯಪ್ಪ ಮರು ಪತ್ರದಲ್ಲಿ ತಮ್ಮ ಅಭಿಮಾನಕ್ಕೆ ಕೃತಜ್ಞತೆ. ಕೆ.ಸಿ.ಕಾರ್ಯಪ್ಪ ಅವರೊಂದಿಗೆ ಇರುವ ಸೈನಿಕರೆಲ್ಲರೂ ನನ್ನ ಮಕ್ಕಳೇ. ಬಿಡುಗಡೆ ಮಾಡುವುದಿದ್ದಲ್ಲಿ ಅವರೆಲ್ಲರನ್ನು ಬಿಡುಗಡೆ ಮಾಡಿ ಎಂದು ತಿಳಿಸುತ್ತಾರೆ. ಇಂತಹ ಉದಾತ್ತ ಮೌಲ್ಯಗಳನ್ನು ಪ್ರತಿಯೊಬ್ಬರು ಹೊಂದಿದಲ್ಲಿ ಸರ್ವಸುಂದರ ಭಾರತ ನಿರ್ಮಾಣ ಮಾಡಬಹುದು ಎಂದರು.

ಸಮಾಜ ಸೇವಕ ಹೆಚ್.ಎಂ.ನಂದ ಕುಮಾರ್ ಮಾತನಾಡಿ, ಸಂವಿಧಾನ ಬದಲಿಸಬೇಕು ಎನ್ನುವ ಮಾತುಗಳು ಎಂದಿಗೂ ಸಲ್ಲದು. ಸಾಮಾಜಿಕ, ಆರ್ಥಿಕ, ರಾಜಕೀಯವಾಗಿ ಹಿಂದುಳಿದ ಶೇ.90ರಷ್ಟು ಮಂದಿಗೆ ಸಮಾನತೆ ಒದಗಿಸಿದ್ದು ಸಂವಿಧಾನವೇ ಆಗಿದೆ ಎಂದು ತಿಳಿಸಿದರು.

> ರಾಜ್ಯದುದ್ದಕ್ಕೂ ನ್ಯಾಯಮೂರ್ತಿ ನಾಗಮೋಹನದಾಸ್ ಅವರು ಸಂವಿಧಾನ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ ನಡೆಸುತ್ತಿರುವುದು ಅತ್ಯಂತ ಶ್ಲಾಘನೀಯ. ಸಂವಿಧಾನ ರಚನಾ ಸಮಿತಿ ಅಧ್ಯಕ್ಷ ಡಾ.ಬಿ.ಆರ್.ಅಂಬೇಡ್ಕರ್ ಸಂವಿಧಾನವನ್ನು ಈ ರಾಷ್ಟ್ರಕ್ಕೆ ಅರ್ಪಿಸಿ 74 ವರ್ಷ ಸಂದಿದೆ. ಈ ಹಂತದಲ್ಲಿ ಇದರ ಅರಿವನ್ನು ಪಸರಿಸುವ ನಿಟ್ಟಿನಲ್ಲಿ ಸಂವಿಧಾನ ಓದು ಕಾರ್ಯಕ್ರಮ ಅರ್ಥಪೂರ್ಣ. ರಾಜ್ಯದ ಪ್ರತಿಯೊಂದು ಗ್ರಂಥಾಲಯಗಳಲ್ಲಿ ಸಂವಿಧಾನದ ಪ್ರತಿ ದೊರಕುವಂತೆ ಮಾಡುವ ಮತ್ತು ಶಾಲೆಗಳಲ್ಲಿ ವಾರಕ್ಕೊಮ್ಮೆಯಾದರು ಸಂವಿಧಾನದ ವಿಚಾರಗಳನ್ನು ತಿಳಿಸಿಕೊಡುವ ಕಾರ್ಯ ನಡೆಯುವಂತಾಗಬೇಕು.
>
> –ಟಿ.ಪಿ.ರಮೇಶ್, ಕೊಡಗು ಜಿಲ್ಲಾ ಅಹಿಂದ ಒಕ್ಕೂಟದ ಸ್ಥಾಪಕಾಧ್ಯಕ್ಷ

ಕಾರ್ಯಕ್ರಮದಲ್ಲಿ ಪದವಿಪೂರ್ವ ಕಾಲೇಜು ಶಿಕ್ಷಣ ಇಲಾಖೆ ಸಹಾಯಕ ನಿರ್ದೇಶಕಿ ಮಂಜುಳಾ, ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕದ ವ್ಯವಸ್ಥಾಪಕ ಎಂ.ಎಂ. ಮೆಹಬೂಬ್ ಅಲಿ, ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ನಂಜುಂಡಯ್ಯ, ಡಾ.ಸೋಮಶೇಖರ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಶೇಖರ್, ಸಂವಿಧಾನ ಓದು ಅಭಿಯಾನದ ರಾಜ್ಯ ಸಂಚಾಲಕ ರಾಜು ಗೊರೂರು, ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಧ್ಯಾಪಕ ಡಾ.ನರಸಿಂಹ ಮತ್ತಿತರರು ಉಪಸ್ಥಿತರಿದ್ದರು.

ಕೊಡಗಿನ ಗ್ರಾಮ ಸೇವೆಗಳಿಗೆ ಸದಾ ಬದ್ಧ

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಭರವಸೆ

ಮಡಿಕೇರಿ, ಡಿ.8–ಕೊಡಗಿನ ಗ್ರಾಮ ಮಟ್ಟದ ಸೇವೆಗಳಿಗೆ ನಾನು ಸದಾ ಬದ್ಧನಾಗಿದ್ದೇನೆ ಎಂದು ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದರು.

ನಗರದ ಜಿಲ್ಲಾಡಳಿತ ಕಟ್ಟಡದಲ್ಲಿ ಸಂಸದರ ನೂತನ ಕಚೇರಿಯನ್ನು ಭಾನುವಾರ ಉದ್ಘಾಟಿಸಿ ಮಾತನಾಡಿದ ಅವರು, ತಮ್ಮ ಕಚೇರಿಗೆ ಸಾರ್ವಜನಿಕರು ತಮ್ಮ ಗ್ರಾಮದ ಸಮಸ್ಯೆಗಳು ಮತ್ತು ಅಹವಾಲುಗಳನ್ನು ನೇರವಾಗಿ ತಲುಪಿಸಬಹುದು. ಕಚೇರಿಯಲ್ಲಿ ವಾರದ ಎಲ್ಲಾ ದಿನಗಳು ಸಲಹೆಗಾರರು ಮತ್ತು ಸಿಬ್ಬಂದಿ ಇರುತ್ತಾರೆ. ಕೊಡಗಿನ ಜನರ ಮೂಲಸೌಕರ್ಯಗಳ ಅಭಿವೃದ್ಧಿಗೆ ನನ್ನ ಸೇವೆಯನ್ನು ಮುಡಿಪಾಗಿಟ್ಟಿದ್ದೇನೆ ಎಂದು ಹೇಳಿದರು.

ಕುಶಾಲನಗರದಿಂದ ಶ್ರೀರಂಗಪಟ್ಟಣದ ವರೆಗಿನ ಹೆದ್ದಾರಿ ಕಾಮಗಾರಿಗೆ ಶೀಘ್ರದಲ್ಲೇ ಚಾಲನೆ ನೀಡಿ ಕೊಡಗಿನ ಜನತೆಗೆ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು. ಈ ಯೋಜನೆಗೆ ಈಗಾಗಲೇ ಕೇಂದ್ರ ಸರ್ಕಾರ ಅನುಮೋದನೆ ನೀಡಿದ್ದು, ಕೆಲವೇ ದಿನಗಳಲ್ಲಿ ಎನ್‌ಹೆಚ್–275ರಲ್ಲಿ ಹೊಸ ಮೇಲ್ಸೇತುವೆ ಮತ್ತು ವರ್ಧಿತ ಸಂಚಾರ ನಿಯಮಗಳು ಸೇರಿದಂತೆ ಪ್ರಮುಖ ಮೂಲ ಸೌಕರ್ಯ ನವೀಕರಣಗಳನ್ನು ಅನುಮೋದಿಸಲಾಗಿದೆ ಎಂದರು. ಈ ಸಂದರ್ಭ ಮಾಜಿ ಶಾಸಕರಾದ ಅಪ್ಪಚ್ಚು ರಂಜನ್, ಕೆ.ಜಿ. ಬೋಪಯ್ಯ, ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ಪಕ್ಷದ ಮುಖಂಡ ಡಾ.ಎಂ. ಜಿ.ಪಾಟ್ಕರ್, ಕಾಫಿ ಬೋರ್ಡ್ ಸದಸ್ಯ ತಳೂರು ಕಿಶೋರ್ ಕುಮಾರ್, ಪಕ್ಷದ ಪ್ರಮುಖರಾದ ರವಿ ಬಸಪ್ಪ, ಬಿ.ಕೆ.ಅರುಣ್ ಕುಮಾರ್, ಅನಿತಾ ಪೂವಯ್ಯ, ಉಮೇಶ್ ಸುಬ್ರಮಣಿ, ನಗೇಶ್ ಕುಂದಲ್ಪಾಡಿ, ಡೀನ್ ಬೋಪಣ್ಣ, ಬೊಳ್ಳಜ್ಜಿರ ಅಯ್ಯಪ್ಪ, ಉಮಾ ಪ್ರಭು, ಕನ್ನಿಕೆ, ಶ್ವೇತ ಪ್ರಶಾಂತ್ ಮತ್ತಿತರರಿದ್ದರು.



ಮಡಿಕೇರಿ ಜಿಲ್ಲಾಡಳಿತ ಕಟ್ಟಡದಲ್ಲಿ ಸಂಸದರ ನೂತನ ಕಚೇರಿಯನ್ನು ಯದುವೀರ್ ಉದ್ಘಾಟಿಸಿದರು.

ಪ್ರೋತ್ಸಾಹಿಸುವ ಮನಸ್ಥಿತಿ ಮೈಗೂಡಿಸಿಕೊಳ್ಳಬೇಕು: ಪೊನ್ನಣ್ಣ



ಫಿಟ್ನೆಸ್ ಮಂತ್ರ ಜಿಮ್ ಕೇಂದ್ರದ ವತಿಯಿಂದ ಶಾಸಕ ಎ.ಎಸ್.ಪೊನ್ನಣ್ಣ ಅವರನ್ನು ಸನ್ಮಾನಿಸಲಾಯಿತು.

ಗೋಣಿಕೊಪ್ಪ, ಡಿ.8–ಫಿಟ್ನೆಸ್ ಮಂತ್ರ ಜಿಮ್ ಕೇಂದ್ರದ ವತಿಯಿಂದ ಶಾಸಕ ಎ.ಎಸ್. ಪೊನ್ನಣ್ಣ ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ಶಾಸಕ ಪೊನ್ನಣ್ಣ ಮಾತನಾಡಿ, ಕೊಡಗು ಕ್ರೀಡೆಗಳ ತವರೂರು. ಹಾಗಾಗಿ ಎಲ್ಲಾ ಕ್ರೀಡೆಗಳಿಗೂ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಸರ್ಕಾರ ಸಹಕಾರ ನೀಡಲಿದೆ. ಈ ನಿಟ್ಟಿನಲ್ಲಿ ಎಲ್ಲರೂ ಕ್ರೀಡೆಗೆ ಹೆಚ್ಚು ಪ್ರೋತ್ಸಾಹ ನೀಡಿ ಉಳಿಸಿ ಬೆಳೆಸುವ ಮನಸ್ಥಿತಿಯನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಫಿಟ್ನೆಸ್ ಮಂತ್ರ ಕೇಂದ್ರದ ವ್ಯವಸ್ಥಾಪಕ ರಫೀಕ್, ಕೋಣಿಯಂಡ ಕಾವ್ಯ, ಕೋಣಿಯಂಡ ಸಂಜು ಸೋಮಯ್ಯ ಆರ್.ಉಮೇಶ್, ಮಹೇಶ್, ಮುಕ್ತರ್, ಕೋಣಿಯಂಡ ಧ್ಯಾನ್ ಪೆಮ್ಮಯ್ಯ, ಅಮನ್ ಚಿಣ್ಣಪ್ಪ, ಆರ್ಯನ್ ಸೋಮಯ್ಯ, ಧನುಷ್, ಸವಿತಾ, ಲತಾ, ರಶ್ಮಿತಾ, ಪೊನ್ನಂಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮೀದೇರಿರ ನವೀನ್, ಪ್ರಮುಖರಾದ ಮಂಜು, ಭವಿನ್ ಕುಶಾಲಪ್ಪ, ಪ್ರತೀಕ್ ಪೊನ್ನಣ್ಣ ಇದ್ದರು.

ಸ್ಮಶಾನದಲ್ಲಿ ಪರಿವರ್ತನಾ ದಿನಾಚರಣೆ



ಮಾದ್ರೆ ಗ್ರಾಮದ ಸ್ಮಶಾನದಲ್ಲಿ ಮೌಢ್ಯ ಮುಕ್ತ ಸಮಾಜಕ್ಕಾಗಿ ಪರಿವರ್ತನಾ ದಿನ ಆಚರಿಸಲಾಯಿತು.

ಮಡಿಕೇರಿ: ಡಾ.ಬಿ.ಆರ್.ಅಂಬೇಡ್ಕರ್ ಪರಿನಿರ್ವಾಣ ಅಂಗವಾಗಿ ಮಾನವ ಬಂಧುತ್ವ ವೇದಿಕೆ ಕೊಡಗು ಜಿಲ್ಲಾ ಶಾಖೆ ವತಿಯಿಂದ ಶನಿವಾರಸಂತೆಯ ಮಾದ್ರೆ ಗ್ರಾಮದ ಸಾರ್ವಜನಿಕ ಸ್ಮಶಾನದಲ್ಲಿ ಮೌಢ್ಯ ಮುಕ್ತ ಸಮಾಜಕ್ಕಾಗಿ ಪರಿವರ್ತನಾ ದಿನ ಆಚರಿಸಲಾಯಿತು.

ಸ್ಮಶಾನದಲ್ಲೇ ಅಡುಗೆ ಮಾಡಿ, ಊಟ ಮಾಡುವ ಮೂಲಕ ಮೂಢನಂಬಿಕೆಯಿಂದ ಎಲ್ಲರೂ ಹೊರ ಬರಬೇಕೆಂದು ಕರೆ ನೀಡಲಾಯಿತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಜೆ.ಎಲ್.ಜನಾರ್ಧನ್, ವೇದಿಕೆ ವತಿಯಿಂದ ಕರ್ನಾಟಕದಲ್ಲಿ ವೈಚಾರಿಕ ಕ್ರಾಂತಿಯನ್ನು ಎಲ್ಲರಲ್ಲಿ ಮೂಡಿಸಲಾಗುತ್ತಿದೆ. ಅಜ್ಞಾನದಿಂದ ವಿಜ್ಞಾನದ ಕಡೆಗೆ ಹಾಗೂ ಮೂಢನಂಬಿಕೆ, ಕಂದಾಚಾರಗಳನ್ನು ಹೋಗಲಾಡಿಸುವ ಸಲುವಾಗಿ ರಾಜ್ಯಾದ್ಯಂತ ಕಾರ್ಯಕ್ರಮ ನಡೆಯುತ್ತಿದೆ ಎಂದರು.

ಸಚಿವ ಸತೀಶ್ ಜಾರಕಿಹೊಳಿ ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ವೈಚಾರಿಕ ಕ್ರಾಂತಿಯನ್ನೇ ಮಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ ಕೊಡಗು ಮಾನವ ಬಂಧುತ್ವ ವೇದಿಕೆಯಿಂದಲೂ ಮಾದ್ರೆ ಗ್ರಾಮದ ಸ್ಮಶಾನ ಜಾಗದಲ್ಲಿ ಅಡುಗೆ ಮಾಡಿ, ಊಟ ಮಾಡುವ ಮೂಲಕ ಮೌಢ್ಯಾಚರಣೆಯಿಂದ ಎಲ್ಲರೂ ಹೊರ ಬರಬೇಕೆಂದು ಕರೆ ನೀಡುತ್ತಿರುವುದಾಗಿ ತಿಳಿಸಿದರು. ವೇದಿಕೆ ತಾಲೂಕು ಸಂಚಾಲಕ ಎಂ.ಎಸ್.ವೀರೇಂದ್ರ, ಗ್ರಾಮದ ಅಂಬೇಡ್ಕರ್ ಯುವಕ ಸಂಘದ ಅಧ್ಯಕ್ಷ ಎಂ.ಕೆ.ಮಂಜುನಾಥ, ಸದಸ್ಯರಾದ ಪಿ.ಎಂ.ವಿಶ್ವ, ಅರುಣ್ ಕುಮಾರ್, ಡೀಲಾಕ್ಷ, ಗುರುಪ್ರಸಾದ್ ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

ಗೋಮಾಂಸ ಮಾರಾಟ ಇಬ್ಬರ ಬಂಧನ

ಗೋಣಿಕೊಪ್ಪ, ಡಿ.8– ಪೊನ್ನಂಪೇಟೆಯ ಗಣಪತಿ ನಗರದಲ್ಲಿ ಗೋಮಾಂಸ ಮಾರುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ವಿರಾಜಪೇಟೆಯ ಮೊಗರಹಳ್ಳಿಯ ರಹನ್(20) ಹಾಗೂ ಹಜ್ಮತ್(50) ಬಂಧಿತರು.

ಈ ಇಬ್ಬರು ಪ್ರಗತಿ ನಗರದಲ್ಲಿ ಕಾರು ಹಾಗೂ ಬೈಕ್‌ನಲ್ಲಿ 75 ಕೆಜಿಯಷ್ಟು ಗೋಮಾಂಸವನ್ನು ಸಾಗಿಸಿ, ಮಾರಾಟಕ್ಕೆ ಯತ್ನಿಸುತ್ತಿದ್ದರು. ಈ ವೇಳೆ ಸಾರ್ವಜನಿಕರು ಅವರನ್ನು ಹಿಡಿದು ಪೊನ್ನಂಪೇಟೆ ಪೊಲೀಸರಿಗೆ ಒಪ್ಪಿಸಿದ್ದಾರೆ.

ಕಾರು, ಬೈಕ್ ಹಾಗೂ ಮಾಂಸ ವಶಪಡಿಸಿಕೊಂಡಿರುವ ಪೊನ್ನಂಪೇಟೆ ಠಾಣೆ ಪೊಲೀಸರು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಇಂದು ಬೆಳೆ ಕ್ಷೇತ್ರೋತ್ಸವ

ಮಡಿಕೇರಿ: ಶಿವಮೊಗ್ಗ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನ ವಿಶ್ವವಿದ್ಯಾಲಯ, ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯ, ವಿಸ್ತರಣಾ ಶಿಕ್ಷಣ ಘಟಕ, ಕೃಷಿ, ತೋಟಗಾರಿಕೆ, ಅರಣ್ಯ, ಪಶುಸಂಗೋಪನೆ, ಮೀನುಗಾರಿಕೆ ಇಲಾಖೆ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಭತ್ತದ ಬೆಳೆ ಕ್ಷೇತ್ರೋತ್ಸವ ಹಾಗೂ ವಿಶ್ವ ಮಣ್ಣು ದಿನಾಚರಣೆ ಡಿ.9ರಂದು ಬೆಳಗ್ಗೆ 10.30ಕ್ಕೆ ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ಆವರಣದಲ್ಲಿ ನಡೆಯಲಿದೆ.

ಪ್ಯಾರಾ ಪಂಜ ಕುಸ್ತಿಪಟು ಹಸ್ಸನ್‌ಗೆ ಸನ್ಮಾನ

ಸಿದ್ದಾಪುರ, ಡಿ.8–ಇತ್ತೀಚೆಗೆ ಮುಂಬೈಯಲ್ಲಿ ನಡೆದ ಏಷಿಯನ್ ಪ್ಯಾರಾ ಪಂಜ ಕುಸ್ತಿ ಪಂದ್ಯಾವಳಿಯಲ್ಲಿ ಏಷ್ಯಾಕ್ಕೆ ಮೂರನೇ ಸ್ಥಾನ ಪಡೆದ ಅರೆಕಾಡು ಗ್ರಾಮದ ವಿಶೇಷಚೇತನ ಕೆ.ಎಂ.ಹಸ್ಸನ್ ಅವರನ್ನು ನೆಲ್ಯಹುದಿಕೇರಿ ಪೈಸಾರಿ ಪ್ರೀಮಿಯರ್ ಲೀಗ್ ಕ್ರೀಡಾಕೂಟದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.



ಪ್ಯಾರಾ ಪಂಜ ಕುಸ್ತಿಪಟು ಹಸ್ಸನ್ ಅವರನ್ನು ಸನ್ಮಾನಿಸಲಾಯಿತು.

ಡಿಜಿಟಲೀಕರಣ ಪ್ರಕ್ರಿಯೆಯಲ್ಲಿ ಚಾಮರಾಜನಗರ ಜಿಲ್ಲೆ ಉತ್ತಮ

• ಕಂದಾಯ ಸಚಿವ ಕೃಷ್ಣ ಭೈರೇಗೌಡ ಮೆಚ್ಚುಗೆ • ಕಂದಾಯ ಗ್ರಾಮಗಳ ಹಕ್ಕುಪತ್ರ ವಿತರಣೆ

ಗುಂಡ್ಲುಪೇಟೆ, ಡಿ.8–ನೂತನ ತಂತ್ರಜ್ಞಾನದಡಿ ಸಾಗುವಳಿ ಚೀಟಿ, ಪಹಣಿ, ಪೋಡಿ ದಾಖಲೆ ಡಿಜಿಟಲೀಕರಣಗೊಳಿಸಿ ರೈತರಿಗೆ ವಿತರಿಸುವ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಅನುಷ್ಠಾನದಲ್ಲಿ ಚಾಮರಾಜನಗರ ಜಿಲ್ಲೆ ಉತ್ತಮ ಹೆಜ್ಜೆ ಇಟ್ಟಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ಭಾನುವಾರ ಜಿಲ್ಲಾಡಳಿತದ ವತಿಯಿಂದ ಹಮ್ಮಿಕೊಂಡಿದ್ದ ಬಗರ್‌ಹುಕುಂ ಸಾಗುವಳಿ ಚೀಟಿ, ಪಹಣಿ, ಪೋಡಿ ದಾಖಲೆ ಹಾಗೂ ಕಂದಾಯ ಗ್ರಾಮಗಳ ಹಕ್ಕುಪತ್ರ ವಿತರಣಾ ಕಾರ್ಯಕ್ರಮದಲ್ಲಿ ಈಗಾಗಲೇ ಡಿಜಿಟಲೀಕರಣಗೊಳಿಸಿರುವ ಸಾಗುವಳಿ ಚೀಟಿ ಹಾಗೂ ಇತರೆ ದಾಖಲೆಗಳನ್ನು ರೈತರಿಗೆ ವಿತರಿಸಿ ಅವರು ಮಾತನಾಡಿದರು.

ಉಳುವವನೇ ಭೂಮಿ ಒಡೆಯ, ಭೂ ಸುಧಾರಣೆ ಯೋಜನೆ ಸೇರಿದಂತೆ ಹಲವು ವಿಷಯಗಳಡಿ 30–40 ವರ್ಷಗಳ ಹಿಂದೆ ಹಲವರಿಗೆ ಭೂಮಿ ಮಂಜೂರಾಗಿದೆ. ಇಂತಹ ಜಮೀನುಗಳು ಇದುವರೆಗೂ ದುರಸ್ತಿಯಾಗಿಲ್ಲ. ರೈತರು ಸಾಗುವಳಿ ಮಾಡುತ್ತಿದ್ದರೂ ಜಮೀನು ಸರ್ಕಾರಿ ಹೆಸರಿನಲ್ಲಿರುತ್ತದೆ. ಜಮೀನಿನ ಮೇಲೆ ಸಂಪೂರ್ಣ ಹಕ್ಕು, ಮಾಲೀಕತ್ವ ರೈತರಿಗೆ ಇಲ್ಲವಾಗಿದೆ. ಜಮೀನು ದುರಸ್ತಿಯಾಗದಿದ್ದರೆ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಲ್ಲಿ ಕಾನೂನುಬದ್ಧವಾಗಿ ದಾಖಲೆಗಳ ಡಿಜಿಟಲೀಕರಣ ಮಾಡಲಾಗುತ್ತಿದೆ ಎಂದು ತಿಳಿಸಿದರು.



ಗುಂಡ್ಲುಪೇಟೆ ಶಿಕ್ಷಕರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವ ಕೃಷ್ಣಬೈರೇಗೌಡ ಡಿಜಿಟಲೀಕರಣ ದಾಖಲೆಗಳನ್ನು ರೈತರಿಗೆ ವಿತರಿಸಿದರು.

> ಜಿಲ್ಲೆಯಲ್ಲಿ 6,60,696 ಭೂ ಮಾಲೀಕರಿದ್ದು, 4,11,580 ಆರ್‌ಟಿಸಿಗಳಿವೆ. 5,75,745 ಆರ್‌ಟಿಸಿಗಳು ಆಧಾರ್ ಸೀಡಿಂಗ್ ಆಗಿದ್ದು, ಶೇ.82.81ರಷ್ಟು ಪ್ರಗತಿ ಸಾಧಿಸಲಾಗಿದೆ. 4 ಬಗರ್‌ಹುಕುಂ ಸಮಿತಿ ರಚನೆಯಾಗಿವೆ. 3239 ದರಖಾಸ್ತು ಭೂಮಿ ಪೋಡಿಯಾಗಿದ್ದು, ಮೂರು ತಿಂಗಳೊಳಗೆ ಸಾಗುವಳಿ ಪತ್ರ ವಿತರಿಸಲಾಗುವುದು. ಭೂ ಸುರಕ್ಷಾ ಯೋಜನೆಯಡಿ ಎಲ್ಲಾ ದಾಖಲಾತಿ ಡಿಜಿಟಲೀಕರಣಗೊಂಡಿದ್ದು, ಯಳಂದೂರು ತಾಲೂಕನ್ನು ಪೈಲಟ್ ಯೋಜನೆಯಾಗಿ ತೆಗೆದುಕೊಳ್ಳಲಾಗಿದೆ. ಕಂದಾಯ ಇಲಾಖೆಯ ಎಲ್ಲಾ ಇ–ಆಫೀಸ್ ಪ್ರಕ್ರಿಯೆಯಲ್ಲಿ ಜಿಲ್ಲೆ ಮುಂಚೂಣಿಯಲ್ಲಿದೆ.
>
> –ಶಿಲ್ಪನಾಗ್, ಜಿಲ್ಲಾಧಿಕಾರಿ

ದುರಸ್ತಿ ಸಂಬಂಧ ರೈತರು ಅವಶ್ಯ ದಾಖಲೆಗಳನ್ನು ಒದಗಿಸುವುದು ಸಾಧ್ಯವಾಗದಿರಬಹುದು. ಇದನ್ನು ಮನಗಂಡಿರುವ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಸಾಗುವಳಿ ಚೀಟಿ, ಪಹಣಿ, ಪೋಡಿ ದಾಖಲೆ ಹಾಗೂ ಕಂದಾಯ ಗ್ರಾಮಗಳ ಹಕ್ಕುಪತ್ರಗಳನ್ನು ನೂತನ ತಂತ್ರಜ್ಞಾನದಡಿ ಡಿಜಿಟಲೀಕರಣಗೊಳಿಸಿ ರೈತರಿಗೆ ವಿತರಿಸುವ ಮಹತ್ತರ ಕಾರ್ಯವನ್ನು ರಾಜ್ಯಾದ್ಯಂತ ಆರಂಭಿಸಿದೆ. ಎಲ್ಲಾ ಕಾನೂನುಗಳನ್ನು ಸುಲಭೀಕರಣಗೊಳಿಸಿ ಒಂದೇ ಸುತ್ತೋಲೆಯಲ್ಲಿ ಅಳವಡಿಸಲಾಗಿದೆ. ಇಂತಹ ಜನಪರ ಕೆಲಸಗಳಿಂದ ಜನರಿಗೆ ಸರ್ಕಾರದ ಬಗ್ಗೆ ಉತ್ತಮ ಅಭಿಪ್ರಾಯ ಮೂಡಲಿದೆ ಎಂದರು.

ಹಿಂದೆ ಸಾಗುವಳಿ ಮಾಡದಿರುವವರು, ಇತರರು ಬಗರ್‌ಹುಕುಂ ಅಡಿಯಲ್ಲಿ ಜಮೀನು ಸಕ್ರಮಗೊಳಿಸಲು ಅರ್ಜಿ ಸಲ್ಲಿಸಿರುವುದು ಕಂಡುಬಂದಿದೆ ಇದಕ್ಕಾಗಿ ಸರ್ಕಾರ ನೂತನ ತಂತ್ರಜ್ಞಾನವನ್ನು ಸಿದ್ಧಪಡಿಸಿದ್ದು, ಈಗ ಇದಕ್ಕೆಲ್ಲಾ ಅವಕಾಶವಿಲ್ಲದಂತಾಗಿದೆ. ಎಲ್ಲವೂ ಆನ್‌ಲೈನ್‌ನಲ್ಲಿ ನಮೂದಾಗುವುದರಿಂದ ದಾಖಲೆಗಳು ಕಳೆದುಹೋಗುವ ಸಂಭವವಿರದೇ ಶಾಶ್ವತವಾಗಿ ಸಾಕಷ್ಟು ವರ್ಷಗಳವರೆಗೆ ಇರಲಿದೆ. ಅಲ್ಲದೆ ಯಾವುದೇ ನಕಲಿ ದಾಖಲೆ, ಫೋರ್ಜರಿ ಹಾಗೂ ತಿದ್ದುಪಡಿಗೆ ಅವಕಾಶವಿಲ್ಲದಂತಾಗಿದೆ. ಇದರಿಂದ ರೈತರು ನೆಮ್ಮದಿ ಜೀವನ ನಡೆಸುವಂತಾಗಲಿದೆ ಎಂದರು.

1 ಲಕ್ಷದ 58 ಸಾವಿರ ಅರ್ಜಿ

ಪ್ರಸ್ತುತ ಬಗರ್‌ಹುಕುಂ ಅಡಿ ಜಮೀನು ಸಕ್ರಮಗೊಳಿಸಲು ರಾಜ್ಯಾದ್ಯಂತ 1 ಲಕ್ಷದ 58 ಸಾವಿರ ಅರ್ಜಿಗಳು ಬಂದಿವೆ. ಸಕ್ರಮೀಕರಣಗೊಳಿಸಲು ಯಾರು ಅರ್ಜಿ ಹಾಕಿದ್ದಾರೋ ಅವರಿಗೆ ಅವಶ್ಯ ದಾಖಲೆಗಳನ್ನು ಪಡೆದು ಪರಿಶೀಲಿಸಿ ಅರ್ಹರಿಗೆ ನಿಯಮಾನುಸಾರ ಮಂಜೂರು ಮಾಡಲಾಗುವುದು ಎಂದು ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಕೆಲವೆಡೆ ಗ್ರಾಮ, ತಾಂಡಾ, ಕ್ಯಾಂಪ್‌ಗಳಿದ್ದು, 50–100 ವರ್ಷಗಳಿಂದ ಕಂದಾಯ ಗ್ರಾಮಗಳಾಗಿ ಘೋಷಣೆಯಾಗಿಲ್ಲ. ಇದರಿಂದ ಜನವಸತಿ ಸೌಲಭ್ಯ ಒದಗಿಸಲು ತೊಂದರೆಯಾಗುತ್ತಿದೆ. ಇದನ್ನು ಪರಿಹರಿಸಲು ಸರ್ಕಾರ ಮುಂದಾಗಿದ್ದು, ಜಮೀನಿನ ನಕ್ಷೆ, ಆಕಾರ್ ಬಂದ್, ಹೊಸ ಸರ್ವೇ ನಂಬರ್ ಹಾಗೂ ಪ್ರತ್ಯೇಕ ಆರ್‌ಟಿಸಿಯೊಂದಿಗೆ ಸಾಗುವಳಿ ಚೀಟಿಯನ್ನು ಸರ್ಕಾರದಿಂದಲೇ ನೋಂದಣಿ ಮಾಡಿಸಿ, ಡಿಜಿಟಲೀಕರಣಗೊಳಿಸಿ ರೈತರಿಗೆ ವಿತರಿಸಲಾಗುತ್ತಿದೆ ಎಂದರು.

ಚಾಮರಾಜನಗರ ಜಿಲ್ಲೆಯಲ್ಲಿ 68 ವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಗುರುತಿಸಲಾಗಿದ್ದು, ಡಿಜಿಟಲೀಕರಣಗೊಂಡಿರುವ ಕಂದಾಯ ಗ್ರಾಮಗಳ 10 ಹಕ್ಕುಪತ್ರಗಳನ್ನು ಸಾಂಕೇತಿಕವಾಗಿ ವಿತರಿಸಲಾಗುತ್ತಿದೆ. ಮುಂದಿನ 4 ತಿಂಗಳೊಳಗೆ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಿ ಅರ್ಹ ಎಲ್ಲಾ ರೈತರಿಗೆ ಸಾಗುವಳಿ ಚೀಟಿ ವಿತರಿಸುವ ಕಾರ್ಯ ಪೂರ್ಣಗೊಳಿಸುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಲಾಗಿದೆ. ಡಿಜಿಟಲೀಕರಣ ಪ್ರಕ್ರಿಯೆ ಯಶಸ್ವಿಗೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ಜಿಲ್ಲಾಧಿಕಾರಿ ಶಿಲ್ಪನಾಗ್ ಹಾಗೂ ತಹಸೀಲ್ದಾರ್ ರಮೇಶ್ ಬಾಬು ಅವರ ಸತತ ಪರಿಶ್ರಮದಿಂದ ಸಾಗುವಳಿ, ಪಹಣಿ, ಪೋಡಿ ದಾಖಲೆಗಳ ವಿತರಣೆ ಗುಂಡ್ಲುಪೇಟೆಯಲ್ಲಿ ಸಾಧ್ಯವಾಗಿದೆ ಎಂದು ತಿಳಿಸಿದರು.

ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್ ಪ್ರಸಾದ್ ಮಾತನಾಡಿದರು. ಪುರಸಭಾ ಅಧ್ಯಕ್ಷ ಜಿ.ಎಸ್.ಕಿರಣ್, ಉಪಾಧ್ಯಕ್ಷ ಹೀನಾ ಕೌಸರ್, ಉಪವಿಭಾಗಾಧಿಕಾರಿ ಬಿ.ಆರ್.ಮಹೇಶ್, ಎಲ್ಲಾ ತಾಲೂಕು ತಹಸೀಲ್ದಾರ್‌ಗಳು, ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣ ರಾಜಶೇಖರಮೂರ್ತಿ ಕನಸಾಗಿತ್ತು



ಮರಿಯಾಲದಲ್ಲಿ ಎಂ.ರಾಜಶೇಖರಮೂರ್ತಿ ಅವರ ಪುಣ್ಯಸ್ಮರಣೆ ಅಂಗವಾಗಿ ಅವರ ಸ್ಮಾರಕಕ್ಕೆ ಪುತ್ರಿಯರಾದ ಶೀಲಾ ಹರಹಳಕಟ್ಟಿ, ಸುಮಾ, ಶಶಿ, ಶೋಭಾ ನಮನ ಸಲ್ಲಿಸಿದರು.

ಚಾಮರಾಜನಗರ, ಡಿ.8–ರಾಜ್ಯ ಕಂಡ ಅಪರೂಪದ ರಾಜಕಾರಣಿಯಾಗಿದ್ದ ಕೇಂದ್ರ ಮಾಜಿ ಸಚಿವ ದಿ.ಎಂ.ರಾಜಶೇಖರಮೂರ್ತಿ ಅವರು ಭ್ರಷ್ಟಾಚಾರ ಮುಕ್ತ ಸಮಾಜ ನಿರ್ಮಾಣದ ಕನಸು ಹೊಂದಿ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸುವ ಆಶಯವನ್ನು ಹೊಂದಿದ್ದರು ಎಂದು ರಾಜಶೇಖರಮೂರ್ತಿ ಅವರ ಪುತ್ರಿ ಶೀಲಾ ಹರಹಳಕಟ್ಟಿ ತಿಳಿಸಿದರು.

ಸಮೀಪದ ಮರಿಯಾಲ ಮುರುಘ ರಾಜೇಂದ್ರಸ್ವಾಮಿ ವಿದ್ಯಾಸಂಸ್ಥೆ ಆವರಣದಲ್ಲಿ ಎಂ.ರಾಜಶೇಖರಮೂರ್ತಿ 14ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಅವರ ಸ್ಮಾರಕಕ್ಕೆ ಪುಷ್ಪ ನಮನ ಸಲ್ಲಿಸಿ, ಮಾತನಾಡಿದ ಅವರು, ನಮ್ಮ ತಂದೆ ರಾಜಶೇಖರಮೂರ್ತಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಭ್ರಷ್ಟಾಚಾರ ಹಾಸು ಹೊಕ್ಕಾಗಿರುವುದನ್ನು ನೋಡಿ ತುಂಬಾ ನೊಂದಿದ್ದರು. ಇಂತಹ ಅಹಿತಕರ ಸಮಾಜವನ್ನು ಬದಲಾಯಿಸಿ, ಉತ್ತಮ ಪ್ರಜಾಪ್ರಭುತ್ವಕ್ಕೆ ಭದ್ರ ಬುನಾದಿ ಹಾಕುವ ಕನಸು ಕಂಡಿದ್ದರು. ಅದನ್ನು ಸಾಕಾರಗೊಳಿಸುವ ಯೋಜನೆಯನ್ನು ರೂಪಿಸಿ ಉತ್ತಮ ನಾಗರಿಕ ಸಮಾಜ ನಿರ್ಮಾಣ ಮಾಡಿ, ಪ್ರಜಾಪ್ರಭುತ್ವ ಉಳಿಸುವ ಸಂಕಲ್ಪ ಮಾಡಿದ್ದರು ಎಂದು ಸ್ಮರಿಸಿದರು.

ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಮಾತನಾಡಿದರು. ಕಾರ್ಯಕ್ರಮದಲ್ಲಿ ವಿದ್ಯಾಸಂಸ್ಥೆಯ ವಲಯ, ವಿಭಾಗವಾರು ಮತ್ತು ಹಾಗೂ ರಾಜ್ಯಮಟ್ಟದ ಕ್ರೀಡಾ ಸ್ಪರ್ಧೆಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಹಾಗೂ ಪ್ರಮಾಣ ಪತ್ರ ನೀಡಿ ಅಭಿನಂದಿಸಲಾಯಿತು. ದಿ. ರಾಜಶೇಖರಮೂರ್ತಿ ಅವರ ಪುತ್ರಿಯರಾದ ಸುಮಾ, ಶಶಿ, ಶೋಭಾ ಹಾಗೂ ತಡಿಮಾಲಂಗಿ ಮತ್ತು ಮರಿಯಾಲ ಗ್ರಾಮಸ್ಥರು, ವಿದ್ಯಾಸಂಸ್ಥೆ ಅಧ್ಯಕ್ಷರು, ಸದಸ್ಯರು, ನೌಕರರು, ವಿದ್ಯಾರ್ಥಿಗಳು, ಅಭಿಮಾನಿಗಳು ಉಪಸ್ಥಿತರಿದ್ದರು.

ಪ್ರತಿ ಜಿಲ್ಲೆಯಲ್ಲೂ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

ಯಳಂದೂರು: ಪ್ರತಿಯೊಬ್ಬರಿಗೂ ಗುಣಮಟ್ಟದ ಆರೋಗ್ಯ ಸೇವೆ ದೊರಕಿಸುವುದೇ ಸರ್ಕಾರದ ಪ್ರಮುಖ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಉತ್ತಮ ಆರೋಗ್ಯ ಸೌಲಭ್ಯ ಒದಗಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ತಾಲೂಕು ಸಾರ್ವಜನಿಕ ಆಸ್ಪತ್ರೆಯ 100 ಹಾಸಿಗೆಗಳ ಕಟ್ಟಡದ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ನೂತನ ಕಟ್ಟಡ ಶಿಲಾನ್ಯಾಸ ನೆರವೇರಿಸಿ ಮಾತನಾಡಿದ ಅವರು, ಪ್ರತಿ ತಾಲೂಕಿನಲ್ಲೂ ಜನರಿಗೆ ಉತ್ತಮ ಆರೋಗ್ಯ ಸೇವೆ ಲಭಿಸಬೇಕು. ಡಯಾಲಿಸಿಸ್ ಘಟಕಗಳು ಇರಬೇಕು. ಪ್ರತಿ ಜಿಲ್ಲೆಯಲ್ಲೂ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಇರಬೇಕು. ಈ ನಿಟ್ಟಿನಲ್ಲಿ ಸರ್ಕಾರ ಗಂಭೀರ ಚಿಂತನೆ ನಡೆಸುತ್ತಿದೆ ಎಂದು ಹೇಳಿದರು.

ಪಟ್ಟಣದಲ್ಲಿ ಶಂಕುಸ್ಥಾಪನೆ ನೆರವೇರಿಸಿರುವ 100 ಹಾಸಿಗೆ ಆಸ್ಪತ್ರೆ ನಿರ್ಮಾಣಕ್ಕೆ 35 ಕೋಟಿ ರೂ. ನೀಡಲಾಗಿದೆ. ನಿಗದಿತ ಅವಧಿಯೊಳಗೆ ಗುಣಮಟ್ಟದ ಕಾಮಗಾರಿ ಪೂರ್ಣವಾಗಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಸ್ನೇಹದಿಂದ ರೋಗಿಗಳನ್ನು ಕಾಣಬೇಕು. ವೈದ್ಯರು ರೋಗಿಗಳೊಂದಿಗೆ ಚೆನ್ನಾಗಿ ಮಾತನಾಡಿದರೆ ಅರ್ಧರೋಗ ವಾಸಿಯಾಗಲಿದೆ. ವೈದ್ಯರು ಗ್ರಾಮೀಣ ಭಾಗ ಹಾಗೂ ಬಡಜನರೊಂದಿಗೆ ಆಪ್ತವಾಗಿ ಮಾತನಾಡಿ ಚಿಕಿತ್ಸಾ ಸೇವೆ ನೀಡಿದರೆ ಮಾತ್ರ ಆಸ್ಪತ್ರೆಗಳ ನಿರ್ಮಾಣಕ್ಕೂ ಸಾರ್ಥಕತೆ ಸಿಗಲಿದೆ ಎಂದರು.

ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಚಾಮರಾಜನಗರ ಜಿಲ್ಲೆಯಲ್ಲಿ 2.5 ಲಕ್ಷ ಕುಟುಂಬಗಳಿಗೆ ತಲುಪುತ್ತಿವೆ. ಪ್ರತಿ ಕುಟುಂಬಕ್ಕೆ 4 ರಿಂದ 5 ಸಾವಿರ ರೂ. ಯೋಜನೆಗಳಿಂದ ಸಿಗುತ್ತಿದೆ. ಬಡ ಕುಟುಂಬಗಳಿಗೆ ಕನಿಷ್ಠ ಆದಾಯ ಬರುವಂತಾಗಿದೆ. ನಾವು ಜನರಿಗೆ ಏನು ಹೇಳಿದ್ದೇವೆಯೋ ಅದನ್ನೇ ಮಾಡಿದ್ದೇವೆ, ಮಾಡಿರುವ ಕೆಲಸವನ್ನು ಜನರಿಗೆ ಹೇಳಿದ್ದೇವೆ ಎಂದು ತಿಳಿಸಿದರು.



ಯಳಂದೂರಿನಲ್ಲಿ ತಾಲೂಕು ಸಾರ್ವಜನಿಕ ಆಸ್ಪತ್ರೆ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೇರವೇರಿಸಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಈ ಭಾಗದ ಜನರ ಆರೋಗ್ಯ ಭಾಗ್ಯಕ್ಕಾಗಿ ಮುಖ್ಯಮಂತ್ರಿ ಆಯವ್ಯಯದಲ್ಲಿ ತಾಲೂಕು ಆಸ್ಪತ್ರೆ ನಿರ್ಮಾಣಕ್ಕೆ ಅನುದಾನ ಒದಗಿಸಿದ್ದಾರೆ. ಇದರಿಂದ ಜನರಿಗೆ ಅನುಕೂಲವಾಗಲಿದೆ. ಕಾಡಂಚಿನ ಜನರಿಗೆ ನಮ್ಮ ತಂದೆ ಬಿ.ರಾಚಯ್ಯ ಸಚಿವರಾಗಿದ್ದ ಅವಧಿಯಲ್ಲಿ ಸಾಗುವಳಿಗೆ ಭೂಮಿ ಕೊಟ್ಟಿದ್ದರು. ಇವರಿಗೆ ಕಾನೂನು ಬದ್ಧವಾಗಿ ಸರ್ಕಾರದಿಂದ ನೆರವು ಬೇಕಿದೆ. ತಾಲೂಕಿನ 33 ಕೆರೆಗಳನ್ನು ಅಭಿವೃದ್ಧಿಗೊಳಿಸಿ ರೈತರು, ಜನರಿಗೆ ಪ್ರಯೋಜನ ದೊರಕಿಸಿ ಕೊಡಬೇಕಿದೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎಂ.ಆರ್.ಮಂಜುನಾಥ್ ಹೆಚ್.ಎಂ. ಗಣೇಶ್ ಪ್ರಸಾದ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನ, ಜಿಲ್ಲಾಧಿಕಾರಿ ಶಿಲ್ಪನಾಗ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಕೆ.ಬಿ.ಶಿವಕುಮಾರ್, ಜಿಪಂ ಸಿಇಓ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಲಕ್ಷ್ಮಿ ಮಲ್ಲು, ಉಪಾಧ್ಯಕ್ಷೆ ಶಾಂತಮ್ಮ ನಿಂಗರಾಜು, ಸದಸ್ಯರಾದ ಮಹೇಶ್, ಇತರರು ಉಪಸ್ಥಿತರಿದ್ದರು.

ಆರ್.ಧ್ರುವನಾರಾಯಣ್ ಮೆಮೋರಿಯಲ್ ಕಪ್ ರಾಜ್ಯ ಮಟ್ಟದ ಫುಟ್‌ಬಾಲ್ ಪಂದ್ಯಾವಳಿ

ನೆಲಮಂಗಲ ಚಾಂಪಿಯನ್, ಫ್ರೆಂಡ್ಸ್ ಆಫ್ ಬೆಂಗಳೂರು ರನ್ನರ್ ಅಪ್

● ಮೈಸೂರು ತಂಡದ ಕಾಶಿ ಬೆಸ್ಟ್ ಗೋಲ್ ಕೀಪರ್ ● ಬೆಂಗಳೂರು ತಂಡದ ಪಾಂಡೀಯನ್ ಉತ್ತಮ ಆಟಗಾರ




ನಂಜನಗೂಡಿನಲ್ಲಿ ನಡೆದ ರಾಜ್ಯಮಟ್ಟದ ಫುಟ್‌ಬಾಲ್ ಪಂದ್ಯಾವಳಿಯಲ್ಲಿ ನೆಲಮಂಗಲ ಫುಟ್ಬಾಲ್ ತಂಡ ಪ್ರಥಮ, ಫ್ರೆಂಡ್ಸ್ ಆಫ್ ಬೆಂಗಳೂರು ಫುಟ್ಬಾಲ್ ತಂಡ ದ್ವಿತೀಯ ಬಹುಮಾನ ಪಡೆಯಿತು.

ನಂಜನಗೂಡು, ಡಿ.8– ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ಧ್ರುವನಾರಾಯಣ್ ಅಭಿಮಾನಿ ಬಳಗ ಆಯೋಜಿಸಿದ್ದ ಆರ್.ಧ್ರುವನಾರಾಯಣ್ ಮೆಮೋರಿಯಲ್ ಕಪ್ ರಾಜ್ಯ ಮಟ್ಟದ ಫುಟ್‌ಬಾಲ್ ಪಂದ್ಯಾವಳಿಯ ಫೈನಲ್‌ನಲ್ಲಿ ಬೆಂಗಳೂರಿನ ನೆಲಮಂಗಲ ಫುಟ್‌ಬಾಲ್ ತಂಡ ಜಯಗಳಿಸುವ ಮೂಲಕ ಚಾಂಪಿಯನ್ ಆಗಿ ಹೊರ ಹೊಮ್ಮಿತು. ಮತ್ತೊಂದೆಡೆ ಫ್ರೆಂಡ್ಸ್ ಆಫ್ ಬೆಂಗಳೂರು ತಂಡ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಕಳೆದ 3 ದಿನಗಳಿಂದ ನಡೆದ ಪಂದ್ಯಾವಳಿಯಲ್ಲಿ 16 ತಂಡಗಳು ಭಾಗವಹಿಸಿದ್ದವು. ಭಾನುವಾರ ನಡೆದ ರೋಚಕ ಫೈನಲ್ ಪಂದ್ಯದಲ್ಲಿ ಫ್ರೆಂಡ್ಸ್ ಆಫ್ ಬೆಂಗಳೂರು ತಂಡದ ವಿರುದ್ಧ ನೆಲಮಂಗಲ ಫುಟ್‌ಬಾಲ್ ತಂಡ 2–1 ಗೋಲುಗಳ ಅಂತರದಲ್ಲಿ ಜಯಗಳಿಸಿತು. ಆ ಮೂಲಕ ಪ್ರಥಮ ಬಹುಮಾನ 1 ಲಕ್ಷ ರೂ. ಮತ್ತು ಆಕರ್ಷಕ ಟ್ರೋಫಿ ತನ್ನದಾಗಿಸಿಕೊಂಡರೇ, ಫ್ರೆಂಡ್ಸ್ ಕ್ಲಬ್ ಬೆಂಗಳೂರು ದ್ವಿತೀಯ ಬಹುಮಾನ 50 ಸಾವಿರ ರೂ. ಮತ್ತು ಟ್ರೋಫಿ, ಮೈಸೂರಿನ ವಿಜಯನಗರ ಫುಟ್‌ಬಾಲ್ ತಂಡ ತೃತೀಯ ಬಹುಮಾನ 25 ಸಾವಿರ ಮತ್ತು ಟ್ರೋಫಿಯನ್ನು ತನ್ನದಾಗಿಸಿಕೊಂಡಿತು. ಉಳಿದಂತೆ ಬೆಸ್ಟ್ ಗೋಲ್ ಕೀಪರ್ ಮೈಸೂರು ತಂಡದ ಕಾಶಿ, ಬೆಂಗಳೂರು ತಂಡದ ಪಾಂಡೀಯನ್ ಉತ್ತಮ ಆಟಗಾರ ಪ್ರಶಸ್ತಿ ಪಡೆದರು.

ವಿಜೇತ ತಂಡಗಳಿಗೆ ಪ್ರಶಸ್ತಿ ವಿತರಿಸಿ ಮಾತನಾಡಿದ ಶಾಸಕ ದರ್ಶನ್, ನಂಜನಗೂಡಿಗೂ ಫುಟ್‌ಬಾಲ್ ಆಟಕ್ಕೂ ತನ್ನದೇ ಆದ ಇತಿಹಾಸವಿದೆ. ಕಾಲ್ಚೆಂಡಿನ ಆಟದ ಗತವೈಭವ ಮರುಕಳಿಸುವ ಸಂಕಲ್ಪದೊಂದಿಗೆ ಹಾಗೂ ಕ್ರೀಡಾಪ್ರೇಮಿಯಾಗಿದ್ದ ನನ್ನ ತಂದೆ ಆರ್.ಧ್ರುವನಾರಾಯಣ್ ಅವರ ಸ್ಮರಣಾರ್ಥ ಅವರಿಗೆ ಗೌರವ ಸಲ್ಲಿಸುವ ಹಿನ್ನೆಲೆಯಲ್ಲಿ ಫುಟ್‌ಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ ಮುಂಬರುವ ದಿನಗಳಲ್ಲಿ ನಂಜನಗೂಡಿನ ಫುಟ್‌ಬಾಲ್ ಇತಿಹಾಸ ರಕ್ಷಿಸಿ ಪುನರುತ್ಥಾನಗೊಳಿಸಲು ಒಂದು ತಂಡ ರೂಪಿಸುವ ಮೂಲಕ ಕ್ರೀಡೆಗೆ ಪ್ರೋತ್ಸಾಹ ನೀಡಲಾಗುವುದು. ಜೊತೆಗೆ ಪ್ರತಿ ತಿಂಗಳು ಒಂದೊಂದು ಕ್ರೀಡೆ ಆಯೋಜನೆ ಮಾಡುವ ಮೂಲಕ ಕ್ರೀಡಾಪಟುಗಳಿಗೆ ಉತ್ತಮ ವೇದಿಕೆ ಕಲ್ಪಿಸಿ ಪ್ರೋತ್ಸಾಹ ನೀಡಲು ಕ್ರಮವಹಿಸುತ್ತೇನೆ ಎಂದರು. ಸಂಸದ ಸುನೀಲ್ ಬೋಸ್ ಮಾತನಾಡಿ, ದಿ.ಆರ್.ಧ್ರುವನಾರಾಯಣ್ ಅವರು ಉತ್ತಮ ಕ್ರೀಡಾಪಟುವಾಗಿದ್ದವರು. ಜೊತೆಗೆ ಈ ಭಾಗದಲ್ಲಿ ನಿರಂತರ ಜನಸೇವೆಯಲ್ಲಿ ತೊಡಗಿಸಿಕೊಂಡು ಸದಾ ಅಭಿವೃದ್ಧಿ ಕೆಲಸಗಳನ್ನು ಮಾಡುವ ಮೂಲಕ ಜನರ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಅವರ ಸ್ಮರಣಾರ್ಥ ಧ್ರುವನಾರಾಯಣ್ ಅಭಿಮಾನಿ ಬಳಗ ಫುಟ್‌ಬಾಲ್ ಪಂದ್ಯಾವಳಿ ಆಯೋಜನೆ ಮಾಡಿ ಅವರಿಗೆ ಗೌರವ ಸಮರ್ಪಣೆ ಮಾಡುವ ಕೆಲಸ ಮಾಡಿರುವುದು ಸಂತಸ ತಂದಿದೆ ಎಂದರು.

ನಂಜನಗೂಡು ಕ್ರೀಡೆಯಲ್ಲಿ ಅತ್ಯುತ್ತಮ ಸಾಧನೆ ಮಾಡುವ ಮೂಲಕ ದೊಡ್ಡ ಇತಿಹಾಸ ನಿರ್ಮಿಸಿತ್ತು. ಆ ಇತಿಹಾಸವನ್ನು ಮರು ಸ್ಥಾಪಿಸುವ ಸಲುವಾಗಿ ಶಾಸಕ ದರ್ಶನ್ ಅವರೊಂದಿಗೆ ಕೈ ಜೋಡಿಸಿ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಕ್ರೀಡೆಗಳಿಗೆ ಉತ್ತೇಜನ ನೀಡಲಾಗುವುದು. ಕ್ರೀಡಾಪಟುಗಳು ಕ್ರೀಡಾ ಸ್ಫೂರ್ತಿಯನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸೋಲು ಗೆಲುವು ಮುಖ್ಯವಾಗ ಬಾರದು ಭಾಗವಹಿಸುವಿಕೆ ಮುಖ್ಯವಾಗಬೇಕು. ಸೋತಾಗ ಹತಾಶರಾಗದೆ ಸೋಲೇ ಗೆಲುವಿನ ಮೆಟ್ಟಿಲು ಎಂದು ಭಾವಿಸಿ ಸಾಧನೆ ಮಾಡಿ ಎಂದು ಕಿವಿಮಾತು ಹೇಳಿದರು.

ಪ್ರಥಮ ಬಹುಮಾನದ ಪ್ರಾಯೋಜಕತ್ವವನ್ನು ಯು.ಎನ್.ಪದ್ಮನಾಭ, ದ್ವಿತೀಯ ಬಹುಮಾನ ಉದ್ಯಮಿ ಕೃಷ್ಣಪ್ಪ, ಪ್ರತಿ ಆಟಗಾರನ ಬಹುಮಾನದ ಪ್ರಾಯೋಜಕತ್ವವನ್ನು ವಿಶ್ವಕರ್ಮ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ನಂದಕುಮಾರ್ ವಹಿಸಿದ್ದರು.

ಈ ವೇಳೆ ಮಾಜಿ ಶಾಸಕ ಕಳಲೆ ಕೇಶವ ಮೂರ್ತಿ, ಯು.ಎನ್.ಪದ್ಮನಾಭರಾವ್, ನಂದಕುಮಾರ್, ಸೋಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ಕೆಪಿಸಿಸಿ ಕಾರ್ಯದರ್ಶಿ ಎಸ್.ಸಿ.ಬಸವರಾಜು, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಕೆ.ಬಿ.ಸ್ವಾಮಿ, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮು, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್, ಮುಖಂಡರಾದ ಕುಳ್ಳಯ್ಯ, ನಾಗ ರಾಜಯ್ಯ, ಶ್ರೀನಿವಾಸಮೂರ್ತಿ, ರವಿಪ್ರಕಾಶ್, ಗಣೇಶ್, ಮಹೇಶ್, ಷಣ್ಮುಗ, ನಗರಸಭಾ ಸದಸ್ಯರಾದ ಗಂಗಾಧರ್, ಪ್ರದೀಪ್, ಗಾಯತ್ರಿ ಸೇರಿದಂತೆ ಹಲವರಿದ್ದರು.

> ನಮ್ಮದು ಕ್ರೀಡಾ ಕುಟುಂಬವಾಗಿದ್ದು, ನನ್ನ ತಂದೆ–ತಾಯಿ ಜೊತೆ ಮಧ್ಯರಾತ್ರಿವರೆಗೆ ಫುಟ್‌ಬಾಲ್ ಆಟ ವೀಕ್ಷಿಸುತ್ತಿದ್ದೆವು. ಆ ನೆನಪುಗಳನ್ನು ನಾನು ಕೊನೆವರೆಗೂ ಮರೆಯಲು ಸಾಧ್ಯವಿಲ್ಲ. ನನ್ನ ತಂದೆ ಫುಟ್‌ಬಾಲ್ ಆಟವಾಡುವಾಗ ನನಗೂ ಸಹ ಆಟ ಆಡುವಂತೆ ಪ್ರೋತ್ಸಾಹ ನೀಡುತ್ತಿದ್ದರು. ನಾನು ಸಹ ಫುಟ್‌ಬಾಲ್ ಆಟಗಾರನಾಗಿ ಈ ಆಟದ ಬಗ್ಗೆ ಸಾಕಷ್ಟು ಆಸಕ್ತಿ ಮತ್ತು ಪ್ರೀತಿ ಹೊಂದಿದ್ದೇನೆ. - **ದರ್ಶನ್, ಶಾಸಕ.**

ಹನಗೋಡಲ್ಲಿ ಟ್ಯೂಷನ್ ಕ್ಲಾಸ್‌ಗೆ ಚಾಲನೆ



ಹನಗೋಡು ಶಾಲೆಯಲ್ಲಿ ಟ್ಯೂಷನ್ ಕ್ಲಾಸ್‌ಗೆ ಚಾಲನೆ ನೀಡಲಾಯಿತು.

ಹನಗೋಡು, ಡಿ.8– ಗ್ರಾಮದ ಪ್ರೌಢಶಾಲೆಯಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜ್ಞಾನ ವಿಕಾಸ ಕಾರ್ಯಕ್ರಮದಡಿ ಎಸ್‌ಎಸ್ ಎಲ್‌ಸಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಟ್ಯೂಷನ್ ಕ್ಲಾಸ್‌ಗೆ ಚಾಲನೆ ನೀಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಹುಣಸೂರು ಯೋಜನಾಧಿಕಾರಿ ನಾರಾಯಣಶೆಟ್ಟಿ, ವಿದ್ಯಾರ್ಥಿಗಳು ತಂದೆ–ತಾಯಿ ಮತ್ತು ಶಿಕ್ಷಕರ ಹೆಸರನ್ನು ಉಳಿಸಿ, ಬೆಳೆಸುವ ಕಾರ್ಯ ಮಾಡಬೇಕು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸುವ ಮೂಲಕ ಶಾಲೆಗೆ ಮತ್ತು ಕುಟುಂಬದ ಆರ್ಥಿಕ ಪರಿಸ್ಥಿತಿ ಎಷ್ಟೇ ಕಷ್ಟವಾಗಿದ್ದರೂ, ನಿಮ್ಮ ಮುಂದಿನ ಭವಿಷ್ಯಕ್ಕೆ ಒತ್ತು ನೀಡುತ್ತಿರುವ ಪೋಷಕರಿಗೆ ಒತ್ತು ನೀಡಬೇಕು. ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ಈ ತರಬೇತಿ ಕಾರ್ಯಾಗಾರಕ್ಕೆ 10,000 ಗೌರವ ಧನ ನೀಡುತ್ತಿದ್ದು, ಇದರ ಸದುಪಯೋಗ ಪಡೆದುಕೊಳ್ಳಿ ಎಂದು ಮನವಿ ಮಾಡಿದರು.

ಮುಖ್ಯ ಶಿಕ್ಷಕ ಸಂತೋಷ್ ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಸಾಲ ಕೊಟ್ಟು ವಸೂಲಿ ಮಾಡುವ ಸಂಸ್ಥೆ ಅಲ್ಲದೆ ಶಿಕ್ಷಣಕ್ಕೂ ಒತ್ತು ಕೊಟ್ಟು ವಿದ್ಯಾರ್ಥಿಗಳ ಭವಿಷ್ಯ ರೂಪಿಸಲು ಅನೇಕ ಕಾರ್ಯಕ್ರಮ ರೂಪಿಸಿದ್ದು, ಇದನ್ನು ಸದ್ಬಳಕೆ ಮಾಡಿಕೊಂಡು ಏಕಾಗ್ರತೆಯಿಂದ ಓದಬೇಕು. ದುಶ್ಚಟಗಳಿಂದ ದೂರವಿದ್ದು ನಿಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು. ಕಾರ್ಯಕ್ರಮದಲ್ಲಿ ವಲಯ ಮೇಲ್ವಿಚಾರಕ ರಾದ ಸುನಂದ, ಜ್ಞಾನವಿಕಾಸ ಸಮನ್ವಯಾಧಿಕಾರಿ ರೂಪ, ಸೇವಾ ಪ್ರತಿನಿಧಿ ರವಿ, ಶಿಕ್ಷಕರಾದ ಪ್ರಸನ್ನ, ವರ್ಷ, ವೀರಣ್ಣ ಕರಡಿ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಬೆಟ್ಟದಪುರದಲ್ಲಿ ರಥಕ್ಕೆ ಸ್ವಾಗತ



ಪಿರಿಯಾಪಟ್ಟಣ ತಾಲೂಕು ಬೆಟ್ಟದಪುರಕ್ಕೆ ಆಗಮಿಸಿದ ಮಂಡ್ಯದಲ್ಲಿ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಚಾರ ರಥವನ್ನು ಗ್ರಾಪಂ ವತಿಯಿಂದ ಅದ್ಧೂರಿಯಾಗಿ ಸ್ವಾಗತಿಸಲಾಯಿತು. ಗ್ರಾಪಂ ಅಧ್ಯಕ್ಷ ರಾಜಶೇಖರ್, ಪಿಡಿಓ ಮಂಜುನಾಥ್, ತಾಲೂಕು ಕರ್ನಾಟಕ ಪ್ರೆಸ್‌ಕ್ಲಬ್ ಅಧ್ಯಕ್ಷ ಶಿವದೇವ್, ಸಂತೋಷ್, ರಮೇಶ್, ಶಿಕ್ಷಕ ಕೆಂಪರಾಜು, ಮಾಜಿ ಅಧ್ಯಕ್ಷ ಜಗದೀಶ್, ಕಾರ್ಯದರ್ಶಿ ಪಾಂಡು, ಶ್ರೀನಿಧಿ, ದೀಪು, ಮೈಲಾರಿಗೌಡ, ದೇವರಾಜು ಇತರರಿದ್ದರು.

ಕೋಟೆಯಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ರಥಕ್ಕೆ ಸ್ವಾಗತ



ಹೆಚ್.ಡಿ.ಕೋಟೆಯಲ್ಲಿ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ರಥವನ್ನು ಸ್ವಾಗತಿಸಲಾಯಿತು.


ಹೆಚ್.ಡಿ.ಕೋಟೆ, ಡಿ.8– ಪಟ್ಟಣದ ಆಡಳಿತ ಸೌಧದ ಎದುರು ಶಾಸಕ ಅನಿಲ್, ತಾಲೂಕು ಆಡಳಿತ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಸೇರಿದಂತೆ ವಿವಿಧ ಕನ್ನಡಪರ ಸಂಘಟನೆಗಳ ಸದಸ್ಯರು ಭುವನೇಶ್ವರಿ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕನ್ನಡ ಜ್ಯೋತಿ ಹೊತ್ತ ರಥವನ್ನು ಸಂಭ್ರಮದಿಂದ ಸ್ವಾಗತಿಸಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಕನ್ನಡ ಪ್ರಮೋದ್ ಮಾತನಾಡಿ, ಮಂಡ್ಯದಲ್ಲಿ ಇದೇ ತಿಂಗಳು ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಪ್ರಚಾರ ರಥಯಾತ್ರೆ ನಾಡಿನಾದ್ಯಂತ ಸಂಚರಿಸಿ ಪಟ್ಟಣಕ್ಕೆ ಆಗಮಿಸಿದೆ. ಮಂಡ್ಯದಲ್ಲಿ ಅದ್ಧೂರಿಯಾಗಿ ನಡೆಯುವ ಸಮ್ಮೇಳನದಿಂದ ಕನ್ನಡಿಗರನ್ನು ಒಗ್ಗೂಡಿಸುವ ಜೊತೆಗೆ ಕನ್ನಡ ನಾಡು, ನುಡಿ, ಸಂಸ್ಕೃತಿಯನ್ನು ಬಿಂಬಿಸುತ್ತದೆ. ನಾಡಿನ ಜ್ವಲಂತ ಸಮಸ್ಯೆಗಳ ಬಗ್ಗೆ ಗೋಷ್ಠಿಯಲ್ಲಿ ಚರ್ಚಿಸಲಾಗುತ್ತದೆ. ಈ ಸಮ್ಮೇಳನದಲ್ಲಿ ಕನ್ನಡಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

ಮಂಡ್ಯ ಜಿಲ್ಲೆ ಕೃಷಿ ಪ್ರಧಾನವಾಗಿದ್ದು, ರಥ ನೇಗಿಲಯೋಗಿ ರೈತ, ಭುವನೇಶ್ವರಿ ದೇವಿ, ನಾಲ್ವಡಿ ಕೃಷ್ಣರಾಜ ಒಡೆಯರ್, ವಿಶ್ವೇಶ್ವರಯ್ಯ, ಜ್ಞಾನ ಪೀಠ ಪುರಸ್ಕೃತ ಕವಿಗಳು ಹಾಗೂ ಕನ್ನಡ ಜ್ಯೋತಿಯಿಂದ ಕಂಗೊಳಿಸುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಶ್ರೀನಿವಾಸ್, ಗ್ರೇಡ್–2 ತಹಸೀಲ್ದಾರ್ ಶ್ರೀಧರ್, ಇಓ ಧರಣೇಶ್, ಪುರಸಭೆ ಸದಸ್ಯ ವೆಂಕಟೇಶ್, ನಂಜಪ್ಪ, ಕಸಾಪ ಗೌರವ ಕಾರ್ಯದರ್ಶಿ ಗಿರೀಶ್ ಮೂರ್ತಿ, ಮುಖಂಡರಾದ ಈರೇಗೌಡ, ಬಸವರಾಜು, ಎ.ಎಸ್.ಮಹದೇವು, ಚಂದ್ರಮೌಳಿ, ನಾಗೇಂದ್ರ ಕಾರ್ತಿಕ್, ಯಶ್ವಂತ್, ಶಿವಯ್ಯ, ಕೃಷ್ಣ, ಮಲ್ಲೇಶ್, ರವಿ, ಸಂತೋಷ್ ನಾಗ್, ವನಸಿರಿ ಉಮೇಶ್, ರಾಜೇಶ್ ಇದ್ದರು.

ತ್ರಿಚಕ್ರ ವಾಹನ, ಹೊಲಿಗೆ ಯಂತ್ರ ವಿತರಣೆ



ವಿಕಲಚೇತನರಿಗೆ ತ್ರಿಚಕ್ರ ವಾಹನ ವಿತರಿಸಲಾಯಿತು.

ನಂಜನಗೂಡು, ಡಿ.8– ವಿಕಲಚೇತನರ ಸಬಲೀಕರಣ ಹಿನ್ನಲೆಯಲ್ಲಿ ವಿಕಲಚೇತನರಿಗೆ ಸರ್ಕಾರದಿಂದ ಉಚಿತವಾಗಿ 44 ತ್ರಿಚಕ್ರ ಮೋಟಾರು ವಾಹನ, ಹಿಂದುಳಿದ ವರ್ಗದ ಇಲಾಖೆಯಿಂದ 35 ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಿಸಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.


ನಗರದ ತಾಲೂಕು ಕಚೇರಿ ಮುಂಭಾಗ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮೋಟಾರ್ ವಾಹನಗಳನ್ನು ಮತ್ತು ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಿಸಿ ಮಾತನಾಡಿದ ಅವರು, ಶೇ.75ಕ್ಕಿಂತ ಹೆಚ್ಚು ತೀವ್ರ ಸ್ವರೂಪದ ದೈಹಿಕ ನ್ಯೂನತೆ ಹೊಂದಿರುವ ವಿಶೇಷಚೇತನರ ಬದುಕು ಸುಗಮವಾಗಿಸುವ ಸಲುವಾಗಿ ಹಾಗೂ ಅವರಿಗೆ ನೆರವು ನೀಡುವ ಉದ್ದೇಶದೊಂದಿಗೆ ಸರ್ಕಾರ ವಿಕಲಚೇತನರಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಈ ನಿಟ್ಟಿನಲ್ಲಿ ಕ್ಷೇತ್ರದಲ್ಲಿ 44 ಫಲಾನುಭವಿಗಳನ್ನು ಗುರುತಿಸಿ ತಲಾ ಲಕ್ಷ ರೂ. ಮೌಲ್ಯದ ಹೀರೋ ಡೆಸ್ಟಿನಿ ಮೋಟಾರು ವಾಹನ ವಿತರಿಸಲಾಗಿದೆ ಎಂದರು.

ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಸಲುವಾಗಿ ಸರ್ಕಾರ ಶಕ್ತಿ ಯೋಜನೆ, ಗೃಹಲಕ್ಷ್ಮಿ ಯೋಜನೆಗಳನ್ನು ಜಾರಿಗೊಳಿಸಿದೆ. ಜೊತೆಗೆ ಸ್ವಯಂ ಉದ್ಯೋಗ ಕಲ್ಪಿಸಿ ಆರ್ಥಿಕವಾಗಿ ಸದೃಢಗೊಳಿಸುವ ಹಿತದೃಷ್ಟಿಯಿಂದ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ವತಿಯಿಂದ 35 ಮಹಿಳಾ ಫಲಾನುಭವಿಗಳಿಗೆ 5 ಲಕ್ಷ ವೆಚ್ಚದಲ್ಲಿ ಹೊಲಿಗೆ ಯಂತ್ರ ವಿತರಿಸಲಾಗಿದೆ. ಇದರ ಸದುಪಯೋಗ ಪಡೆದುಕೊಂಡು ಆರ್ಥಿಕವಾಗಿ ಸಬಲರಾಗಬೇಕು ಎಂದರು.

ಇದೇ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಅಕ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮು, ಹಾಡ್ಯ ಗ್ರಾಪಂ ಅಧ್ಯಕ್ಷ ಹರೀಶ್, ಮುಖಂಡರಾದ ಕುಳ್ಳಯ್ಯ, ನಾಗರಾಜಯ್ಯ, ಮುರಳಿ, ಆನಂದ, ಹಿಂದುಳಿದ ವರ್ಗದ ಕಲ್ಯಾಣಾಧಿಕಾರಿ ಸುರೇಶ್‌ಗೌಡ ಸೇರಿದಂತೆ ಇತರರಿದ್ದರು.

ಸಮುದಾಯದ ಹಿತಕ್ಕಾಗಿ ಕಾರ್ಯ ನಿರ್ವಹಿಸುವೆ

ಮಹಾಸಭಾ ಯುವ ಘಟಕದ ನೂತನ ಅಧ್ಯಕ್ಷ ಜಿ.ಅಶೋಕ್ ನಟರಾಜು



ಮಹಾಸಭಾ ಯುವ ಘಟಕದ ನೂತನ ಅಧ್ಯಕ್ಷ ಜಿ.ಅಶೋಕ್ ನಟರಾಜು ಹಾಗೂ ಮಹಿಳಾ ಘಟಕದ ಅಧ್ಯಕ್ಷೆ ರೂಪಶ್ರೀ ಅವರನ್ನು ಅಭಿನಂದಿಸಲಾಯಿತು.

ತಿ.ನರಸೀಪುರ, ಡಿ.8– ಸಮುದಾಯದ ಹಿತ ಕಾಯಲು ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸುತ್ತೇನೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಯುವ ಘಟಕದ ನೂತನ ಅಧ್ಯಕ್ಷ ಜಿ.ಅಶೋಕ್ ನಟರಾಜು ತಿಳಿಸಿದರು.

ಪಟ್ಟಣದ ವೀರಶೈವ ವಿದ್ಯಾರ್ಥಿ ನಿಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವೀರಶೈವ ಲಿಂಗಾಯತ ಸಮುದಾಯದ ಶೈಕ್ಷಣಿಕ ಹಾಗೂ ಸಾಮಾಜಿಕ ಸೇವಾ ಕಾರ್ಯ ಕ್ರಮಗಳನ್ನು ರೂಪಿಸಲು ಸದಾಕಾಲ ಚಿಂತಿಸುತ್ತೇನೆ ಎಂದರು.

ವೀರಶೈವ ಮಹಾಸಭಾ ಅಧ್ಯಕ್ಷ ಸಿ.ಎಂ.ಪ್ರಕಾಶ್ ಮಾತನಾಡಿ, ಸಮುದಾಯದ ಸಂಘಟನೆ ಜವಾಬ್ದಾರಿಯನ್ನು ಯುವಕರಿಗೆ ನೀಡಬೇಕು. ಸಮುದಾಯದ ಮುಂದಾಳತ್ವ ವಹಿಸಿಕೊಳ್ಳಲು ಯುವಕರು ಮುಂದೆ ಬಂದು ಸಮಾಜವನ್ನು ಬೆಳಕಿಗೆ ತರುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಎಂದು ಅಶೋಕ್ ಅವರಿಗೆ ಯುವ ಘಟಕದ ಅಧ್ಯಕ್ಷರ ಜವಾಬ್ದಾರಿ ನೀಡಲಾಗಿದೆ ಎಂದರು.

ಇದೇ ವೇಳೆ ಮಹಾಸಭಾ ಯುವ ಘಟಕದ ನೂತನ ಅಧ್ಯಕ್ಷ ಜಿ.ಅಶೋಕ್ ನಟರಾಜು ಹಾಗೂ ಮಹಿಳಾ ಘಟಕದ ಅಧ್ಯಕ್ಷೆ, ಪುರಸಭೆ ಸದಸ್ಯರಾದ ರೂಪಶ್ರೀ ಅವರನ್ನು ಅಭಿನಂದಿಸಲಾಯಿತು.

ಈ ವೇಳೆ ಮಹಾಸಭಾ ಉಪಾಧ್ಯಕ್ಷರಾದ ಅಂಬಿಕಾ, ಎಸ್.ಕೆ.ಕಿರಣ್, ಶಿವಮಲ್ಲಪ್ಪ, ಪ್ರಧಾನ ಕಾರ್ಯದರ್ಶಿ ಶಿವಶಂಕರ್, ಕಾರ್ಯದರ್ಶಿ ಪರಮೇಶ್ ಪಟೇಲ್, ಕೋಶಾಧ್ಯಕ್ಷ ನಂಜುಂಡಸ್ವಾಮಿ, ನಿಕಟಪೂರ್ವ ನಿರ್ದೇಶಕ ಶಿವಕುಮಾರ್, ಮಂಜುನಾಥ್ ಹಾಜರಿದ್ದರು.

ಕೃಷಿ ಸಮಾಜದ ಸಮಿತಿಗೆ 15 ನಾಮಪತ್ರ ಸಲ್ಲಿಕೆ

ಸಾಲಿಗ್ರಾಮ, ಡಿ.8– ತಾಲೂಕು ಕೃಷಿ ಸಮಾಜದ ಸಮಿತಿ ಆಯ್ಕೆಗೆ 15 ನಾಮಪತ್ರಗಳು ಸಲ್ಲಿಕೆಯಾಗಿವೆ. ತಾಲೂಕಿನ ಕೃಷಿಕ ಸಮಾಜದ ನಿರ್ದೇಶಕರ ಸ್ಥಾನಕ್ಕೆ 15 ಮಂದಿ ನಾಮಪತ್ರ ಸಲ್ಲಿಸಿದ್ದು ಎಲ್ಲರೂ ಅವಿರೋಧವಾಗಿ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ ಎಂದು ಚುನಾವಣಾಧಿಕಾರಿ ಕೃಷಿ ಇಲಾಖೆ ಪ್ರಸನ್ನ ತಿಳಿಸಿದ್ದಾರೆ. ನಾಮಪತ್ರ ಸಲ್ಲಿಸಿ ಮಾತನಾಡಿದ ಎಸ್.ಎ.ರವೀಶ್, 2012ರಲ್ಲಿ ಕೆ.ಆರ್.ನಗರ ತಾಲೂಕಿನಲ್ಲಿ ಕೃಷಿಕ ಸಮಾಜದ ಚುನಾವಣೆ ನಡೆದಿತ್ತು. ಆದರೆ ಹಲವು ಕಾರಣಗಳಿಂದಾಗಿ ಚುನಾವಣೆ ಸ್ಥಗಿತಗೊಂಡು ಹಿಂದಿನ ಸದಸ್ಯರೇ ಆಡಳಿತ ನಡೆಸುತ್ತಿದ್ದರು. ಇದೀಗ ಹೊಸ ತಾಲೂಕು ಘೋಷಣೆಯಾದ ಬಳಿಕ ನ್ಯಾಯಾಲದ ಆದೇಶದ ಮೇರೆಗೆ ಚುನಾವಣೆ ನಡೆಯುತ್ತಿದೆ ಎಂದರು. ಈ ವೇಳೆ ಮುಖಂಡ ಶಿವರಾಮ್, ಸೋಮಶೇಖರ್, ಪುಟ್ಟೇಗೌಡ, ಲಕ್ಷ್ಮೀಗೌಡ, ಗಣೇಶ ಸೇರಿದಂತೆ ಇನ್ನಿತರರಿದ್ದರು.



ಎಸ್.ಎ.ರವೀಶ್ ಬೆಂಬಲಿಗರೊಂದಿಗೆ ನಾಮಪತ್ರ ಸಲ್ಲಿಸಿದರು.

ಹೆಚ್.ಡಿ.ಕೋಟೆಯಲ್ಲಿ ವಿಶ್ವ ಏಡ್ಸ್ ತಡೆ ದಿನಾಚರಣೆ



ವಿಶ್ವ ಏಡ್ಸ್ ತಡೆ ದಿನಾಚರಣೆಯನ್ನು ಶಾಸಕ ಅನಿಲ್ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಡಿ.8– ವಿಶ್ವ ಆರೋಗ್ಯ ಸಂಸ್ಥೆ 1988ರ ಡಿ.1 ರಿಂದ ವಿಶ್ವ ಏಡ್ಸ್ ತಡೆ ದಿನ ಆಚರಿಸುತ್ತಾ ಬಂದಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.


ಪಟ್ಟಣದ ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ವಿಶ್ವ ಏಡ್ಸ್ ತಡೆ ದಿನಾಚರಣೆಯಲ್ಲಿ ಮಾತನಾಡಿದ ಅವರು, ಹೆಚ್‌ಐವಿ ಏಡ್ಸ್ ಅಸುರಕ್ಷಿತ ಲೈಂಗಿಕ ಸಂಪರ್ಕ, ಪರೀಕ್ಷೆ ಮಾಡದ/ಸೋಂಕಿತ ರಕ್ತ ಮತ್ತು ಉತ್ಪನ್ನಗಳ ವರ್ಗಾವಣೆ ಮಾಡುವುದ ರಿಂದ, ಸಂಸ್ಕರಿಸದ ಚೂಪು ಸಾಧನಗಳು, ಸೂಜಿ, ಸಿರಂಜು, ಶಸ್ತ್ರ ಕ್ರಿಯಾ ಸಾಧನಗಳನ್ನು ಉಪಯೋಗಿಸುವುದರಿಂದ ಬರುತ್ತದೆ ಒಂದು ತಿಂಗಳಲ್ಲಿ ಶೇ.10ರಷ್ಟು ಜಾಸ್ತಿ ತೂಕ ಕಡಿಮೆ ಆಗುವುದು ನಿರಂತರ ಭೇದಿ ಆಗುವುದು, ಕ್ಷಯ ಸೋಂಕು ತಗಲು ವುದು ಮುಖ್ಯ ಲಕ್ಷಣಗಳಾಗಿರುತ್ತವೆ ಈ ಸೋಂಕನ್ನು ಸೊನ್ನೆಗೆ ತರಲು, ಪ್ರತಿವರ್ಷ ಒಂದೊಂದು ಘೋಷ ವಾಕ್ಯವನ್ನಿಟ್ಟುಕೊಂಡು ಇದರ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಶಾಸಕ ಅನಿಲ್, ವಿಶ್ವ ಏಡ್ಸ್ ದಿನವನ್ನು ಪ್ರತಿ ವರ್ಷ ಡಿ.1ರಂದು ಆಚರಿಸುತ್ತಾ ಬಂದಿದ್ದೇವೆ. ಈ ಬಗ್ಗೆ ಹಾಗೂ ಹೆಚ್‌ಐವಿ ಸೋಂಕು ತಡೆಗಟ್ಟಲು ಜನಸಾಮಾನ್ಯರಲ್ಲಿ ಸೂಕ್ತ ಅರಿವು ಹಾಗೂ ಜಾಗೃತಿ ಮೂಡಿಸಲು ಮತ್ತು ಇದನ್ನು ಎದುರಿಸಲು ನಮ್ಮ ಮುಂದಿರುವ ಸವಾಲುಗಳ ಬಗ್ಗೆ ಚಿಂತಿಸುವ ದಿನ ಇದಾಗಿದೆ. ಏಡ್ಸ್ ನಿಯಂತ್ರಣ ಕುರಿತು ಸರ್ಕಾರಗಳು ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳು ಕೈಗೊಂಡ ಕ್ರಮಗಳ ಬಗ್ಗೆ ಜನರಿಗೆ ತಿಳಿಸುವ ಸದಾವಕಾಶವಾಗಿರುತ್ತದೆ. ಹೀಗಾಗಿ ಈ ಸೋಂಕಿನ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವುದು ಅಗತ್ಯ ಎಂದರು.

ಈ ವೇಳೆ ಮೈಮುಲ್ ನಿರ್ದೇಶಕ ಈರೇಗೌಡ, ನಾಗೇಂದ್ರ, ವಕೀಲ ಮಣಿರಾಜ್, ನಾಗೇಶ್, ನಾಗರಾಜು, ಉಮೇಶ್, ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಸಾರ್ವಜನಿಕರಿದ್ದರು.

ಶವಾಗಾರಕ್ಕೆ ಸರ್ಕಾರದಿಂದ ಅನುದಾನ ಮಂಜೂರು

ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಅಭಿಲಾಷ್



ವೈದ್ಯಾಧಿಕಾರಿ ಡಾ.ಅಭಿಲಾಷ್ ಅವರನ್ನು ದಸಂಸ ಮುಖಂಡರು ಅಭಿನಂದಿಸಿದರು.

ತಿ.ನರಸೀಪುರ, ಡಿ.8– ಶವಾಗಾರ ನಿರ್ಮಾಣಕ್ಕೆ ಸರ್ಕಾರದಿಂದ ಅನುದಾನ ಮಂಜೂರಾಗಿದೆ ಎಂದು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಅಭಿಲಾಷ್ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ದಸಂಸ ಮುಖಂಡರಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಏಕಕಾಲದಲ್ಲಿ 2 ಶವಗಳ ಮರಣೋತ್ತರ ಪರೀಕ್ಷೆ ನಡೆಸಲು ಅಗತ್ಯವಿರುವ ವಿಶಾಲ ಶವಾಗಾರವನ್ನು 17 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುವುದು. ಇನ್ನು ವಸತಿ ಗೃಹ ನಿರ್ಮಾಣಕ್ಕೆ 8 ಲಕ್ಷ ವೆಚ್ಚ ಮಾಡಲಾಗುತ್ತದೆ. ಪ್ರಸ್ತುತ ಆಸ್ಪತ್ರೆಯಲ್ಲಿ ಬಡ ರೋಗಿಗಳ ಚಿಕಿತ್ಸೆಗೆ ಅಗತ್ಯ ಕ್ರಮ ವಹಿಸಲಾಗಿದೆ. ಮುಂಬರುವ ದಿನಗಳಲ್ಲಿ ರೋಗಿಗಳಿಗೆ ತುರ್ತು ಚಿಕಿತ್ಸೆ ನೀಡಲು ಆಸ್ಪತ್ರೆಗೆ ಬೇಕಿರುವ ಹೆಚ್ಚುವರಿ ಸೌಲಭ್ಯ ಕಲ್ಪಿಸುವಂತೆ ಸರ್ಕಾರದ ಮನವಿ ಸಲ್ಲಿಸಲಾಗಿದೆ ಎಂದರು.

ಜಿಲ್ಲಾ ಸಂಘಟನಾ ಸಂಚಾಲಕ ಕೆಂಪಯ್ಯನಹುಂಡಿ ರಾಜು ಮಾತನಾಡಿ, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಉತ್ತಮ ಸೇವೆ ದೊರಕುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದಿಂದ ಲಕ್ಷ್ಯ ಪ್ರಶಸ್ತಿ ದೊರೆತಿದ್ದು, ಡಾ.ಅಭಿಲಾಷ್ ಅವರು ಅಧಿಕಾರ ವಹಿಸಿಕೊಂಡ ನಂತರ ಬಡ ರೋಗಿಗಳಿಗೆ ತ್ವರಿತಗತಿಯಲ್ಲಿ ಚಿಕಿತ್ಸೆ ದೊರಕಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದು, ಜನರು ಕೂಡ ಆಸ್ಪತ್ರೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಆಸ್ಪತ್ರೆಗೆ ಅಗತ್ಯ ಸೌಲಭ್ಯ ಒದಗಿಸಿಕೊಡುವಂತೆ ನಮ್ಮ ಸಮಿತಿ ಹಲವಾರು ಬಾರಿ ಹೋರಾಟ ಮಾಡಿದ್ದರ ಫಲವಾಗಿ ಶವಾಗಾರ ನಿರ್ಮಾಣ ಕಾರ್ಯಕ್ಕೆ ಅನುದಾನ ದೊರಕಿದೆ ಎಂದು ಅಭಿಪ್ರಾಯಪಟ್ಟರು.

ಈ ವೇಳೆ ಜಿಲ್ಲಾ ವಿಭಾಗೀಯ ಸಂಚಾಲಕ ಮರಿಸ್ವಾಮಿ, ತಾಲೂಕು ಸಂಚಾಲಕ ಕುಮಾರ್, ಸೋಮನಾಥಪುರ ಗೋವಿಂದರಾಜು, ತೊಟ್ಟವಾಡಿ ರಾಜಪ್ಪ, ಕೊಳತ್ತೂರು ಪ್ರಭಾಕರ್, ಟೌನ್ ಸಂಚಾಲಕ ವಿನಯ್ ಕುಮಾರ್, ಬೈರಾಪುರ ಅರ್ಜುನ್, ಚೌಹಳ್ಳಿ ಪರಶುರಾಮ್, ಕೆಂಪಯ್ಯನಹುಂಡಿ ಜಯಣ್ಣ, ಮನೋಜ್, ಮಾರನಪುರ ಕೇಶವಮೂರ್ತಿ ಹಾಜರಿದ್ದರು.

ಮೈಸೂರು ಮಿತ್ರ

ಸೋಮವಾರ 9 ಡಿಸೆಂಬರ್ 2024

ಮೈಸೂರಲ್ಲಿ ಕ್ಯಾರಲ್ ಸಿಂಗಿಂಗ್ ಸ್ಪರ್ಧೆ

ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಜಿಲ್ಲೆಗಳ 6,000 ಮಕ್ಕಳು ಭಾಗಿ





ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ವತಿಯಿಂದ ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಭಾನುವಾರ ಆಯೋಜಿಸಿದ್ದ 32ನೇ ಕ್ಯಾರಲ್ ಸಿಂಗಿಂಗ್ ಸ್ಪರ್ಧೆಯನ್ನು ಡಯೋಸಿಸ್ ಆಫ್ ಮೈಸೂರ್ ಅಪೋಸ್ಟೋಲಿಕ್ ಅಡ್ಮಿನಿಸ್ಟ್ರೇಷನ್ ರೆವೆರೆಂಡ್ ಡಾ. ಬೆರ್ನಾಡ್ ಮೊರಾಸ್ ಅವರು ಉದ್ಘಾಟಿಸಿದರು. (ಎಡದಿಂದ) ಸಂಘದ ಸಲಹೆಗಾರ ರೆ. ಫಾ. ರಿಜೋ ಥಾಮಸ್, ರಿಷಿ ಎಫ್‌ಐಬಿಸಿ ಸೊಲ್ಯೂಷನ್ಸ್ ಪ್ರೈ. ಲಿ. ಸಿಇಓ ಅಂಡ್ ಇಡಿ ಜೋಸೆಫ್ ಫ್ರಾನ್ಸಿಸ್, ಸಿಸಿಎ ಅಧ್ಯಕ್ಷ ಪ್ರೊ. ಜೋಸೆಫ್ ಮಾಥ್ಯೂ, ಸಂಯೋಜಕ ಎಂ.ಕೆ. ಜಾನಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯೆ ಶೀಲಾ ಮೋಹನ್ ಅವರಿದ್ದಾರೆ. ಸಿಂಗಿಂಗ್ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಮಕ್ಕಳನ್ನು ಬಲ ಚಿತ್ರದಲ್ಲಿ ಕಾಣಬಹುದು.

ಮೈಸೂರು, ಡಿ. 8(ಆರ್‌ಕೆ)– ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ (ಸಿಸಿಎ) ವತಿಯಿಂದ ಮೈಸೂರಿನ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಭಾನುವಾರ ಆಯೋಜಿಸಿದ್ದ 32ನೇ ಕ್ಯಾರಲ್ ಗಾಯನ ಸ್ಪರ್ಧೆಯಲ್ಲಿ 6,000ಕ್ಕೂ ಹೆಚ್ಚು ಮಕ್ಕಳು ಪಾಲ್ಗೊಂಡಿದ್ದರು.

ಕ್ರಿಸ್‌ಮಸ್ ಹಬ್ಬದ ಸಡಗರದಲ್ಲಿ ನಡೆದ ಸ್ಪರ್ಧೆಯಲ್ಲಿ ಮೈಸೂರು, ಚಾಮರಾಜನಗರ, ಕೊಡಗು ಹಾಗೂ ಮಂಡ್ಯ ಜಿಲ್ಲೆಗಳ 45 ಶಾಲೆಗಳಿಂದ 6000ಕ್ಕೂ ಹೆಚ್ಚು ಮಕ್ಕಳು ಗಾಯನ ಸ್ಪರ್ಧೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು.

ಕಾರ್ಯಕ್ರಮವನ್ನು ಮೈಸೂರು ಡಯಾಸಿಸ್‌ನ ಅಪೋಸ್ಟೋಲಿಕ್ ಆಡಳಿತಾಧಿಕಾರಿ ರೆವೆರೆಂಡ್ ಡಾ. ಬೆರ್ನಾಡ್ ಮೊರಾಸ್ ಅವರು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದರು. ಕಾರ್ಮೆಲ್ ಕ್ಯಾಥೋಲಿಕ್ ಅಸೋಸಿಯೇಷನ್ ಅಧ್ಯಕ್ಷ ಜೋಸೆಫ್ ಮಾಥ್ಯೂ, ಸಲಹೆಗಾರ ರೆವರೆಂಡ್ ಫಾದರ್ ರಿಜೋ ಥಾಮಸ್, ರಿಷಿ ಎಫ್‌ಐಬಿಸಿ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಸಿಇಓ ಮತ್ತು ಇಡಿ ಜೋಸೆಫ್ ಫ್ರಾನ್ಸಿಸ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಪ್ರಾಥಮಿಕ ಶಾಲೆಯಿಂದ ಪ್ರಥಮ ದರ್ಜೆ ಕಾಲೇಜುವರೆಗೆ ತಲಾ 35 ಮಕ್ಕಳನ್ನೊಳಗೊಂಡ ಒಟ್ಟು 108 ತಂಡಗಳು ಸ್ಪರ್ಧೆಯಲ್ಲಿ ಪಾಲ್ಗೊಂಡು ಸಮೂಹ ಗಾಯನ ಪ್ರಸ್ತುತಪಡಿಸಿದರು. ಆಂಗ್ಲ, ಕನ್ನಡ ಮತ್ತು ಇತರ ಭಾಷೆಗಳಲ್ಲಿ ಮಕ್ಕಳು ಉತ್ಸಾಹದಿಂದ ಹಾಡಿ ನಲಿದರು. ಜೀಸಸ್ ಕ್ರೈಸ್ತರ ಜನ್ಮದಿನದ ಕುರಿತು ಸಂಜೆ 7 ಗಂಟೆವರೆಗೂ ಹಾಡಿದ ಮಕ್ಕಳು ಕಾರ್ಯಕ್ರಮಕ್ಕೆ ಮೆರಗು ನೀಡಿದರು.

ಸ್ಪರ್ಧೆಯಲ್ಲಿ ವಿಜೇತರಾದ ತಂಡಗಳಿಗೆ ಸಂಜೆ ನಡೆದ ಕಾರ್ಯಕ್ರಮದಲ್ಲಿ ಬಹುಮಾನ, ಟ್ರೋಫಿಗಳನ್ನು ಪ್ರದಾನ ಮಾಡಲಾಯಿತು. ಕೆಪಿಎಯು ಚೆನ್ನ ಬಸವಣ್ಣ, ಮಂಡ್ಯ ಡಯೋಸಿಸ್‌ನ ಬಿಷಪ್ ಮಾರ್ ಸೆಬಾಸ್ಟಿಯನ್ ಅದಯಂತರಾತ್ ಅವರು ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ರೆವರೆಂಡ್ ಫಾದರ್ ಆಗಸ್ಟೈನ್ ಪಾಯಂ ಪಲ್ಲಿಲ್, ಲಾಯಲ್ ವರ್ಲ್ಡ್ ಗ್ರೂಪ್ ಅಧ್ಯಕ್ಷ ಮೊಯಿದ್ದೀನ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಸನ್ಮಾನ



ಬೆಂಗಳೂರಿನಲ್ಲಿ ರಾಜ್ಯ ಸರ್ಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕ ಸಬಲೀಕರಣ ಇಲಾಖೆ ವತಿಯಿಂದ ಆಯೋಜಿಸಿದ್ದ ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಮೈಸೂರಿನ ಚಾಮುಂಡಿಬೆಟ್ಟದ ನಿವಾಸಿ ಎನ್.ಶ್ರೀಧರ್ ದೀಕ್ಷಿತ್ ಅವರಿಗೆ ವಿಕಲಚೇತನರ ವೈಯುಕ್ತಿಕ ಸಾಧನೆ ಪರಿಗಣಿಸಿ ರಾಜ್ಯ ಮಟ್ಟದ 'ಸಮಗ್ರ ಮತ್ತು ಸುಸ್ಥಿರ ಭವಿಷ್ಯಕ್ಕಾಗಿ ವಿಕಲಚೇತನ ವ್ಯಕ್ತಿಗಳಲ್ಲಿ ನಾಯಕತ್ವ ಉತ್ತೇಜನದ ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಡಿ.11ರಂದು ಅಂಚೆ ಪೆನ್ಷನ್ ಅದಾಲತ್

ಮೈಸೂರು, ಡಿ.8–ಮೈಸೂರು ವಿಭಾಗ ಅಂಚೆ ಇಲಾಖೆಯ ಹಿರಿಯ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಡಿಸೆಂಬರ್ 11 ರಂದು ಬೆಳಗ್ಗೆ 11 ಗಂಟೆಗೆ ಪೆನ್ಷನ್ ಅದಾಲತ್ ಏರ್ಪಡಿಸಲಾಗಿದೆ. ಪಿಂಚಣಿದಾರರು ತಮ್ಮ ಅಹವಾಲುಗಳೇನಾದರೂ ಇದ್ದಲ್ಲಿ ಡಿಸೆಂಬರ್ 10ರೊಳಗೆ ಕಚೇರಿಗೆ ಸಲ್ಲಿಸಬಹುದಾಗಿದ್ದು, ಇಚ್ಛೆಯುಳ್ಳ ಪಿಂಚಣಿದಾರರು ಅದಾಲತ್‌ನಲ್ಲಿ ಭಾಗವಹಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಶ್ವಮಾನವ ಜೋಡಿ ರಸ್ತೆಯ ಮೀಡಿಯನ್‌ನಲ್ಲಿ ಕಂಗೊಳಿಸಲಿವೆ ಅಲಂಕಾರಿಕ ಹೂ ಗಿಡಗಳು

ಮೈಸೂರು, ಡಿ. 8(ಆರ್‌ಕೆ)– ಮೈಸೂರಿನ ಕುಕ್ಕರಹಳ್ಳಿ ಕೆರೆ ಜಂಕ್ಷನ್‌ನಿಂದ ದಟ್ಟಗಳ್ಳಿವರೆಗೆ ವಿಶ್ವಮಾನವ ಜೋಡಿ ರಸ್ತೆಯ ಮೀಡಿಯನ್ ಅಲಂಕಾರಿಕ ಉದ್ಯಾನವನವಾಗಿ ಪರಿವರ್ತನೆಯಾಗುತ್ತಿದೆ.

ನಾಲ್ಕು ಕಿ.ಮೀ. ಉದ್ದ, 20 ಅಡಿ ಅಗಲದ ರಸ್ತೆ ವಿಭಜಕವನ್ನು ಅಲಂಕಾರಿಕ ಹೂಗಳ ಗಿಡಗಳನ್ನು ನೆಟ್ಟು ಬೆಳೆಸಿ ಸುಂದರ ತಾಣವಾಗಿಸಲು ಮೈಸೂರು ಮಹಾನಗರ ಪಾಲಿಕೆಯು ಮುಂದಾಗಿದೆ. ವಿಶ್ವಮಾನವ ಜೋಡಿ ರಸ್ತೆಯ ಬೋಗಾದಿ ರಸ್ತೆಯ ಕುಕ್ಕರಹಳ್ಳಿ ಕೆರೆ ಜಂಕ್ಷನ್‌ನಿಂದ ದಟ್ಟಗಳ್ಳಿ ವರೆಗೆ ಕುಕ್ಕರಹಳ್ಳಿ, ಸರಸ್ವತಿಪುರಂ, ಕುವೆಂಪುನಗರ, ರಾಮಕೃಷ್ಣನಗರ ಮೂಲಕ ಹಾದು ಹೋಗಿದ್ದು, ಸುಮಾರು 20 ಅಡಿ ಅಗಲದ ಮೀಡಿಯನ್ ಹೊಂದಿದೆ.

ಪ್ರಮುಖ ಜೋಡಿ ರಸ್ತೆಯಾಗಿರುವ ಅಲ್ಲಿನ ವಿಭಜಕವನ್ನು ಲ್ಯಾಂಡ್‌ಸ್ಕೇಪಿಂಗ್ ಮಾಡಿ ಸುಂದರ ಹೂ ಬಿಡುವ ಹಾಗೂ ಹಸು, ಮೇಕೆ ತಿನ್ನದ ಗಿಡಗಳನ್ನು ನೆಟ್ಟು ಸೌಂದರ್ಯ ವೃದ್ಧಿಸುವ ಕಾಮಗಾರಿಯನ್ನು ಮೈಸೂರು ಮಹಾನಗರ ಪಾಲಿಕೆಯು ಕೈಗೊಂಡಿದೆ.



ಸುಮಾರು 50 ಬಗೆಯ ಹೂ ಬಿಡುವ ಹಾಗೂ ಅಲಂಕಾರಿಕ ಸಸಿಗಳನ್ನು ಮೀಡಿಯನ್‌ನಲ್ಲಿ ನೆಟ್ಟು ಬೆಳೆಸಿ 2 ವರ್ಷಗಳವರೆಗೆ ನಿರ್ವಹಣೆ ಮಾಡಲು ಪಾಲಿಕೆಯು ಟೆಂಡರ್ ಮೂಲಕ ವ್ಯಕ್ತಿಯೊಬ್ಬರಿಗೆ ಗುತ್ತಿಗೆ ನೀಡಿರುವುದರಿಂದ ಗುತ್ತಿಗೆದಾರ ಕಾಮಗಾರಿಯನ್ನು ಆರಂಭಿಸಿದ್ದಾರೆ ಎಂದು ಪಾಲಿಕೆ ಕಾರ್ಯಪಾಲಕ ಇಂಜಿನಿಯರ್ (ಪಶ್ಚಿಮ) ಮಹೇಶ ಅವರು ತಿಳಿಸಿದ್ದಾರೆ.

ಗಿಡ ನೆಟ್ಟು, ಗೊಬ್ಬರ, ನೀರು ಹಾಕಿ 2 ವರ್ಷಗಳವರೆಗೆ ನಿರ್ವಹಣೆ ಮಾಡಲು ಪಾಲಿಕೆಯ ತೋಟಗಾರಿಕಾ ವಿಭಾಗದಿಂದ ಗುತ್ತಿಗೆದಾರನಿಗೆ ಹಂತ ಹಂತವಾಗಿ 70 ಲಕ್ಷ ರೂ. ನೀಡುವುದಾಗಿ ಕರಾರಿನಲ್ಲಿ ನಮೂದಿಸಲಾಗಿದೆ ಎಂದು ಅವರು ತಿಳಿಸಿದರು.

ದೇವರಾಜ ಅರಸು ಇನ್ನಷ್ಟು ಕಾಲ ಬದುಕಿದ್ದರೆ ಪ್ರಧಾನಿಯಾಗುತ್ತಿದ್ದರು

ನಿವೃತ್ತ ಐಎಎಸ್ ಅಧಿಕಾರಿ ಬಿ.ಆರ್.ಜಯರಾಮರಾಜೇ ಅರಸ್ ಅಭಿಮತ

ಮೈಸೂರು,ಡಿ.8(ಎಂಟಿವೈ)– ಅಧಿಕಾರಾವಧಿಯಲ್ಲಿ ಹಲವು ಜನಪರ ಯೋಜನೆಗಳ ಮೂಲಕ ಉತ್ತಮ ಆಡಳಿತ ನೀಡಿದ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಅವರು ಇನ್ನಷ್ಟು ಕಾಲ ಬದುಕಿದ್ದರೆ ಪ್ರಧಾನಿಯಾಗುವ ಅವಕಾಶ ಗಿಟ್ಟಿಸಿಕೊಳ್ಳುತ್ತಿದ್ದರು ಎಂದು ನಿವೃತ್ತ ಐಎಎಸ್ ಅಧಿಕಾರಿ ಬಿ.ಆರ್. ಜಯರಾಮರಾಜೇ ಅರಸ್ ತಿಳಿಸಿದ್ದಾರೆ.

ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ವೇಣುಗೋಪಾಲಸ್ವಾಮಿ ದೇವಾಲಯದ ಆವರಣದಲ್ಲಿ ಭಾನುವಾರ ಕರ್ನಾಟಕ ಅರಸು ಮಹಾಮಂಡಲಿ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಜನಾಂಗದ ಯುವ ಜನೋತ್ಸವ 'ಜನಾಂಗದ ಸಾಧಕರ' ಪರಿಷ್ಕೃತ ಪುಸ್ತಕ ಬಿಡುಗಡೆ ಸಮಾರಂಭ ಹಾಗೂ ಜನಾಂಗದ ಸಾಧಕರ, ಚಿಂತಕ 'ಚಿಂತನ–ಮಂಥನ' ಸಂವಾದ ಕಾರ್ಯಕ್ರಮದಲ್ಲಿ 'ಯಶೋಗಾಥೆ ಅರಸು ಜನಾಂಗದ ಸಾಧಕರು' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಡಿ.ದೇವರಾಜ ಅರಸ್ ಅವರು ರಾಜ್ಯದ ಮುಖ್ಯ ಮಂತ್ರಿಯಾಗಿ ಸಾಕಷ್ಟು ಒಳ್ಳೆಯ ಯೋಜನೆಗಳನ್ನು ಕೊಡುಗೆಯಾಗಿ ನೀಡಿ, ಉತ್ತಮ ಆಡಳಿತ ನಡೆಸಿದರು.



ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ವೇಣುಗೋಪಾಲಸ್ವಾಮಿ ದೇವಾಲಯದ ಆವರಣದಲ್ಲಿ ಭಾನುವಾರ ಕರ್ನಾಟಕ ಅರಸು ಮಹಾಮಂಡಲಿ ಚಾರಿಟಬಲ್ ಟ್ರಸ್ಟ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಬಿ.ಆರ್.ಜಯರಾಮರಾಜೇ ಅರಸ್ 'ಯಶೋಗಾಥೆ ಅರಸು ಜನಾಂಗದ ಸಾಧಕರು' ಕೃತಿಯನ್ನು ಬಿಡುಗಡೆ ಮಾಡಿದರು.

ಉಳುವವನೇ ಭೂಮಿಯ ಒಡೆಯ, ಹಾವನೂರು ಆಯೋಗದ ವರದಿ ಜಾರಿ, ಮಲ ಹೊರುವ ಪದ್ಧತಿ ನಿಷೇಧ ಸೇರಿದಂತೆ ಕ್ರಾಂತಿಕಾರಕ ಕಾರ್ಯ ಕ್ರಮವನ್ನು ಜಾರಿಗೆ ತರುವ ಮೂಲಕ ರಾಜ್ಯದ ಜನರ ಹೃದಯ ಗೆದ್ದಿದ್ದಾರೆ. ಹಿಂದುಳಿದ ವರ್ಗಕ್ಕೆ ಸೇರಿದವರು ಮುಖ್ಯಮಂತ್ರಿ ಆಗುವುದು ಸುಲಭವಲ್ಲ. ದೇವರಾಜ ಅರಸು ಪಟ್ಟಿರುವ ಶ್ರಮ ಅಷ್ಟಿಷ್ಟಲ್ಲ. ಅವರಲ್ಲಿದ್ದ ಸಂಸ್ಕಾರ, ಬದ್ಧತೆ, ದಕ್ಷತೆ, ನ್ಯಾಯಪರ ನಿಲುವು, ಸಾಮಾಜಿಕ ಕಳಕಳಿ ಗುಣದಿಂದಾಗಿ ಯಶಸ್ವಿ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದರು ಎಂದು ಹೇಳಿದರು.

ದೇವರಾಜ ಅರಸು ಅವರಂತೆ ಹಿಂದುಳಿದ ವರ್ಗದಿಂದ ಬಂದ ಸಿದ್ದರಾಮಯ್ಯ ಹಾಗೂ ಧರ್ಮಸಿಂಗ್ ಅವರು ಮುಖ್ಯ ಮಂತ್ರಿಯಾಗಿ ಆಡಳಿತ ನಡೆಸಿದ್ದಾರೆ. ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ದೇವರಾಜ ಅರಸು ಅವರನ್ನು ಗೌರವದಿಂದ ಸ್ಮರಿಸುತ್ತಾರೆ. ದೇವರಾಜ ಅರಸು ಅವರ ಪ್ರೇರಣೆಯಿಂದ ಜನಪರ ಆಡಳಿತ ನೀಡುತ್ತಿರುವುದಾಗಿ ಸಿದ್ದರಾಮಯ್ಯ ಹಲವು ಬಾರಿ ಹೇಳಿದ್ದಾರೆ ಎಂದರು.

ಬೇರೆ ಬೇರೆ ಸಮುದಾಯದ ನಾಯಕರು ತಮ್ಮ ಸಮಾಜದ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದ್ದಾರೆ. ಆದರೆ ಅರಸು ಸಮುದಾಯದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯಗಳ ಸ್ಥಾಪನೆಗೆ ಮುಂದಾಗದಿರುವುದು ವಿಷಾದನೀಯ ಎಂದು ತಿಳಿಸಿದರು.

ಚಿತ್ರ ಸಂಕಲನಕಾರ ಬಿ.ಸುರೇಶ್ ಅರಸ್ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿರುವ ಅರಸು ಸಮುದಾಯ ವಿದ್ಯಾರ್ಥಿಗಳು ಇಂದಿಗೂ ಬಡತನದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಅಂತಹ ವಿದ್ಯಾರ್ಥಿಗಳನ್ನು ಗುರುತಿಸಿ ನೆರವು ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಅರಸು ಮಹಾಮಂಡಲ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್, ಜನಾಂಗದ ಮುಖಂಡರಾದ ಎಂ.ಕೆ. ಆನಂದ ರಾಜೇ ಅರಸ್, ಕೃತಿಯ ಸಂಕಾದಕರಾದ ಡಾ.ಎಂ.ಆರ್.ಭಾರತಿ, ಲೇಖಕ ಲಕ್ಷ್ಮೀ ಕಾಂತರಾಜೇ ಅರಸ್ ಹಾಗೂ ಎಂ.ಎಲ್. ಬಸವರಾಜೇ ಅರಸ್, ಲ.ಡಾ.ರಾಮ ರಾಜೇ ಅರಸ್, ಸುಶೀಲ ಅರಸ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಆರ್.ನಕುಲ್



ಮೈಸೂರು: ಡಾ.ಎನ್.ವಿ.ಮನೋಜ್ ಕುಮಾರ ಅವರ ಮಾರ್ಗದರ್ಶನದಲ್ಲಿ ಆರ್. ನಕುಲ್ ಅವರು ನಿರ್ವಹಣೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿ.ಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ನಾ ನಿನ್ನ ಬಿಡಲಾರೆ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಭೈರತಿ ರಣಗಲ್(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಪುಷ್ಪಾ–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಬಘೀರ (ಕ)	4 ಪ್ರದರ್ಶನಗಳು
ಸಂಗಂ	
ಪುಷ್ಪಾ–2 (ತೆ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಜೀಬ್ರಾ (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಪುಷ್ಪಾ 2 (ಕ): ಬೆ.9.45ಕ್ಕೆ, ಮ.1.45ಕ್ಕೆ, ಪುಷ್ಪಾ 2 (ಹಿಂ): ಸಂ.5.50ಕ್ಕೆ, ಪುಷ್ಪಾ 2 (ತೆ): ರಾ.9.50ಕ್ಕೆ.
ಸ್ಕ್ರೀನ್ 2	ಮೋನಾ 2 (3ಡಿ)(ಇಂ): ಬೆ.11ಕ್ಕೆ, ಮ.3.45ಕ್ಕೆ, ಸಂ.6ಕ್ಕೆ, ಸೋಲೋ ಲೀವಿಂಗ್ ರಿವಾಕ್ (ಜ): ಮ.1.10ಕ್ಕೆ, ಪುಷ್ಪಾ 2 (ತೆ): ರಾ.8.10ಕ್ಕೆ.
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.25ಕ್ಕೆ, ಭೈರತಿ ರಣಗಲ್ (ಕ): ಮ.1.05ಕ್ಕೆ, ಹರಿದಾಸರ ದಿನಚರಿ (ಕ): ಸಂ.4ಕ್ಕೆ, ಪುಷ್ಪಾ 2 (ಕ): ಸಂ.6.15ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.10ಕ್ಕೆ, ಮ.2.10ಕ್ಕೆ, ಸಂ.6.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ.
ಸ್ಕ್ರೀನ್ 2	ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ.
ಸ್ಕ್ರೀನ್ 4	ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ.


ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ



ಶ್ರೀ ರಾಮಾನುಜ ಅಭ್ಯುದಯ ಸಹಕಾರ ಸಂಘದ 2024–2029ನೇ ಸಾಲಿನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಹೆಚ್.ಕೆ.ರಾಜಗೋಪಾಲ್, ಉಪಾಧ್ಯಕ್ಷರಾಗಿ ಹೆಚ್.ವಿ.ಎಲ್.ಎನ್.ಆಚಾರ್, ನಿರ್ದೇಶಕರಾಗಿ ಸಂಘದ ಮಾಜಿ ಉಪಾಧ್ಯಕ್ಷ ಪುಟ್ಟಸ್ವಾಮಿ, ಯೋಗಾನರಸಿಂಹ (ಮುರಳಿ), ಯತೀರಾಜ ಸಂಪತ್ ಕುಮಾರ್, ರಾಮಸ್ವಾಮಿ, ಟಿ.ಎಸ್.ಅರುಣ್, ಕೇಶವಮೂರ್ತಿ, ಅನಂತಕೃಷ್ಣ, ಶ್ರೀನಿವಾಸಪ್ರಸಾದ್, ಚಕ್ರಪಾಣಿ, ಆಂಡಾಳ್, ಅನುರಾಧ ಅವಿರೋಧ ಆಯ್ಕೆಯಾದರು.

ದೇಶ - ವಿದೇಶ

ಡಮಾಸ್ಕಸ್‌ಗೆ ಬಂಡುಕೋರರ ಪ್ರವೇಶ, ಸಿರಿಯಾ ಅಧ್ಯಕ್ಷ ದೇಶದಿಂದ ಪಲಾಯನ



ಬೈರತ್: ಸಿರಿಯಾದಲ್ಲಿ ಅಧ್ಯಕ್ಷ ಬಶರ್ ಅಲ್–ಅಸ್ಸಾದ್ ಆಡಳಿತ ಅಂತ್ಯಗೊಂಡಿದೆ ಎಂದು ಸಿರಿಯಾದ ಬಂಡಾಯ ಗುಂಪು ಹೇಳಿಕೊಂಡಿದೆ. ಬಂಡುಕೋರರು ಡಮಾಸ್ಕಸ್ ಪ್ರವೇಶಿಸಿದ ಬಳಿಕ ಸಿರಿಯಾ ಅಧ್ಯಕ್ಷ ದೇಶ ತೊರೆದು ಬೇರೆಡೆಗೆ ಪಲಾಯನ ಮಾಡಿದ್ದಾರೆ ಎಂದು ರಾಯ್ಟರ್ಸ್ ವರದಿ ಮಾಡಿದೆ. ಈ ಕುರಿತು 'ಅಸೋಸಿಯೇಟ್ ಪ್ರೆಸ್' ಜೊತೆ ಮಾತನಾಡಿದ ಸಿರಿಯಾದ ಮಾನವ ಹಕ್ಕುಗಳ ವೀಕ್ಷಣಾಲಯದ ಮುಖ್ಯಸ್ಥ ರಾಮಿ ಅಬ್ದುಲ್ ರೆಹಮಾನ್, ಅಸ್ಸಾದ್ ಅವರು ಇಂದು ಮುಂಜಾನೆ ವಿಮಾನದ ಮೂಲಕ ತೆರಳಿದ್ದಾರೆ ಎಂದರು. ಅಸ್ಸಾದ್ ರಷ್ಯಾ ಅಥವಾ ಟೆಹರಾನ್‌ಗೆ ಹೋಗಿರಬಹುದು ಎಂದು ಹೇಳಲಾಗುತ್ತಿದೆ. ಆದರೆ, ಈ ಬಗ್ಗೆ ಇನ್ನೂ ಅಧಿಕೃತ ಮಾಹಿತಿ ಹೊರಬಿದ್ದಿಲ್ಲ. ಬಶರ್ ಅಲ್–ಅಸ್ಸಾದ್ ರಷ್ಯಾದ ಸರಕು ವಿಮಾನದಲ್ಲಿ ಸಿರಿಯಾವನ್ನು ತೊರೆದಿದ್ದಾರೆ ಮತ್ತು ಅಸ್ಸಾದ್ ಅವರ ವಿಮಾನವು ರಾಡಾರ್‌ನಿಂದ ಕಾಣೆಯಾಗಿದೆ. ಸಿರಿಯಾದ ಪ್ರಧಾನಿ ಮೊಹಮ್ಮದ್ ಗಾಜಿ ಜಲಾಲಿ ತಮ್ಮ ಮನೆಯಿಂದಲೇ ವೀಡಿಯೊ ಹೇಳಿಕೆಯನ್ನು ಬಿಡುಗಡೆ ಮಾಡಿದರು ಮತ್ತು ಅವರು ದೇಶದಲ್ಲಿಯೇ ಉಳಿದು ಅಧಿಕಾರದ ಸುಗಮ ಹಸ್ತಾಂತರಕ್ಕೆ ಶ್ರಮಿಸುವುದಾಗಿ ಹೇಳಿದ್ದಾರೆ. ಬಂಡುಕೋರರ ಗುಂಪು ಸಿರಿಯಾದಲ್ಲಿ ಆಕ್ರಮಣವನ್ನು ಘೋಷಿಸಿದೆ.

ಮಹಾಯುತಿ ಸರ್ಕಾರದ ಪ್ರಮಾಣ ವಚನ ವೇಳೆ 12 ಲಕ್ಷ ಮೌಲ್ಯದ ವಸ್ತುಗಳು ಕಳವು

ಮುಂಬೈ: ದಕ್ಷಿಣ ಮುಂಬೈನ ಆಜಾದ್ ಮೈದಾನದಲ್ಲಿ ಡಿ.5ರಂದು ಮಹಾಯುತಿ ಸರ್ಕಾರದ ಪ್ರಮಾಣ ವಚನ ಸಮಾರಂಭ ನಡೆಯಿತು. ಈ ಸಮಾರಂಭದಲ್ಲಿ ದೇವೇಂದ್ರ ಫಡ್ನವಿಸ್ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದರೆ, ಏಕನಾಥ್ ಶಿಂಧೆ ಮತ್ತು ಅಜಿತ್ ಪವಾರ್ ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಈ ಸಮಯದಲ್ಲಿ ಕಳ್ಳರು ತಮ್ಮ ಕೈಚಳಕವನ್ನು ತೋರಿಸಿದ್ದು, ಬರೋಬ್ಬರಿ ಒಟ್ಟು 12 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ಕಳ್ಳತನ ಮಾಡಿದ್ದಾರೆ. ಈ ಸಮಾರಂಭದಲ್ಲಿ ಪ್ರಧಾನಿ ಮೋದಿ ಅವರಲ್ಲದೆ, ಉದ್ಯಮ, ಚಿತ್ರರಂಗ ಮತ್ತು ರಾಜಕೀಯದ ಪ್ರಮುಖರು ಉಪಸ್ಥಿತರಿದ್ದರು. ಆದರೆ, ಪ್ರಮಾಣ ವಚನ ಸ್ವೀಕಾರ ಸಮಾರಂಭದ ಭದ್ರತೆಗಾಗಿ 4 ಸಾವಿರಕ್ಕೂ ಹೆಚ್ಚು ಪೊಲೀಸರನ್ನು ಸ್ಥಳ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಯೋಜಿಸಲಾಗಿತ್ತು ಹೀಗಿದ್ದರೂ 12 ಲಕ್ಷ ಮೌಲ್ಯದ ವಸ್ತುಗಳನ್ನು ಕಳ್ಳತನ ಮಾಡಿರುವ ಪ್ರಕರಣಗಳು ಬೆಳಕಿಗೆ ಬಂದಿವೆ. ಈ ಸಂಬಂಧ ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಆಜಾದ್ ಮೈದಾನ್ ಪೊಲೀಸ್ ಠಾಣೆ ಅಧಿಕಾರಿ ತಿಳಿಸಿದ್ದಾರೆ. ಚಿನ್ನದ ಸರಗಳು, ಫೋನ್‌ಗಳು ಮತ್ತು ಪರ್ಸ್‌ಗಳನ್ನು ಕಳ್ಳರು ಕದ್ದಿದ್ದಾರೆ. ಗೇಟ್ ಸಂಖ್ಯೆ ಎರಡರಿಂದ ಜನರು ಹೊರಹೋಗುತ್ತಿದ್ದಾಗ ಕಳ್ಳರು ಕಳವು ಮಾಡಿದ್ದಾರೆ ಎಂದು ಅಧಿಕಾರಿ ಹೇಳಿದರು.

ಮತ್ತೆ ಕಾಣಿಸಿಕೊಂಡ ಉಗ್ರ ಮಸೂದ್ ಅಜರ್; ಜೈಶ್ ಮುಖ್ಯಸ್ಥನ ವಿರುದ್ಧ ಕಠಿಣ ಕ್ರಮಕ್ಕೆ ಭಾರತ ಆಗ್ರಹ

ಇಸ್ಲಾಮಾಬಾದ್: ಆರ್ಥಿಕ ಸಂಕಷ್ಟ, ಆಂತರಿಕ ಸಂಘರ್ಷ ಹಾಗೂ ಉಗ್ರವಾದದಿಂದ ಈಗಾಗಲೇ ಇಡೀ ಜಗತ್ತಿನ ಮುಂದೆ ಬೆತ್ತಲಾಗಿರುವ ಪಾಕಿಸ್ತಾನ ತನ್ನ ನರಿ ಬುದ್ಧಿಯನ್ನು ಮತ್ತೊಮ್ಮೆ ಪ್ರದರ್ಶಿಸಿದೆ. ಇದಕ್ಕೆ ಸಾಕ್ಷಿ ಎಂಬಂತೆ 2001ರ ಸಂಸತ್ ದಾಳಿ ಮಾಸ್ಟರ್ ಮೈಂಡ್ ನಿಷೇಧಿತ ಭಯೋತ್ಪಾದಕ ಸಂಘಟನೆ ಜೈಶ್–ಎ–ಮೊಹಮ್ಮದ್ ಮುಖ್ಯಸ್ಥ ಮಸೂದ್ ಅಜರ್ ಬರೋಬ್ಬರಿ 2 ದಶಕಗಳ ಬಳಿಕ ಪಾಕಿಸ್ತಾನದಲ್ಲಿ ಪ್ರತ್ಯಕ್ಷನಾಗಿದ್ದಾನೆ.

ಎರಡು ದಶಕಗಳ ನಂತರ ಮೊದಲ ಬಾರಿಗೆ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದಲ್ಲಿರುವ ಬಹವಾಲ್‌ಪುರದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿರುವ ಮಸೂದ್ ಅಜರ್, ಭಾರತದ ವಿರುದ್ಧ ನಾಲಿಗೆ ಹರಿಬಿಟ್ಟಿದ್ದಾನೆ, ಭಾರತದ ವಿರುದ್ಧ ನಮ್ಮ ದಾಳಿಯನ್ನು ಮುಂದುವರಿಸಲಾಗುವುದು ಎಂದು ಹೇಳಿದ್ದಲ್ಲದೇ, ಪ್ರಧಾನಿ ಮೋದಿ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ವಿರುದ್ಧವೂ ಮಾತನಾಡಿದ್ದಾನೆ. ಮಸೂದ್ ಅಜರ್ ಹೇಳಿಕೆ ಹೊರ ಬೀಳುತ್ತಿದ್ದಂತೆ ಕಿಡಿಕಾರಿರುವ ಭಾರತ ಆತನ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿದೆ. ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಸುದ್ದಿಗೋಷ್ಠಿ ನಡೆಸಿ ಕಿಡಿಕಾರಿದ್ದಾರೆ.

ಭದ್ರತೆ ನೀಡಬೇಕಿದ್ದ ಪೊಲೀಸ್ ಶಸ್ತ್ರಾಗಾರದಲ್ಲೇ 200 ಬುಲೆಟ್ ಕಳವು



ಭೋಪಾಲ್: ಮಧ್ಯಪ್ರದೇಶ ಪೊಲೀಸ್ ಶಸ್ತ್ರಾಗಾರದಲ್ಲೇ ಕಳ್ಳತನ ನಡೆದಿದ್ದು, 9ಎಂಎಂ ಪಿಸ್ತೂಲ್ ಹಾಗೂ ಸ್ವಯಂಚಾಲಿತ ರೈಫಲ್‌ಗಳ 200 ಕಾರ್ಟ್ರಿಜ್‌ಗಳು ನಾಪತ್ತೆಯಾಗಿವೆ. ಮಧ್ಯಪ್ರದೇಶದ ಮೊರೆನಾ ಜಿಲ್ಲೆಯ ಪೊಲೀಸ್ ವಿಶೇಷ ಸಶಸ್ತ್ರ ಪಡೆಗಳ ವಿಭಾಗದ ಶಸ್ತ್ರಾಗಾರಗಳಲ್ಲಿ ಈ ಕಳ್ಳತನ ನಡೆದಿದೆ. ಶನಿವಾರ ಈ ಘಟನೆ ಬೆಳಕಿಗೆ ಬಂದ ನಂತರ ಎಸ್‌ಎಎಫ್‌ನ 2 ಮತ್ತು 5 ನೇ ಬೆಟಾಲಿಯನ್‌ನ ಕಮಾಂಡೆಂಟ್‌ಗಳು ತಮ್ಮ ಕಂಪನಿಯ ಕಮಾಂಡರ್‌ಗಳನ್ನು ಅಮಾನತುಗೊಳಿಸಿದ್ದಾರೆ ಎಂದು ಮೊರೆನಾ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಗೋಪಾಲ್ ಧಕಡ್ ತಿಳಿಸಿದ್ದಾರೆ. ಶಸ್ತ್ರಾಗಾರದ ಗಾರ್ಡ್‌ಗಳು ಕಳ್ಳತನದ ಬಗ್ಗೆ ಪೊಲೀಸ್ ಲೈನ್‌ಗಳ ಮೀಸಲು ನಿರೀಕ್ಷಕರಿಗೆ ಮಾಹಿತಿ ನೀಡಿದ ನಂತರ ಕೊತ್ವಾಲಿ ಪೊಲೀಸ್ ಠಾಣೆಯಲ್ಲಿ FIR ದಾಖಲಾಗಿದೆ ಎಂದು ಅಧಿಕಾರಿ ಹೇಳಿದರು.

ಎಸ್‌ಎಎಫ್‌ನ ಎರಡು ಶಸ್ತ್ರಾಸ್ತ್ರಗಳಿಂದ ಪಿಸ್ತೂಲ್‌ಗಳನ್ನು ಕಳವು ಮಾಡಲಾಗಿದೆ ಎಂಬ ಮಾಹಿತಿಯನ್ನು ಪೊಲೀಸ್ ಅಧಿಕಾರಿಗಳು ನಿರಾಕರಿಸಿದ್ದಾರೆ. ಘಟನೆ ಬೆನ್ನಲ್ಲೇ ಚಂಬಲ್ ವಲಯ ಪೊಲೀಸ್ ಮಹಾನಿರೀಕ್ಷಕ ಸುಶಾಂತ್ ಸಕ್ಸೇನಾ ಸ್ಥಳ ಪರಿಶೀಲನೆ ನಡೆಸಿದ್ದಾರೆ.

ಸಂಭಾಲ್ ವಿಚಾರದಲ್ಲಿ ಪೊಲೀಸರನ್ನು ಪ್ರಶಂಶಿಸಿದ ಮಹಿಳೆಗೆ ತ್ರಿವಳಿ ತಲಾಖ್

ಮೊರಾದಾಬಾದ್: ಉತ್ತರ ಪ್ರದೇಶದ ಮೊರಾದಾಬಾದ್‌ನ 36 ವರ್ಷದ ಮಹಿಳೆಯೊಬ್ಬರು ಸಂಭಾಲ್ ಜಿಲ್ಲೆಯಲ್ಲಿ ಇತ್ತೀಚೆಗೆ ಶಾಹಿ ಜಾಮಾ ಮಸೀದಿಯ ಸಮೀಕ್ಷೆಯ ಸಂದರ್ಭ ನಡೆದ ಹಿಂಸಾಚಾರವನ್ನು ನಿರ್ವಹಿಸುವಲ್ಲಿ ಪೊಲೀಸರ ಪಾತ್ರವನ್ನು ಶ್ಲಾಘಿಸಿದ ನಂತರ, ಅವರ ಪತಿ ತ್ರಿವಳಿ ತಲಾಖ್ ನೀಡಿದ್ದಾನೆ ಎಂದು ಆರೋಪಿಸಿ ಮಹಿಳೆಯೋರ್ವರು ಅವರ ಪತಿ ಮತ್ತು ಅತ್ತೆಯ ವಿರುದ್ಧ ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಿದ್ದಾರೆ.

ಸಂಭಾಲ್‌ನಲ್ಲಿ ದೊಡ್ಡ ಪ್ರಮಾಣದ ಹಿಂಸಾಚಾರಕ್ಕೆ ಕಡಿವಾಣ ಹಾಕುವಲ್ಲಿ ಪೊಲೀಸರ ಪಾತ್ರ ಶ್ಲಾಘನೀಯ ಎಂದು ತನ್ನ ಕುಟುಂಬಕ್ಕೆ ಹೇಳಿದ್ದೆ ಎಂದು ಮಹಿಳೆ ಹೇಳಿದ್ದಾರೆ. ಆದರೆ ಈ ಹೇಳಿಕೆಯಿಂದ ಆಕೆಯ ಪತಿ ತ್ರಿವಳಿ ತಲಾಖ್ ಅನ್ನು ಉಚ್ಚರಿಸುವ ಮೂಲಕ ಅವರ ದಾಂಪತ್ಯ ಜೀವನವನ್ನು ಕೊನೆಗೊಳಿಸಿದ್ದಾರೆ. ಈ ಘಟನೆಯನ್ನು ಮೊರಾದಾಬಾದ್‌ನ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಎಸ್‌ಪಿ) ಸತ್ಪಾಲ್ ಅಂತಿಲ್ ಖಚಿತಪಡಿಸಿದ್ದು, ಹೆಚ್ಚಿನ ತನಿಖೆಗಾಗಿ ಮಹಿಳೆ ದೂರನ್ನು ಮಹಿಳಾ ಪೊಲೀಸ್ ಠಾಣೆಗೆ ರವಾನಿಸಲಾಗಿದೆ ಎಂದು ಹೇಳಿದರು. ಇನ್ನು ಭಾರತೀಯ ಕಾನೂನಿನ ಪ್ರಕಾರ, ತ್ರಿವಳಿ ತಲಾಖ್ ಅಪರಾಧವಾಗಿದ್ದು, ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಮೊರಾದಾಬಾದ್‌ನ ಮಹಿಳಾ ಠಾಣೆಯ ಮಹಿಳಾ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

BEFORE THE HONOURABLE VI ADDL DISTRICT AND SESSIONS JUDGE AT MYSURU

P & SC NO.85/2024

PETITIONER : SHWETHA. S V/S
RESPONDENTS : NIL

PAPER PUBLICATION

1, Shwetha. S W/o Srinath. M. B, Residing at No.S/77, Behind S M S School, Srirampura 2nd Stage, Mysore, do hereby notify that I am executing the will testated by Late. Sri. B.K Dwarakanath dated 05/01/2008, with respect to suit schedule property which is more fully described in the schedule below. Any person having any objections to this petition or any claim related to the said will is hereby notified to approach the Honourable VI Additional District And Sessions Judge at Mysore in person or through an advocate in the above case on 04-01-2025 at about 11.00 a.m if you are intended to contest if you failed to appear, the Petition will be dealt in your absence in accordance with law.

Given under my hand and seal of the court on this day 04/12/ 2024.

SCHEDULE: All Piece and parcel of property bearing No. L.I.G 10, New Kantha Raj Urs Road, HUDKO of house C.I.T.B, Kuvempunagar, Mysore, measuring east to west 7.40 metre's and north to south 8.40 metre's, totally measuring 62.16 square metres, consisting 54.99 Square metres of RCC Roofing and red oxide flooring residential house and bounded by: EAST : L.I.G No.11. WEST: L.I.G No.09, NORTH: Road, SOUTH : L.I.G No.14

BY ORDER OF THE COURT, Sd/- Chief administration officer, Principal District and Sessions Court at Mysuru

Date: 02/12/24, Place: Mysuru
Advocate for Petitioner, Sd/- R.Vidya, KAR No. 119/2022, #664, Bogadi Ashraya, Rajajinagar, Mysore-570026, Mob:6362523518

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ಸಿಟಿ. ಹಿನಕಲ್, ಆಶ್ರಮ ರಸ್ತೆ, 4ನೇ ಕ್ರಾಸ್, ನಂ. 826 ಮಂಜುನಾಥ್.ಎಸ್.ಎಂ. ರವರ ಹೆಂಡತಿ ಹೇಮಾಲತಾ ಕೆ.ಎಸ್. ರವರು ಷೆಡ್ಯೂಲ್ ಸ್ವತ್ತಿನ ಸಂಪೂರ್ಣ ಮಾಲೀಕರಾಗಿದ್ದು, ಸ್ವತ್ತನ್ನು ನಮ್ಮ ಕಕ್ಷಿದಾರರ ತಾಯಿ ಚಿಕ್ಕತಾಯಮ್ಮ ರವರು ದಿನಾಂಕ 17-11-2020 ರಂದು ನೊಂದಾಯಿತ ದಾನ ಪತ್ರದ ಮುಖಾಂತರ ದಾನ ಮಾಡಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತನ್ನು ಚಿಕ್ಕತಾಯಮ್ಮ ರವರು ದಿನಾಂಕ: 22-09-1995 ರಂದು ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಕಾಟೂರು ಗ್ರಾಮದ ಕೆ.ಎಂ. ಶಿವಪ್ಪ ಮತ್ತು ಅವರ ಕುಟುಂಬದವರಿಂದ ನೊಂದಾಯಿತ ಕ್ರಯ ಪತ್ರದ ಮುಖಾಂತರ ಖರೀದಿಸಿದ್ದು, ಅಲಾಗಾಯ್ತು ಅವರು ಖಾತೆ ಬದಲಾವಣೆ ಮಾಡಿಸಿಕೊಂಡು ಸ್ವಾಧೀನಾನುಭವದಲ್ಲಿರುವ ಸ್ವತ್ತಾಗಿರುತ್ತದೆ. ಸದರಿ ಕ್ರಯಪತ್ರದ ಮೂಲ ಪ್ರತಿಯನ್ನು ದಾನ ಪತ್ರದ ಜೊತೆ ನಮ್ಮ ಕಕ್ಷಿದಾರರಿಗೆ ನೀಡಿರುತ್ತಾರೆ. ನಮ್ಮ ಕಕ್ಷಿದಾರರು ದಿನಾಂಕ: 04/12/2024 ರ ಸಂಜೆ 5 ಗಂಟೆ ಸಮಯದಲ್ಲಿ ಮೂಲ ಪ್ರತಿಯನ್ನು ಜೆರಾಕ್ಸ್ ಮಾಡಿಸುವ ಸಲುವಾಗಿ ಹಿನಕಲ್‌ನ ಅಂಗಡಿ ಒಂದಕ್ಕೆ ಹೋಗಿದ ಸಂದರ್ಭದಲ್ಲಿ ಕಳೆದುಕೊಂಡಿರುತ್ತಾರೆ ಎಲ್ಲಾ ಕಡೆ ಹುಡುಕಿದರು. ಸಹ ಸಿಕ್ಕಿರುವುದಿಲ್ಲ. ಈ ಸಂಬಂಧ ದಿನಾಂಕ: 06/12/2024 ರಂದು ವಿಜಯನಗರ ಪೋಲೀಸ್ ಠಾಣೆಯಲ್ಲಿ ದೂರ ಸಹ ದಾಖಲಿಸಿರುತ್ತಾರೆ. ಸದರಿ ಅಸಲು ಕ್ರಯಪತ್ರವು ಯಾರಿಗಾದರು ಸಿಕ್ಕಿದ್ದಲ್ಲಿ ಅವನ್ನು ಈ ಕೆಳಕಂಡ ವಕೀಲರಿಗೆ ಹಿಂದಿರುಗಿಸಬೇಕೆಂತಲೂ ಹಾಗೂ ಈ ಸಂಬಂಧ ಈ ಸಾರ್ವಜನಿಕ ಪ್ರಕಟಣೆಯನ್ನು ನೀಡುತ್ತಿದ್ದಾರೆ. ಹಾಗೂ ಸದರಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ವ್ಯಕ್ತಿಗಳು/ ಸಂಘ– ಸಂಸ್ಥೆಗಳು ಅಥವಾ ಸೆಡ್ಯೂಲ್ ಸ್ವತ್ತಿನ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ವಾರಸು, ಮಾಲೀಕತ್ವ ಹಾಗೂ ಇನ್ನಿತರ ಯಾವುದೇ ರೀತಿಯ ಮಾಲೀಕತ್ವವನ್ನು ಹೊಂದಿದ್ದಂತಹ ಪಕ್ಷದಲ್ಲಿ ಅಂತಹ ವ್ಯಕ್ತಿಗಳು ಈ ಕೆಳಗಿನ ವಕೀಲರ ವಿಳಾಸಕ್ಕೆ ಸೂಕ್ತ ದಾಖಲಾತಿಗಳ ಸಮೇತ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಈ ಸಾರ್ವಜನಿಕ ಪ್ರಕಟಣೆ ಪ್ರಕಟವಾದ ದಿನದಿಂದ 7 ದಿನಗಳ ಒಳಗಾಗಿ ಲಿಖಿತವಾಗಿ ತಮ್ಮ ತಕರಾರನ್ನು ಸಲ್ಲಿಸುವಂತೆ ಸೂಚಿಸಲಾಗಿದೆ ಒಂದು ವೇಳೆ ಮೇಲೆ ತಿಳಿಸಿದಂತಹ ಅವಧಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಾರದೆ ಇದ್ದಂತಹ ಪಕ್ಷದಲ್ಲಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಕ್ರಯದ ವ್ಯವಹಾರವನ್ನು ಪೂರ್ಣಗೊಳಿಸುತ್ತಾರೆ ಎನ್ನಂತಲೂ ಮತ್ತು ನಂತರ ಬರುವಂತಹ ಯಾವುದೇ ಆಕ್ಷೇಪಣೆಗಳಿಗೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲವೆಂತಲೂ ಈ ಮೂಲಕ ತಿಳಿಯಪಡಿಸಲಾಗುತ್ತಿದೆ.


ಷೆಡ್ಯೂಲ್

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ಕಾಟೂರು: ಗ್ರಾಮದಲ್ಲಿರುವ ಸರ್ವೆ ನಂ. 337/4 ಕ್ಕೆ ವಿಸ್ತೀರ್ಣ 1 ಎಕರೆ ಜಮೀನಿಗೆ ಚಕ್ಕುಬಂದಿ:- ಪೂರ್ವಕ್ಕೆ : ಜಯಮ್ಮ ರವರ ಜಮೀನು ; ಪಶ್ಚಿಮಕ್ಕೆ: ಸರ್ಕಾರಿ ಓಣಿ ; ಉತ್ತರಕ್ಕೆ: ಮಂಡ್ಯದ ಮಲ್ಲಪ್ಪ ರವರ ಜಮೀನು ; ದಕ್ಷಿಣಕ್ಕೆ: ಮೂಗನಹುಂಡಿ ಮಲ್ಲಪ್ಪ ರವರ ಜಮೀನು.

ಸಹಿ/- ಎಂ. ಭಾನುಮತಿ, ವಕೀಲರು
15ನೇ ಕ್ರಾಸ್, ಅರಿಹಂತ ಕಾಂಪ್ಲೆಕ್ಸ್, ಎಂ.ಜಿ.ಎಸ್. ರಸ್ತೆ, ನಂಜನಗೂಡು.
Mob: 9743647762

ದಿನಾಂಕ: 7-12-2024


ಚಿರಸ್ಮರಣೆ



ಪುತ್ರಶೋಕ ನಿರಂತರ ಪ್ರೀತಿಯ ಮಗನ ನೆನಪಿನಲ್ಲಿರುವ ನಿನ್ನ ತಾಯಿ, ತಂದೆ ಗಾಯತ್ರಿ ನಾರಾಯಣ ಗೌಡ ಅಕ್ಕ ಹೆಚ್.- ಎನ್.ವೀಣಾ, ತಂಗಿ ಹೆಚ್.ಎನ್.ವಾಣಿ

ಹೆಚ್.ಎನ್.ಶ್ರೀಕಾಂತ್
ಜನನ: 02.10.1980 | ಮರಣ: 9.12.2004

4ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎಂ. ಶಿವಸ್ವಾಮಿರವರು
ಮಾಲೀಕರು, ವಿಷ್ಣೇಶ್ವರ ಸೆಕ್ಯೂರಿಟಿ ಸರ್ವೀಸಸ್,
ನಿಧನ : 09-12-2020
ನೀವು ನಮ್ಮನ್ನಗಲಿ ಇಂದಿಗೆ 4 ವರ್ಷಗಳಾಯಿತು ನಿಮ್ಮ ಆದರ್ಶ ಮತ್ತು ನೀವು ಹಾಕಿಕೊಟ್ಟ ಮಾರ್ಗದರ್ಶನವೇ ನಮಗೆ ದಾರಿದೀಪ
ಸದಾ ನಿಮ್ಮ ಸ್ಮರಣೆಯಲ್ಲಿರುವ
ಮೃತರ ಪತ್ನಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು,

ಮೈಸೂರು ಮಿತ್ರ 45
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

